ದೇಶಾಂತರಗಳಿಂದ

ತೊಗ್ಲಿಯಾಟಿಯವರ

ನೋಡಬಹುದು. ಆದರೆ ಸಂರಕ್ಷಣ ಮಂತ್ರಿ.

ಟ್ರೂಮನ್ನರ ಹುರಿಯಾಳುತನ

ಅಮೇರಿಕದ ಡೆಮೊಕ್ರಾಟಿಕ್ ಪಕ್ಷವು ಟ್ರೂಮನ್ನರನ್ನು ಅಧ್ಯಕ್ಷ ಚುನಾವಣೆಗೆ ನಿಲ್ಲಿಸಲು ಆರಿಸಿದ್ದು ಸ್ಪಷ್ಟವಿದೆ. ಅಲ್ಲದೆ ಅವರು ಉಪಾಧ್ಯಕ್ಷ ಪದವಿಗೆ ಶ್ರೀಮತಿ ರೂಸ್ವೆಲ್ಟರನ್ನು ಹೆಸರಿಸಿದ ಸುದ್ದಿಯೂ ಆಗಲೆ ಬಂದಿದೆ ಟ್ರೂಮನ್ನರ ಚುನಾವಣೆಯ ಘೋಷಣೆಯಲ್ಲಿ ನಿಗ್ರೋಗಳಿಗೆ ಎಲ್ಲರಂತೆ ಎಲ್ಲ ನಾಗರಿಕ ಹಕ್ಕುಗಳನ್ನೂ ಕೊಡಲಾಗುವುದು ಎಂದಿರುವುದರ ವಿರುದ್ಧ ದಕ್ಷಿಣದ ಡೆಮೊಕ್ರಾಟರು ಪ್ರಚಾರ

ವಿಚಿತ್ರವಿಶ್ವ

ಸಂಪಾದಕರ ಸುಡುಗಾಡು

ಸಯಾಮಿನ ಸಂಪಾದಕರು 'ಲೇಖನಿಗಿಂತ ಕೋವಿಯೇ ಹೆಚ್ಚಿನದು' ಎಂಬ ಗೊತ್ತುವಳಿಯನ್ನು ಸ್ವೀಕರಿಸಿ ಯಾವನಾದರೊಬ ...

ಕರ್ಮವೀರ

ಹುಬ್ಬಳ್ಳಿ ತಾ. ೨೭—೭—


ಸಂಪುಟ ೨೦]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— ...
ರಂ. ರಾ. ದಿವಾಕರ

... ಅನನೇ. ಹಿಂದೂ ಧರ್ಮದಲ್ಲಿ ಪರಮಾತ್ಮನ ಹೆಸರುಗಳು ಅನೇಕಾನೇಕ ಇರುವವು. ಇಸ್ಲಾಮೀ ಧರ್ಮದಲ್ಲಿ ಯಾವರೂ ಅಷ್ಟೇ. ಇದಕ್ಕೆ ಕಾರಣವುಂಟು. ಮಾನವನು ಅಲ್ಪಮತಿಯು. ಅವನದು ಅಳಿಲ ಭಕ್ತಿ. ಆ ಭಕ್ತಿಯನ್ನು ವ್ಯಕ್ತಪಡಿಸಲು, ಪರಮಾತ್ಮನನ್ನು ಅನೇಕ ನಾಮರೂಪದಿಂದ ಸಂಬೋಧಿಸುವನು. ನಾಮುಗಳ ಮೇಲಿಂದ ಆತನ ವ್ಯಕ್ತಿತ್ವ ಪ್ರಕಟವಾಗಲರಿಯದು. ಆತನು ರೂಪಾತೀತನು, ಅವರ್ಣನೀಯನು, ಅಳತೆ ಮೀರಿದವನು. ಇಂತಹ ಸರ್ವಾಂತರ್ಯಾಮಿಯಾದ ಪರಮಾತ್ಮನಲ್ಲಿ ಅಚಲವಾದ ಶ್ರದ್ಧೆಯನ್ನಿಡಬೇಕು. ಅಂದರೆ ಸಕಲ ಧರ್ಮಗಳ ವಿಷಯವಾಗಿ ಸಮಾನವಾದ ಆದರ ಇರಬೇಕು. ಪರರ ಧರ್ಮಕ್ಕಿಂತಲೂ, ನನ್ನ ಧರ್ಮವು ಶ್ರೇಷ್ಠವಾದುದು ಎಂಬ ಭಾವನೆಗೆ ಇಂಬುಗೊಡಬಾರದು. ಪರಧರ್ಮದವರು ನಮ್ಮ ಧರ್ಮದಲ್ಲಿ ಸೇರಬೇಕೆಂಬ ದುರಾಶೆ ಇರಬಾರದು. ಹೀಗೆ ಧರ್ಮಾಂತರ ಮಾಡಿಸುವುದು ನ್ಯಾಯಸಮ್ಮತವಾದುದಲ್ಲ. ಅದು ಹದಗೆಟ್ಟ ಹಾಳ್ತೆ ಎನಿಸುವುದು.



ಲೆಫ್ಟಿನೆಂಟ ಜನರಲ್ ಸರ್ ಆರ್ಚಿಬಾಲ್ಡ ನೈ

ಈಗ ಮದ್ರಾಸಿನ ಗವರ್ನರರಾಗಿರುವ ನೈಯವರು ನಾಳೆ ನವಂಬರದಿಂದ ಭಾರತದಲ್ಲಿ ಬ್ರಿಟಿಶ ಹೈಕಮೀಶನರರಾಗಿ ನೇಮಕ ಹೊಂದಿದ್ದಾರೆ. ಲಾರ್ಡ ಮೌಂಟಬ್ಯಾಟನ್ನರನ್ನು ಬಿಟ್ಟರೆ ಭಾರತದಲ್ಲಿ ನೈಯವರೇ ಎಲ್ಲರಿಗಿಂತ ಜನಪ್ರಿಯ ಬ್ರಿಟಿಶರೆಂದು ಹೇಳಬಹುದಾಗಿಯಲ್ಲ.

KARMAVEER

ಚಿಕ್ಕಕತೆ ಶ್ರೀವ ಕಾ ಶಿ

ಲೇಖಕ:–

[ಶ್ರೀಕೃಷ್ಣ ಪಾಟೀಲ ಕಲಾಮಂಟಪ ಬೆಳಗಾವಿ]

★

ಶಿವಕಾಶಿಯ ಮದುವೆಯು ಒಂದು ವಿಚಿತ್ರ ಸನ್ನಿವೇಶದ ಗದ್ದಲದಿಂದ ಮುಂದೆ ಸಾಗಿತು. ತಂದೆ–ತಾಯಂದಿರು ಮಗಳ ಮದುವೆಯ ಸಂಬಂಧ ಒಂದು ಮಾತು ಸಹ ಆಡಲು ಅಸಹಾಯರಾಗಿದ್ದರು. ಆದರೆ ಪಟ್ಟಣವಾಸಿಗಳು ಆಡುವ ನೂರು ಸುದ್ದಿಗಳಿಗೆ ಕಿವಿಮುಚ್ಚಿಕೊಂಡು ಕುಳಿತರೆ ನಡೆದೀತೇ? ತಂದೆ ತನ್ನ ವ್ಯಾವಹಾರಿಕ ಜೀವನದ ಜೊಂಜಾಟದಲ್ಲಿ ಲಕ್ಷ ಪೂರೈಸುತ್ತಿರಲಿಲ್ಲ. ಪೂರೈಸುವ ಲಕ್ಷವನ್ನು ವಿಪರೀತವಾದ ಸರಣಿಯಿಂದ ಜನರ ನಗೆ–ಹೊಗೆಯಲ್ಲಿ ಸಮರಸನಾಗುವನು. ಆದರೆ ತಾಯಿಯ ಜೀವ ಹೀಗಾಗುತ್ತಿರಲಿಲ್ಲ. ಕಣ್ಣೀರು ಉದುರಿಸಿ ಶಿವಕಾಶಿಯ ಭವಿಷ್ಯ ಜೀವನದ ರುದ್ರ–ಭೀಷಣತೆಯ ಚಿತ್ರವನ್ನು ಅವಲೋಕಿಸಿ ಜರ್ಜರಿತಳಾಗುವಳು.

ಒಂದು ದಿನ ನೆರೆಮನೆಯ ವೃದ್ಧ ಸುವಾಸಿನಿಯು ಬಂದು–ಅಕ್ಕ, ಶಿವಕಾಶಿಯ ಮದುವೆಗೆ ಕಾಲಮೀರಿ ಬಂದಿತಲ್ಲವೇ? ಎಂದಳು.

ಅಹುದು ಅಕ್ಕ; ಬ್ರಹ್ಮನಿಗೇ ಚಿಂತೆಯಿಲ್ಲ ದಿದ್ದರೆ ನಮ್ಮ ಚಿಂತೆ ಎಲ್ಲಿಗೆ ಮುಟ್ಟಬೇಕು ಎಂದು ಮೆಲ್ಲಗೆ ನುಡಿದಳು.

ಪಣತೊಟ್ಟು ಗಂಡನನ್ನು ಹುಡುಕುವ ಕಾಲವಿದಲ್ಲ.

ಅಹುದು. ನಾನು ಅವಳ ತಾಯಿಯೆಂದು ನುಡಿಯಲೂ ನನಗೆ ನಾಲಿಗೆಯಿಲ್ಲ. ನೆರೆಮನೆಯವಳೆಂದು ನುಡಿಯ ಬಯಸಿದರೆ ನಿನ್ನಂತೆಯೇ ಆಡಬೇಕು.

ಮಾತಿನ ... ಕುಂಕುಮ ಹಚ್ಚುವೆ ನಿಲ್ಲು ಎಂದು ಶಿವಕಾಶಿಯ ತಾಯಿ ಕುಂಕುಮ ಹಚ್ಚಿ ಕಳಿಸಿದಳು.

ನೆರೆಮನೆಯವರ ಅಣಕು–ಕೆಣಕುವಾತುಗಳಿಂದ ತಾಯಿ ತೀರ ಹಣ್ಣಾದಳು. ಮಗಳು ಮದುವೆಯಾಗಲು ಇನ್ನೂ ಸಿದ್ಧಳಾಗಲಿಲ್ಲ.– ನನ್ನ ಪಣ, ನನ್ನ ಪಣ ಎಂದು ನುಡಿದು ಬಿಡುವಳು.

ಪಣವಾದರು ಎಂಥದು!

ಶಿವಕಾಶಿಯ ತಾತ–ಮುತ್ತಾತಂದರು ಚಿತ್ರಕಲೆಯಲ್ಲಿ ನುರಿತವರು. ದೇವ–ದಾನವರ ಚಿತ್ರಗಳನ್ನು ಬರೆದು ಹೆಸರು ಗಳಿಸಿದವರು. ಊರ ಹಸುಮ–ಲಕ್ಷ್ಮೀದೇವಿಯರಿಗೆ ಅಲಂಕಾರ ಮಾಡಿ ಕಟ್ಟುವ ಕೆಲಸ ಇವರದೆ. ಹಬ್ಬ–ಹುಣ್ಣಿಮೆಯಲ್ಲಿ ವೇಷಕಟ್ಟಿ ಮೆರೆಸುವವರು ಇವರೇ. ಮನೆಯಲ್ಲಿ ಕುದುರೆ, ಸಿಂಹ, ಗರುಡ ಮುಂತಾದವುಗಳ ಅನೇಕ ಸೊಗವಾದ ಬಿದ್ದು ಮುಖಮುಖವಾಡಿಗಳಿಗೆ ಅನ್ನವಾಗಿದ್ದವು. ಶ್ರೀಮಂತರ ಮನೆಯ ಗೋಡೆಯಮೇಲೆ ರಾಧಾಕೃಷ್ಣನ ಅನೇಕ ಕ್ರೀಡಾಚಿತ್ರಗಳು ಇತರ ಹೆಮ್ಮೆಯನ್ನೇ ಹೇಳುತ್ತಿದ್ದವು. ಅವರ ಮನೆಯಲ್ಲಿ ಶಿವಕಾಶಿ ಹುಟ್ಟಿ ಹಿರಿಯರ ಚಿತ್ರಗಳನ್ನು ಅವಲೋಕಿಸಿದ್ದಳು. ಪರಂಪರಾಗತ ಸ್ಫೂರ್ತಿಯನ್ನು ಪಡೆದಿದ್ದಳು. ತಾನೂ ಅನೇಕ ಚಿತ್ರಗಳನ್ನು ಬರೆದು ಸಮಾಜದ ಮುಂದಿಟ್ಟು ಪ್ರಶಂಸಾಪತ್ರಗಳನ್ನು ಪಡೆದಿದ್ದಳು. ಆ ಪ್ರಶಂಸಾಗಾನದಲ್ಲಿ ಬೆಳೆದು ಇಂದು ತರುಣಿಯಾಗಿದ್ದಳು. ಮದುವೆಯ ದಿನಗಳೂ ಸಮೀಪಿಸಿದ್ದವು. ತನಗೊಬ್ಬ ಚಿತ್ರಕೋವಿದ ಸಂಗಾತಿ ಬೇಕೆಂಬುದೇ ಅವಳ ಬಯಕೆ. ಅದು ಯೋಗ್ಯವಾದ ಮಾತು. ಆದರೆ ಈ ವರೆಗೆ ಒಬ್ಬನೂ ಸಿಕ್ಕಲಿಲ್ಲ. ಇದೇ ಊರವರ ಒಂದು ಅಬಲ ಪ್ರಶ್ನೆಯಾಗಿ ಪಣದ ರೂಪವನ್ನು ತಳೆದಿದ್ದಿತು.

ಪ್ರತಿಯ ಚಿತ್ರಶಾಲೆಯಲ್ಲಿ ಅಭ್ಯಾಸಮಾಡುವ ಆತ್ಮಾರಾಮ ಮತ್ತು ಲಕ್ಷ್ಮೀಕಾಂತರೆಂಬ ಇಬ್ಬರು ಅಣ್ಣತಮ್ಮಂದಿರು ಆಕಸ್ಮಾತ್ತಾಗಿ ಬಂದರು. ಅವಳ ಪಣದ ವಿಷಯವನ್ನು ಕೇಳಿದರು. ಆತ್ಮಾರಾಮನಿಗೆ ಬದಾಮಿಯ ಮೇಣಬಸದಿಯನ್ನು ನೋಡುವ ಅವಸರವಿದ್ದಿತು. ಲಕ್ಷ್ಮೀಕಾಂತನು–ಅಣ್ಣ, ನಮ್ಮ ವಿದ್ಯೆಯ ಪರೀಕ್ಷೆಗೆ ಇದೊಂದು ಸಮಯವಿದೆಯಲ್ಲವೆ ಎಂದು ನುಡಿದನು.

ಆತ್ಮಾರಾಮನು ಮುಗುಳು ನಗೆ ನಕ್ಕನು.

ಅಣ್ಣ, ನಮ್ಮನ್ನು ಪರೀಕ್ಷೆಗೆ ಕರೆಯುವವರ ಯೋಗ್ಯತೆಯನ್ನು ನೀನು ಮೊದಲು ಅಳೆಯಬಹುದು. ಆದರೆ ನಾವು ನಿಂತರೆ ಅವರ ಯೋಗ್ಯತೆ ತಾನೇ ತಿಳಿದುಬರುವದು.

ನಾನು ಪರೀಕ್ಷೆಗೆ ನಿಲ್ಲ ಬಯಸುವದಿಲ್ಲವೆಂತಿಲ್ಲ. ಆದರೆ ಇನ್ನಷ್ಟು ತಿರುಗಾಡಿಕೊಂಡು ಬರುವ. ಚಿತ್ರಕಲೆಯ ಅನುಭವ ಪಡೆಯುವ. ಆ ಮೇಲೆ ಯಾರ ಮುಂದೂ ನಿಲ್ಲಬಹುದು.

ಅಣ್ಣ, ನೀನು ಬೇರೊಂದು ತಿಳಿಯ ಬಯಸುವೆಯೆಂದೆನಿಸುವದು. ಆಕೆ ಸ್ತ್ರೀ. ಅವಳ ಮುಂದೆ ನಮ್ಮ ವಿದ್ಯೆಯ ಪರೀಕ್ಷೆಯೇ ಎನ್ನುವಿ. ಆದರೆ ಆಕೆ ಚಿತ್ರಕಲೆಯ ಉಪಾಸಕಳು. ಸಮಾನಸ್ಕಂಧಳು

ನೀನು ಸೋಲಿಸಬಹುದೇ!

ಆದುದು, ನೀನು ಗೆಲ್ಲದಿದ್ದರೆ.

ಅಣ್ಣನ ಅಪಮಾನವನ್ನು ಸಹಿಸಬಲ್ಲೆಯಾ?

ಇಲ್ಲ.

ಹಾಗೆಂದರೆ?

ಮಗು, ಅವರು ಬಂದು ೭–೮ ದಿನಗಳಾದವು. ಚಿತ್ರಬರೆದರೆ?

ತಾಯಿ, ಇಬ್ಬರಲ್ಲಿ ಯಾರ ಅಕ್ಷರ ಹೆಚ್ಚೆಂದು ಕೇಳುವೆಯಾ?

ತಾಯಿಗೆ ತೊಟ್ಟಿಲ ಜೀಕದಲ್ಲಿ ಕೂಡಿಸಿ ಗಿರಿಗಿರಿ ತಿರುಗಿಸಿದಂತಾಯಿತು. ಮಗಳ ಮಾತಿನ ನಿಶ್ಚಿತಾರ್ಥವಾಗಲಿಲ್ಲ.

ಹಿರಿಯವನು ಆತ್ಮಾರಾಮನೋ? ವಿಷಯಾಂತರಿಸಿ ನುಡಿದಳು.

ಅಹುದು.

ಆತ್ಮಾರಾಮನ ಮೂಗು ಉದ್ದ. ಬೆಳ್ಳನ್ನ ಮೈ. ಸಾದುಗಪ್ಪು. ತಲೆಯಲ್ಲಿ ಕೂದಲು ಕಡಿಮೆ. ಆದರೆ ಕಣ್ಣು ಬೆಳಕು ಕೊರೆಯುವಂಥದು.

ಇಷ್ಟೊಂದು ಪರೀಕ್ಷಿಸಿರುವೆಯಾ?

ಅಹುದು, ಅದು ನನ್ನ ಪರೀಕ್ಷೆ.

ಶಿವಕಾಶಿಯು ಮುಗುಳು ಮಲ್ಲಿಗೆ ಅರಳಿಸಿದಳು.

ಕಿರಿಯವನು ದೃಢಕಾಯನು, ಗೌರವರ್ಣದವನು, ದುಂಡು ಮೈಯವನು, ಕಣ್ಣು-ಹುಬ್ಬು ಮೂಗು–ತುಟಿ, ಕೆನ್ನೆ-ಕಿವಿ, ಕೂದಲು ನಾಲಿಗೆ ಸುಂದರವಾದವುಗಳು. ಚಿತ್ರಕಲೆಯ ಪುರುಷಮೂರ್ತಿಗಳಿಗೆ ಅವನೊಬ್ಬ ಆದರ್ಶ ಪ್ರಾಣಿ, ಲಾವಣ್ಯರಸವೂ, ತಾರುಣ್ಯಭಾವವೂ ಕೂಡಿ ಎರಕ ಹೊಯ್ದ ಒಂದು ಸುಂದರ ಪ್ರತಿಮೆ ನಾವೆಲ್ಲರೂ ಅವನನ್ನು ಮೆಚ್ಚಬೇಕು.

ತಾಯೀ, ಇಷ್ಟೊಂದು ವರ್ಣನೆಯೇಕೆ?

ವರ್ಣನೆಯಲ್ಲ ಮಗು. ನಿಜಸ್ಥಿತಿಯನ್ನು ಹೇಳಿರುವೆ. ನಿನ್ನ ಕೊನೆಯ ಪರೀಕ್ಷೆಯಾಗಲೆಂದೂ ಹಾರೈಸುವೆ.

ಲಕ್ಷ್ಮೀಕಾಂತನು ಬಂದಂತಾಯಿತು. ತಾಯಿಯು ಒಳಗೆ ಹೋದಳು. ಶಿವಕಾಶಿಯು ಅವನನ್ನು ನಯವಿನಯದಿಂದ ಬರಮಾಡಿಕೊಂಡಳು.

ಲಕ್ಷ್ಮೀಕಾಂತನು ಒಂದು ಸುಖಾಸನದ ಮೇಲೆ ಕುಳಿತು ಕಣ್ಣು ತುಂಬಿ ಶಿವಕಾಶಿಯನ್ನು ನೋಡಿದನು.

ಏಕೆ ಬಂದಿದ್ದಿರಿ? ತುಂಟ ನಗೆಯನ್ನು ತೇಲಿಸುತ್ತ ಕೇಳಿದಳು.

ನನ್ನ ಸೋಲನ್ನು ನಾನೇ ಒಪ್ಪಿಕೊಂಡು ಮುಕ್ತನಾಗಬೇಕೆನ್ನುವೆ ಎಂದು ಉದಾಸ ಭಾವದಿಂದ ನುಡಿದನು.

ಹೀಗೆ ನುಡಿಯುವಿರಿ. ನನ್ನ ಬಳಿಗೆ ಈವರೆಗೆ ಅನೇಕ ಚಿತ್ರಕಾರರು ಬಂದದ್ದುಂಟು. ಅವರೆಲ್ಲರು ತಮ್ಮ ವಾಗಾಡಂಬರದಿಂದ ನನ್ನ ತಲೆಯನ್ನು ಕೆಡಿಸಿಬಿಟ್ಟ ಸಂಗತಿಗಳೇ ಬಹಳ. ಸೋಲುವೆನೆಂದು ಒಬ್ಬನೂ ಆಡಿದುದಿಲ್ಲ. ನೀವೇ ಹೊಸಬರು.

ಇರಬೇಕು. ನಾನು ನಿಶ್ಚಯವಾಗಿ ಒಪ್ಪುವ ವಿಷಯ. ಅಣ್ಣನನ್ನು ಆಗ್ರಹದಿಂದ ನಿಲ್ಲಿಸಿಕೊಂಡೆ. ಸೋಲಬಹುದಾದ ಈ ದುರ್ಬಲ ತಮ್ಮನ ಸಂಗಡ ತಾನೂ ನಿಂತು ಪರೀಕ್ಷೆಯ ಫಲಿತಾಂಶವನ್ನು ಉಣ್ಣಬೇಕಾಯಿತು. ನನ್ನ ಹೆಮ್ಮೆಯೂ ಉತ್ಸಾಹವೂ ಸ್ಫೂರ್ತಿಯೂ ಎಲ್ಲವೂ ನಷ್ಟವಾದವು. ಮುಖ ಕೆಳಗೆ ಹಾಕಿ ನುಡಿದನು.

ಶಿವಕಾಶಿಗೆ ಆಶ್ಚರ್ಯವೆನಿಸಿತು

ಇಲ್ಲ. ನೀವು ಧೈರ್ಯ ತಾಳಿರಿ. ನಿಮಗೆ ಧೈರ್ಯ ಹುಟ್ಟಲು ನಾನು ಸಾಧ್ಯವಾದ ಎಲ್ಲ ಸಹಾಯ ಸಲ್ಲಿಸಬಲ್ಲೆ ಎಂದು ಮುಂದಕ್ಕೆ ಸರಿದಳು.

ಓ! ಅದೇ ಅಧೈರ್ಯದ ಮೂಲ ಕಾರಣವು. ಅದೇ ಮುಖ್ಯ ಕಾರಣ.

ಅಂದರೇನು?

ಅವಳ ಮುಖವನ್ನು ನಿರೀಕ್ಷಿಸುತ್ತ, ಒಂದು ಆದರ್ಶ ಚಿತ್ರವನ್ನು ತೆಗೆಯಬೇಕೆಂದು ನಿಶ್ಚಯಿಸಿಕೊಂಡಿರುವೆ. ಕಳೆದ ೧೦–೨೦ ದಿನದ ನಿಮ್ಮ ಸಹವಾಸದಿಂದ ಅದೆಷ್ಟೋ ಸ್ಫೂರ್ತಿ ಪಡೆದಿರುವೆ. ... ...

ಶಿವಕಾಶಿಯು ದಿಙ್ಮೂಢಳಾಗಿ ಕುಳಿತಳು.

ನೀವು ನನಗೆ ಅಪ್ಪಣೆಯನ್ನು ಕೊಡಿರಿ. ನಾನು ಅಣ್ಣನಿಗೆ ಹೇಳದೆ ಹೋಗಬೇಕೆಂದಿರುವೆ.

ಎಲ್ಲಿಗೆ? ಕಣ್ಣರಳಿಸಿ ಕೇಳಿದಳು.

ಅಜ್ಞಾತ ಸ್ಥಳಕ್ಕೆ . . .

ಆಗದು ಲಕ್ಷ್ಮೀಕಾಂತ ಆಗದು. ಇಂಥ ವಿಚಾರ ಬಿಡಿ. ನೀವು ಸೋಲಲಿ, ಗೆಲ್ಲಲಿ ನಿಲ್ಲಲೇಬೇಕು. ಧನಿಯಲ್ಲಿ ದೈನ್ಯತೆಯಿದ್ದಿತು.

ಏನೆಂದು ನಿಲ್ಲಲಿ?

ಸ್ಪಷ್ಟವಾಗಿ ನನಗೆ ತಿಳಿಯದು. ನಿಲ್ಲಬೇಕು.

ಸೋತವನು ನಿಮ್ಮ ಮನೆಗೆ ಸುಣ್ಣ ಬಳಿಯಲೂ ನಿರುಪಯೋಗಿ.

ಲಕ್ಷ್ಮೀಕಾಂತ, ಹಾಗೆ ನುಡಿಯಬೇಡಿರಿ. ನಿಮ್ಮ ಮನಸು ಇಂದು ಯಾಕೋ ವಿಪರೀತ ಭಾವನೆಯನ್ನು ತಳೆದಿದೆ. ತೋಟದಲ್ಲಿ ಒಂದಿಷ್ಟು ತಿರುಗಾಡಿ ಬರುವ ನಡೆಯಿರಿ ಎಂದಳು.

ಲಕ್ಷ್ಮೀಕಾಂತನು ಏಳಲಿಲ್ಲ. ಶಿವಕಾಶಿಯು ಕೈಹಿಡಿದು ಕರೆದುಕೊಂಡು ಹೋದಳು. ಒಂದು ಮಾಮರದ ಕೆಳಗೆ ಇಬ್ಬರೂ ಕುಳಿತರು. ಶಿವಕಾಶಿಯು ಒಂದು ಎತ್ತರವಾದ ಕಲ್ಲು ಹಾಸಿಗೆಯ ಮೇಲೆ; ಲಕ್ಷ್ಮೀಕಾಂತನು ಎದುರು ಒಂದು ಕಿರಿದಿಬ್ಬದ ಮೇಲೆ. ಕ್ಷಣಕ್ಕೊಮ್ಮೆ ಅವಳ ಸರ್ವಾಂಗವನ್ನೂ ಕಣ್ಣಿನಿಂದ ಹೀರಿಕೊಳ್ಳುವಂತೆ ನೋಡುವನು. ಎದುರಿನ ಕ್ಷಿತಿಜದ ಕಡೆಗೆ ಕಣ್ಣಿಟ್ಟ ದೃಷ್ಟಿಯನ್ನು ಶಿವಕಾಶಿ ತಿರುಗಿಸಲಿಲ್ಲ ಇಬ್ಬರಿಗೂ ವನಸಿರಿಯು ಹಿನ್ನೆಲೆಯಾಗಿ ನಿಂತಿದೆ. ವಸಂತಾಗಮನದ ಹರಿಕಾರರಂತೆ ಇಬ್ಬರೂ ಮನದಲ್ಲಿ ನಲಿಯುತ್ತಿದ್ದಾರೆ. ಬಹಳ ಹೊತ್ತು ಯಾರೂ ಮಾತಾಡಲಿಲ್ಲ.

(೧೫ ನೇ ಪುಟಕ್ಕೆ)

ದೇಶಾಂತರಗಳಿಂದ

ತೊಗ್ಲಿಯಾಟಿಯವರ ಕೊಲೆಯ ಪ್ರಯತ್ನ

ಇಟಲಿಯ ೩೦ ಲಕ್ಷ ಕಮ್ಯುನಿಸ್ಟರ ಮುಂದಾಳಾಗಿರುವ ಶ್ರೀ ಪಾಲ್ಮಿರೋ ತೊಗ್ಲಿಯಾಟಿಯವರಿಗೆ ವಿದ್ಯಾರ್ಥಿಯೊಬ್ಬನು ಶಾಸನಸಭೆಯ ಬಾಗಿಲಲ್ಲಿ ಗುಂಡುಹೊಡೆಯಲು ಪ್ರಯತ್ನಿಸಿ ವಿಫಲನಾದ ಸಂಬಂಧದಲ್ಲಿ ನಾಡಿನ ೭೦ ಲಕ್ಷ ಕೂಲಿಕಾರರು ಆ ಪ್ರಯತ್ನಕ್ಕೆ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಲು ಹರತಾಳವನ್ನು ಎಲ್ಲೆಲ್ಲೂ ಆಚರಿಸಿದರು. ಶಸ್ತ್ರಚಿಕಿತ್ಸೆಯಿಂದ ಅವರ ಎದೆಯೊಳಗಿದ್ದ ಗುಂಡನ್ನು ಹೊರತೆಗೆಯಲಾಗಿದೆ. ರಸ್ತೆಗಳಲ್ಲಿ ರಾಜಕೀಯ ಪಕ್ಷಗಳಲ್ಲಿ ಹೊಡೆದಾಟ ಸಂಭವಿಸಿತು. ಎಲ್ಲೆಲ್ಲೂ ಪ್ರತಿಭಟನಾ ಪ್ರದರ್ಶಕರು ತುಂಬಿ ಅವರಿಗೂ ಪೋಲೀಸರಿಗೂ ಘರ್ಷಣವಾಗಿ ಕೆಲವು ಜೀವಿಗಳು ದೇಹತ್ಯಾಗ ಮಾಡುವಂತಾಗಿ ಕೆಲವಕ್ಕೆ ಗಾಯಗಳಾದವು.

ಇಟಲಿಯ ಕಾರ್ಮಿಕ ಮಂಡಲದಿಂದ ಸಾರ್ವತ್ರಿಕ ಮುಷ್ಕರದ ಅಪ್ಪಣೆ ದೊರೆತ ಮೊದಲೇ ಜಿನೋವ, ಮಿಲನ್, ಟ್ಯೂರಿನ್, ರೋಂ ಮುಂತಾದ ನಗರಗಳಲ್ಲಿ ಕೂಲಿಕಾರರು ತಮ್ಮ ಕೈಕರಣಗಳನ್ನು ಕೆಳಗಿಟ್ಟುಬಿಟ್ಟಿದ್ದರು.



ಇಟಲಿಯ ೩೦ ಲಕ್ಷ ಕಮ್ಯುನಿಸ್ಟರ ಮುಖಂಡ ಸಿಗ್ನರ್ ಪಾಲ್ಮಿರೋ ತೊಗ್ಲಿಯಾಟಿ.

ಸರಕಾರಕ್ಕೇನೂ ಅರಿಯದ ಈ ಕೃತ್ಯವನ್ನು ಎತ್ತಿಕೊಂಡು ಸೋಶಲಿಸ್ಟ್ ಮತ್ತು ಕಮ್ಯುನಿಸ್ಟ್ ಮುಖಂಡರು ಜನರಲ್ಲಿ ಅಸಂತೃಪ್ತಿಯನ್ನು ಬಿತ್ತುತ್ತಿರುವುದನ್ನು ಸರಕಾರೀ ಘೋಷಣೆಯೊಂದು ಖಂಡಿಸಿತು. ಇದಕ್ಕೆ ಕಮ್ಯುನಿಸ್ಟ್ ಪಕ್ಷವು ಎದ್ದು ಸರಕಾರ ರಾಜೀನಾಮೆ ಕೊಡಬೇಕೆಂದುದೇ ಕಾರಣ.

ಈ ಹತ್ಯಾ ಪ್ರಯತ್ನವನ್ನು ತಾವು ಬಲವಾಗಿ ಪ್ರತಿಭಟಿಸುವೆವೆಂದು ಹೇಳಿ ಜನರಲಿಸ್ಸಿಮೋ ಸ್ಟಾಲಿನ್ನರು— 'ಇದರಿಂದ ರಶಿಯಕ್ಕೆ ಸಿಟ್ಟು ಬಂದಿದೆ. ಸೋವಿಯೆಟ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಕಾಮ್ರೇಡ್ ತೊಗ್ಲಿಯಾಟ್ಟಿಯವರ ಕೊಲೆಗೆಯತ್ನಿಸಿದ ಪಾತಕಿಯನ್ನು ಕಂಡು ಕಿನ್ನತೆಯಾಗಿದೆ. 'ಅವರನ್ನು ಆ ಘೋರ ಪ್ರಯತ್ನದಿಂದ ಅವರ ಗೆಳೆಯರು ರಕ್ಷಿಸಲು ಅಸಮರ್ಥರಾದುದಕ್ಕೆ ವಿಷಾದಿಸುತ್ತದೆ' ಎಂದು ತಂತಿ ಕೊಟ್ಟಿದ್ದಾರೆ.

ಬ್ರಹ್ಮದೇಶದ ಪರಿಸ್ಥಿತಿ

ಬ್ರಹ್ಮದೇಶದ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿದ್ದು ವಿದಿತವಿದೆ. ಅವರ ೪ ಜನ ಸದಸ್ಯರು ಸೈನ್ಯಕ್ಕೆ ಸೇರಲಿರುವರಂತೆ. ಮೊದಲು ರಾಜೀನಾಮೆಯಿತ್ತವರಲ್ಲೂ ವಿದೇಶ ಮಂತ್ರಿ ಯೂ ಟಿನ್ ಟಟ್ಟರೂ ಸಂರಕ್ಷಣಾ ಮಂತ್ರಿಗಳಾದ ಬೋಲೆಟ್ಯಾ ಅವರೂ ಸೈನ್ಯಕ್ಕೆ ಸೇರುವ ಸುದ್ದಿಯಿದೆ.

ಹೀಗೆ ಯುದ್ಧದಲ್ಲಿ ಅಕಸ್ಮಾತ್ತಾಗಿ ಮಂತ್ರಿಗಳ ಸವಾರಿ ಲಕ್ಷ್ಯವಿತ್ತುದು ಜನರಿಗೆ ವಿಚಿತ್ರವೆನಿಸಿದೆ. ಆದರೆ ಅದನ್ನು ವೇಲಿಸಿಕೊಳ್ಳಲು ಸೇನಾಧಿಕಾರಿಗಳು ಸ್ವಲ್ಪ ಹಿಂದೆ ಮುಂದೆ ನೋಡಬಹುದು. ಆದರೆ ಸಂರಕ್ಷಣಾ ಮಂತ್ರಿ, ಬೋಲೆಟ್ಯಾ ಅವರು ಮೊದಲು ಸೈನ್ಯದಲ್ಲಿ ಜನರಲ್ ಹುದ್ದೆಯಲ್ಲಿದ್ದು ಅವರೇನೂ ಹೊಸಬರೆನಿಸಿಕೊಳ್ಳಲಾರರು.

ಹಿಂದಿನ ಬ್ರಿಟ್ಟೀಷ್ ಮುಖ್ಯ ಮಂತ್ರಿಯೊಬ್ಬರ ರಶಿಯವನ್ನು ಅನುಸರಿಸುತ್ತೇವೆಂಬ ಮಾತಿಗೆ ಇಂಗ್ಲೀಷ್ ಬಂಡವಾಲಿಗರು ಹೆದರಿ ಹೋಗಿದ್ದು ಸ್ಪಷ್ಟವಿದೆ. ಆದರೆ ಆ ಮೇಲಿನ ಘೋಷಣೆಯಿಂದ ಅಂದರೆ, ಅಕ್ಷರಶಃ ಹಾಗಲ್ಲವೆಂದೂ, ಯುಕ್ತವಿದ್ದಲ್ಲಿ ಸಂರಕ್ಷಣೆ ಕೊಡಲಾಗುವುದೆಂದೂ ಕಮ್ಯುನಿಜಮ್ಮನ್ನು ಒಮ್ಮಿಲೇ ಸ್ವಾಗತಿಸುವುದಿಲ್ಲವೆಂದೂ ವಿವರಿಸಿದ ಬಳಿಕ-ಅವರಿಗೆ ಕೆಲ ಮಟ್ಟಿಗೆ ಸಮಾಧಾನವುಂಟಾಗುವಂತಾಯಿತು.

ಬರ್ಲಿನ್ನಿನ ಬೇನೆ

ಬರ್ಲಿನ್ನಿನ ಬೇನೆ ಇನ್ನೂ ಗುಣವಾಗಿಲ್ಲ. ಮಹಾಯುದ್ಧವನ್ನು ಎದುರಿಸುವಷ್ಟು ಸಾಮರ್ಥ್ಯ ರಶಿಯಕ್ಕಿಲ್ಲವಾದರೂ ಪಾಶ್ಚಾತ್ಯ ರಾಷ್ಟ್ರಗಳ ನಿಷೇಧ ಪತ್ರಗಳನ್ನು ಸ್ಟಾಲಿನ್ನರು ಅವಗಣಿಸಬಹುದೆಂದು ಲಂಡನ್ ಪತ್ರಿಕೆಯೊಂದು ಅಭಿಪ್ರಾಯಪಡುತ್ತಿದೆ. ಬ್ರಿಟಿಶ-ಅಮೇರಿಕಗಳು ಈಗಿನಂತೆ ಬರ್ಲಿನ್ನಿಗೆ ವಿಮಾನದಲ್ಲಿ ಸಾಮಾನು ಸರಕುಗಳನ್ನು ಕಳಿಸಲು ತಮ್ಮಲ್ಲಿಯ ತೈಲ ಸಂಗ್ರಹವನ್ನು ಬರಿದುಮಾಡಿಕೊಂಡು ಹೋಗ್ಯಸಬಾರದೆಂದು ಅದು ಒಪ್ಪಿದೆ.

ಬರ್ಲಿನ್ನಿನ ದಿಗ್ಬಂಧನ ಪೂರ್ಣವಾದ ಕೂಡಲೆ ಪೂರೈಕೆಗಳನ್ನು ಹೊರಗಿನಿಂದ ಜರ್ಮನಿಗೆ ತರುವ ಬ್ರಿಟಿಶ ಮತ್ತು ಅಮೇರಿಕನ ವಿಮಾನಗಳ ಮೇಲೆ ಕೋವಿಗಳನ್ನು ಹಾರಿಸಲು ರಶಿಯನ್ನರು ಸಿದ್ಧತೆ ನಡೆಸಿರುವರೆಂದು ಲಂಡನ್ನಿಗೆ ಸುದ್ದಿ ಬಂದಿದೆ.

ಹಿರೋಶಿಮಾ ನಾಗಸಾಕಿ ಮೊದಲಾದ ನಗರಗಳ ಮೇಲೆ ಬಾಂಬಿಟ್ಟ ಅಮೇರಿಕನ್ ವಿಮಾನಗಳು ಈಗ ಬರ್ಲಿನ್ ಕಾಳಗದಲ್ಲಿ ಭಾಗವಹಿಸುತ್ತಿರುವುದರಿಂದ ಮೊದಲೇ ಸೂಕ್ಷ್ಮವಾಗಿದ್ದ ಪರಿಸ್ಥಿತಿಯು ಮತ್ತಷ್ಟು ಸೂಕ್ಷ್ಮವಾಗಿದೆ.

ಹೇಗಿನಲ್ಲಿ ಬ್ರಿಟನ್, ಫ್ರಾನ್ಸ್, ನೆದರ್ಲೆಂಡ್ಸ್, ಲಕ್ಸೆಂಬರ್ಗ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಭೆಯಲ್ಲಿ ಬರ್ಲಿನ ಬಿಕ್ಕಟ್ಟು ಉಗ್ರವಾದರೆ ಪಶ್ಚಿಮ ಯುರೋಪಿನ ರಕ್ಷಣೆಯ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂಬುದನ್ನು ಚರ್ಚಿಸಲಾಯಿತು. ಅಂತೂ ಬೇನೆ ಬಲವಾಗಿ ಮಗೋರ್ತ್ಸವ (ಯುದ್ಧ) ಪ್ರಾರಂಭವಾಗಲು ಬಹಳ ಕಾಲ ಹಿಡಿಯದೆಂದು ಸದ್ಯದ ಪರಿಸ್ಥಿತಿ ಸೂಚಿಸುತ್ತದೆ.

ದಕ್ಷಿಣ ಆಫ್ರಿಕದ ವರ್ಣದ್ವೇಷ!


ಸಂ. ರಾ. ಸಂಘಕ್ಕೆ ಭಾರತದ ಸ್ಥಾಯಿ ಪ್ರತಿನಿಧಿಯಾದ ಡಾ. ಪಿ. ಪಿ. ಪಿಳ್ಳೆಯವರು ದ. ಆಫ್ರಿಕದಲ್ಲಿ ಡಾ. ಮಾಲನ್ನರ ಮುಖಂಡತ್ವದಲ್ಲಿ ಸಾಗಿರುವ ಸದ್ಯದ ವರ್ಣದ್ವೇಷ ಧೋರಣವನ್ನು ಪ್ರತಿಭಟಿಸಿದರು. ಅವರು ತಮ್ಮ ಸಂಘಕ್ಕೆ ಕಳಿಸಿದ ಕಾಗದದಲ್ಲಿ ಏರೋಪ್ಯರು ಎಲ್ಲ ಏರೋಪ್ಯೇತರರನ್ನೂ ಮೆಟ್ಟಿ ತುಳಿವ ಕುಲಭೇದನೀತಿಯನ್ನು ಅನುಸರಿಸುತ್ತಿರುವುದು ಖಂಡನೀಯ ಎಂದು ಬರೆದಿದ್ದಾರೆ.

ದ. ಆಫ್ರಿಕದ ಸರ್ವಸದಸ್ಯರ ೩ ನೆಯ ಶಾಸನ ಸಭಾ ಸಮ್ಮೇಲನದಲ್ಲಿ ಈ ವರ್ಣದ್ವೇಷದ ಪ್ರಶ್ನೆಯನ್ನು ಬಗೆಹರಿಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಸಂ. ರಾ. ಸಂಘದ ಅನಿಗಲ್ಲಾದ ತತ್ತ್ವಪಟಕ್ಕೆ ಆ ರೀತಿ ದ. ಆಫ್ರಿಕವು ಹಿಂದೀಯರನ್ನು ನಡೆಸಿಕೊಳ್ಳುವುದು ಪ್ರತಿಭಟನೆಯೆನಿಸುತ್ತದೆ—ಎಂದು ಕಾಗದದಲ್ಲಿ ಡಾ. ಪಿಳ್ಳೆಯವರು ಕಾಣಿಸಿದ್ದಾರೆ.

೧೯೪೬ ರಲ್ಲಿ ಸ್ವೀಕೃತವಾದ ಏಶಿಯನ್ನರ ಭೂಧಾರಣೆಯ ಕಾಯದೆ ಕುಲಭೇದ ನೀತಿಗೆ ದೊಡ್ಡ ಉದಾಹರಣೆಯಾಗಿದೆ. ಸಂ. ರಾ. ಸಂಘವು ಇದರ ಬಗ್ಗೆ ಸ್ವತವಾದ ಗೊತ್ತುವಳಿಯೊಂದನ್ನು ಸ್ವೀಕರಿಸಲಾರದಾದುದರಿಂದ ಅಲ್ಲಿಯ ಸರಕಾರಕ್ಕೆ ಆ ಧೋರಣವನ್ನು ಅನುಸರಿಸಲು ಪ್ರೋತ್ಸಾಹ ಕೊಟ್ಟಂತಾಗಿದೆ. ಆಗಲೇ ಭಾರತ ಮತ್ತು ದ. ಆಫ್ರಿಕಗಳ ಸಂಬಂಧ ಅಷ್ಟೇನೂ ಸ್ನೇಹಪೂರ್ಣವಾಗಿಲ್ಲವೆಂದೂ ಅದು ಇಂಥ ಧೋರಣೆಯ ಸ್ಥಾಯಿತ್ವದಿಂದ ಮತ್ತಷ್ಟು ಕೆಟ್ಟುಹೋಗಬಹುದೆಂದೂ ಸಂ. ರಾ. ಸಂಘದ ಗಮನಕ್ಕೆ ತರಲಾಗಿದೆ.

ಟ್ರೂಮನ್ನರ [illegible]

[illegible]



[illegible] ಹ್ಯಾರಿ ಟ್ರೂಮನ್.

ಸ್ತ್ರೀಂ ಥರ್ಮಂಡರನ್ನು ಟ್ರೂಮನ್ನರ ವಿರುದ್ಧ ನಿಲ್ಲಿಸಿದರು. ಉಪಾಧ್ಯಕ್ಷಪದಕ್ಕೆ ಮಿಸ್ಸಿಸಿಪಿಯ ಗವರ್ನರ್ ಫೀಲ್ಡಿಂಗ್ ರೈಟನ್ನು ಜೊತೆಯಾಳನ್ನಾಗಿ ಆರಿಸಲಾಯಿತು. ದಾಕ್ಷಿಣಾತ್ಯರು ಹೀಗೆ ಪಕ್ಷದ್ರೋಹದಿಂದ ದೂರಸರಿದು ನಿಂತುದು ಕಳೆದ ೭೦ ವರ್ಷಗಳಲ್ಲಿ ಇದೇ ಮೊದಲು.

ಪ್ರತಿನಿಧಿಗಳ ಸಭೆಯಲ್ಲಿ ಟ್ರೂಮನ್ನರ ನಾಗರಿಕ ಹಕ್ಕುಗಳ ಘೋಷಣೆಯನ್ನು ಮಂಡಿಸಿ ಅವರನ್ನು ರಿಪಬ್ಲಿಕನ್ ಉಮೇದವಾರನಾದ ಥಾಮಸ್ ಡ್ಯೂಯಿಯವರನ್ನು ಎದುರಿಸಲು ನಿರ್ಣಯಿಸಲಾಯಿತಲ್ಲದೆ, ಕುಲಭೇದ ನಿವಾರಣೆ, ಕುಲಶುದ್ಧಿ ರಕ್ಷಣೆ, ಸಹೋದ್ಯೋಗಿಯನ್ನು ಆರಿಸುವ ಘಟನಾತ್ಮಕ ಹಕ್ಕು, ಸರಕಾರದ ಕೈಗೆ ಪ್ರವೇಶವಿಲ್ಲದಂತೆ ಖಾಸಗಿ ಉದ್ಯೋಗದಲ್ಲಿ ಸೇರುವಿಕೆ ಈ ಸಿದ್ಧಿಗಳಿಗಾಗಿ ಪ್ರಯತ್ನಿಸಬೇಕೆಂಬ ಘೋಷಣೆಯನ್ನು ರಚಿಸಲಾಯಿತು. ಇದರಿಂದ 'ಟೈಮ್ಸ್ ಆಫ್ ಇಂಡಿಯಾ' ಊಹಿಸಿದಂತೆ ದಕ್ಷಿಣದ ಮತಗಳು ಥಾಮಸ್ ಡ್ಯೂಯಿಗೆ ಸಿಗಬಹುದೆಂಬ ಮಾತು ಸಂಭವನೀಯವಾಯಿತು. ಒಟ್ಟಿನ ಮೇಲೆ ಡೆಮೋಕ್ರಾಟರಿಗೆ ವಿಜಯದುರ್ಲಭವೆಂಬ ಮಾತನ್ನು ಅನೇಕರು ತರ್ಕಿಸಿ ಹೇಳುತ್ತಾರೆಂಬುದು ನಿಜ.

ಪಾಲಿಸ್ತಾನದಲ್ಲಿ ಯುದ್ಧದ ಉಪಸಂಹಾರ ?

ಪಾಲಿಸ್ತಾನದಲ್ಲಿ ಯುದ್ಧವನ್ನು ನಿಲ್ಲಿಸುವ ಬಗ್ಗೆ ಭದ್ರತಾ ಮಂಡಲವು ವಿಧಿಸಿದ ಆಜ್ಞೆಯನ್ನು ಪಾಲಿಸಲು ಅರಬ ರಾಷ್ಟ್ರಗಳು ಸಿದ್ಧವಿರುವವೆಂದು ಅರಬಲೀಗಿನ ರಾಜಕೀಯ ಸಮಿತಿಯ ಸಭೆಯ ನಂತರ ಅಧಿಕೃತವಾಗಿ ಪ್ರಕಟಿಸಲಾಯಿತು. ಯುದ್ಧೋಪಸಂಹಾರದ ಆಜ್ಞೆಯನ್ನು ಪಾಲಿಸಲು ಒಪ್ಪಿಕೊಂಡದ್ದರಿಂದ ಯೆಹೂದಿ ರಾಷ್ಟ್ರದ ಅಸ್ತಿತ್ವವನ್ನು ಮಾನ್ಯ ಮಾಡಿದಂತೆಂದು ಯಾರೂ ತಿಳಿಯಬಾರದೆಂದು ಅರಬ ವರ್ತುಲಗಳಲ್ಲಿ ಹೇಳಲಾಗುತ್ತಿದೆ. ಯೆಹೂದಿಗಳು ಆಗಲೇ ಯುದ್ಧ ನಿಲ್ಲಿಸಲು ಒಪ್ಪಿದ್ದು ತಿಳಿದುಬಂದಿದೆ. ಆದರೆ ಅರಬರು ಯುದ್ಧ ನಿಲ್ಲಿಸಿದರೂ ಯೆಹೂದಿಗಳು ನಿಲ್ಲಿಸಲಿಲ್ಲ. ಎಲ್ಲ ಅರಬ ರಾಷ್ಟ್ರಗಳೂ [illegible]


[illegible]

ವಿಚಿತ್ರವಿಶ್ವ

ಸಂಪಾದಕರ [illegible]

[illegible]

ಅಂದದ ಅಂದ!



Beauty is a matter of personal opinion— [illegible]

[illegible]



ದೇವರು ಕಟ್ಟಿದ ಸೆರೆಮನೆ!

ಮಗು,

ನೀನಿರುವ ಊರಿಗೆ, ಒಂದು ದಿನ ರಾತ್ರಿ ಬೆಳಗಾಗುವದರೊಳಗೆ ಯಾರೋ ನಾಲ್ಕೂ ಸುತ್ತಲೂ ದಪ್ಪವಾದ ಕೋಟೆ ಕಟ್ಟಿಬಿಟ್ಟರೆಂದು ತಿಳಿದುಕೊ. ಕೋಟೆಗಳಿಗೆ ಅಲ್ಲಲ್ಲಿ ಬಾಗಿಲುಗಳು ಇರುವದುಂಟು. ಆದರೆ ನಿನ್ನ ಊರಿಗೆ ಹಾಕಿದ ಕೋಟೆಗೆ ಹೋಗಿಬರಲು ಒಂದೂ ಬಾಗಿಲಿಲ್ಲವೆಂದು ತಿಳಿದುಕೋ ಮತ್ತು ಎಂದೆಂದಿಗೂ ಅದರಲ್ಲಿ ಯಾರೂ ಪ್ರವೇಶಿಸದಂತೆ ಮತ್ತು ಯಾರೂ ಹೊರಗೆ ಹೋಗದಂತೆ ಹೊರಗೆ ರಕ್ಕಸರು ಎಲ್ಲ ಕಡೆ ಅಲ್ಲಿ ಕಾವಲಿದ್ದಾರೆಂದು ಭಾವಿಸಿಕೊ. ಹೀಗೇ ದಿನಗಳು, ವರ್ಷಗಳು, ಶತಮಾನಗಳು, ಸಹಸ್ರಮಾನಗಳು ಸಾಗಿದವೆಂದು ತಿಳಿದುಕೊ. ಆಗ ಏನಾಗಬಹುದು? ೨೦ ಸಾವಿರ ವರ್ಷಗಳ ನಂತರ ವಿಮಾನದಿಂದ ಒಬ್ಬನು ನಿನ್ನ ಊರಲ್ಲಿ ಇಳಿದರೆ ಅವನಿಗೆ ನಿನ್ನ ಊರು ಹೇಗೆ ಕಂಡೀತು?

ನೀನು ಊಹಿಸಿಕೊಳ್ಳಬಲ್ಲೆಯೆಂದು ತೋರುತ್ತದೆ. ನಿನ್ನೂರಿನಲ್ಲಿರುವ ಐದಾರು ಸಾವಿರ ಜನಕ್ಕೆ ಇಷ್ಟು ಕಾಲ ಹೊರಗಿನ [illegible] ಸಂಬಂಧವೇ ಇಲ್ಲ. ಎರಡು ನಿಯು [illegible] ವೆಗೆ ಕಾಲವಿ[illegible]ನ ಊರೇ ನಿಮ್ಮ ಜಗತ್ತು; ಅಪುದು [illegible]ಕ್ಕಳಿಗೆ, ಮೊಮ್ಮಕ್ಕಳಿಗೆ ದಿಪ್ಪರೆ ನವು [illegible]ವಿರಾರು ಪೀಳಿಗೆಗಳಿಗೆ ಎಂದು ಪ್ರಪಂಚದಲ್ಲಿ ಹೊಟ್ಟೆ ಹೊರೆದು ಪಣ್ಣಿದು, ಚಳಿ ಮಳೆ ಗಾಳಿಯಿಂದ ವಿದ[illegible]ಂಡು ಬಾಳಿ ಬದುಕುವದು ಇವೇ ಮುಖ್ಯ ವೃತ್ತಿಗಳಾಗುವವು. ನೀವು ೫-೬ ಸಾವಿರ ಜನರಲ್ಲಿ ಯಾರಾದರೂ ಬುದ್ಧಿವಂತರು ಹುಟ್ಟಿದರೆ ಅಲ್ಪಸ್ವಲ್ಪ ತಿಳಿವಳಿಕೆ ಹೆಚ್ಚಿ ಸುಧಾರಣೆಯಾಗಬಹುದು. ಹೊರತು ಬಹಳ ಪ್ರಗತಿಯಾಗುವದು ಅಸಾಧ್ಯವೇ ಸರಿ. ನೀವಾಗಲಿ ನಿಮ್ಮ ಮಕ್ಕಳು-ಮೊಮ್ಮಕ್ಕಳು-ಮರಿಮಕ್ಕಳಾಗಲಿ, ವಿಮಾನಗಳನ್ನು ಕಟ್ಟಲಾರಿರಿ, ರೇಲ್ವೆಗಳನ್ನು ನಡೆಸಲಾರಿರಿ, ಇತರ ದೊಡ್ಡ ಯಂತ್ರಗಳನ್ನು ನಿರ್ಮಿಸಲಾರಿರಿ. ಏಕೆಂದರೆ, ಇಷ್ಟು ಸಣ್ಣ ಜಗತ್ತಿನಲ್ಲಿ ಅದಕ್ಕೆ ಬೇಕಾದ ಜನವಾಗಲಿ ಹಣವಾಗಲಿ ಕೂಡುವದು ಸಾಧ್ಯವಿಲ್ಲ. ಗಿರಾಕಿಯೂ ಇರಲಿಕ್ಕಿಲ್ಲ.

೨೦ ಸಾವಿರ ವರ್ಷದ ಮೇಲೆ ನಿಮ್ಮೂರಿಗೆ ಬರಬಹುದಾದ ವೈಮಾನಿಕನಿಗೆ ನೀವು ಬಹಳ ವಿಚಿತ್ರ ಪ್ರಾಣಿಗಳಾಗಿ ಕಾಣಬಹುದು. ಕಲ್ಲಿನ ಆಯುಧಗಳಿಂದ ಮೃಗಗಳನ್ನು ಹೊಡೆದು ಕೊಂದು ತಿನ್ನುತ್ತಿದ್ದ ೨೦ ಸಾವಿರ ವರ್ಷ ಹಿಂದಿನ ಬತ್ತಲೆ ಮನುಷ್ಯರನ್ನು ನೀನು ಕಂಡರೆ ಎಷ್ಟು ಕೌತುಕಪಡಬಹುದೋ ಅಷ್ಟೇ ನಿಮ್ಮೀ ಊರವರನ್ನು ಕಂಡರೆ ಆತನಿಗಾಗಬಹುದು.

ನ್ಯೂಗಿನಿಯ ಸೆರೆಮನೆರಾಜ್ಯ

ಇದೆಲ್ಲಿಯ ಕಲ್ಪನಾಲೋಕವೆಂದು ನೀನು ತಿರಸ್ಕರಿಸಬಹುದು. ಆದರೆ ಇಂಥ ರಾಜ್ಯವೊಂದು ಇಂದಿಗೂ ಇದೆಯೆಂದು ಕೇಳಿದರೆ ನಿನಗೆ ಆಶ್ಚರ್ಯವಾಗದೆ ಇರಲಿಕ್ಕಿಲ್ಲ. ಅದು ನ್ಯೂಗಿನಿ ದ್ವೀಪದ ಮಧ್ಯಭಾಗದಲ್ಲಿದೆ. ಆದರೆ ಆ ಮಹಾಸೆರೆಮನೆ ಮನುಷ್ಯನು ನಿರ್ಮಿಸಿದ್ದಲ್ಲ. ದೇವರೇ-ಅಥವಾ ಭೂಮಿತಾಯಿಯೆನ್ನು-ನಿರ್ಮಿಸಿದ ಸೆರೆಮನೆ ಅದು. ಅನೇಕ ಸಾವಿರ ವರುಷಗಳ ಹಿಂದೆ ಯಾವುದೋ ದೊಡ್ಡ ಭೂಕಂಪದ ಕಾಲಕ್ಕೆ ಭೂಮಿ ಎದ್ದುಬಂದಿರಬೇಕು ಮತ್ತು ಆ ರಾಜ್ಯದ ಸುತ್ತ ಪರ್ವತಗಳ ಕೋಟೆಯನ್ನೆ ಕಟ್ಟಿರಬೇಕು. ಆ ಮೇಲೆ ಅದರೊಳಗಿನ ಭಾಗ ಸೆರೆಮನೆಯಂತೆಯೆ ಆಯಿತು. ಕಾಲಿಂದ ದಾಟಿ ಹೋಗಲಾರದಷ್ಟು ಎತ್ತರನ್ನ ಬೆಟ್ಟಗಳು. ಹಿಮಾಲಯ ಪರ್ವತಕ್ಕಾದರೂ ಅಲ್ಲಲ್ಲಿ ಬಿರುಕುಗಳು, ಸಂದಿಗಳು ಅಂದರೆ ಕಣಿವೆಗಳು ಇವೆ. ಆದರೆ ನ್ಯೂಗಿನಿಯ ನಡುವೆ ಇರುವ ಈ ಪರ್ವತದ ಕೋಟೆಗೆ ಅಂಥದೇನೂ ಇಲ್ಲ. ಅದರೊಳಗೆ ಸಿಕ್ಕಿಕೊಂಡ ಜನರಿಗೆ ಮುಂದೆ ಎಂದೂ ಹೊರಗಿನ ಜಗತ್ತಿನೊಡನೆ ಸಂಬಂಧ ಬರಲಿಲ್ಲ. ಅವರು ದೇವರ ಸೆರೆಯಾಳುಗಳಾದರು.

ನೂರಿನ್ನೂರು ವರುಷಗಳ ಹಿಂದೆ ಬಿಳಿಯ ಜನರು ನ್ಯೂಗಿನಿ ದ್ವೀಪದಲ್ಲಿ ಕಾಲೂರಿ ದೇವರ ಸೆರೆಮನೆಯಿದ್ದದ್ದನ್ನು ಕಂಡುಕೊಂಡರು. ಅದರಲ್ಲೇನಿರಬಹುದು? ಅವರ ಕುತೂಹಲ ಕೆರಳಿತು. ಅವರು ಪರ್ವತಗಳನ್ನು ದಾಟಿ ಅತ್ತಕಡೆ ಹಣಕಲು ಯತ್ನಿಸಿದರು. ಆದರೆ ನೂರಾರು ಸಾಹಸಿಗಳಲ್ಲಿ ಒಬ್ಬರೂ ತಿರುಗಿ ಬರಲಿಲ್ಲ. ಕಾರಣವಿಷ್ಟೇ. ಆ ಬೆಟ್ಟಗಳ ಹೊರವಲಯದ ಅಡವಿಗಳಲ್ಲಿ ವಾಸಿಸುತ್ತಿದ್ದ ನರಭಕ್ಷಕ ಕಾಡುಜನರು ಕೈಗೆ ಸಿಕ್ಕವರನ್ನೆಲ್ಲ ಕೊಂದು ಒಡನೆ ತಿಂದುಬಿಡುತ್ತಿದ್ದರು. ನ್ಯೂಗಿನಿಯ ಒಳನಾಡಿನಲ್ಲಿ ಉಪ್ಪು ಸಿಗುವದಿಲ್ಲ. ಮನುಷ್ಯರಕ್ತದಲ್ಲಿ ಉಪ್ಪು ಧಾರಾಳ. ಕಾಡುಜನರಿಗೆ ಅವರು ಒಳಿತಾಗಿ ರುಚಿಸಿದ್ದೇನು ವಿಚಿತ್ರ?

ಫಲವತ್ತಾದ ಭೂಮಿ

ಆದರೆ ಮೊನ್ನಿನ ಮಹಾಯುದ್ಧ ಕಾಲದಲ್ಲಿ ಈ ಕಾಣದ ರಾಜ್ಯವನ್ನು ಹೊರಜಗತ್ತಿನವರು ಕಂಡು ಬರಲು ಅವಕಾಶವಾಯಿತು. ನ್ಯೂಗಿನಿಯಲ್ಲಿ ಬೀಡುಬಿಟ್ಟ ಅಮೇರಿಕೆಯ ವೈಮಾನಿಕರು ವಿಮಾನದಿಂದ ಹಾರಿ ಆ "ದೇವರ ಸೆರೆಮನೆ"ಯನ್ನು ಕಂಡು ಬಂದು ತಾವು ನೋಡಿದ್ದನ್ನು ಬಣ್ಣಿಸಿ ಪತ್ರಿಕೆಗಳಿಗೆ ಬರೆದರು.

ದೇವರು ಈ ಕಣಿವೆಯ ಜನರನ್ನು "ಸೆರೆಮನೆ"ಗೆ ಅಟ್ಟಿದ್ದರೂ ಅವರಿಗೆ ಫಲವತ್ತಾದ ಭೂಮಿಯನ್ನು ಕೊಟ್ಟಿದ್ದಾನೆ. ವೇಗವಾಗಿ ಹರಿಯುವ ಒಂದು ನದಿ ಆ ಭೂಮಿಗೆ ನೀರುಣಿಸುತ್ತಿದೆ. ಅಲ್ಲಿಡೆ ಜನರೂ ತುಂಬ ಉದ್ಯಮಿಗಳಾಗಿ ಕಾಣುತ್ತಾರೆ. ಅವರು ಕಾಲಿವೆಗಳನ್ನು ತೋಡಿಕೊಂಡು ಇಡಿ ಕಣಿವೆಯಲ್ಲಿ ಬೆಳೆ ತೆಗೆಯುತ್ತಾರೆ. ಅಲ್ಲಿ ಬೆಳೆಯುವ ಮುಖ್ಯ ಧಾನ್ಯ ಭತ್ತ. ಜನರು ಎರಡು ಬಗೆಯ ಮನೆಗಳಲ್ಲಿ ವಾಸಿಸುವರು—ಒಂದು ದುಂಡಗಿನದು, ಇನ್ನೊಂದು ಚೌಕು. ಅವರ ಛಾವಣಿಗಳು ಗೋಲುಗುಮ್ಮಟದಂತೆ ಇವೆ. ಮನೆಯ ಮುಂದೆ ಬಿದಿರಿನಿಂದ ನಿರ್ಮಿಸಿದ "ಕಾವಲುಗೂಡು"ಗಳಿರುತ್ತವೆ. ಇಲ್ಲಿ ಕುಳಿತು ರೈತರು ತಮ್ಮ ಪೈರುಗಳನ್ನು ಕಾಯ್ದುತ್ತಾರೆ. ಅವರು ಹಂದಿಗಳನ್ನಲ್ಲದೆ ದನಕರುಗಳನ್ನೂ ಸಾಕುತ್ತಾರೆ. ದುಂಡನ್ನ ಬಾವಿಗಳನ್ನೂ ಅವರು ಮಾಡಿಕೊಂಡಿರುವರಂತೆ. ಅವರು ನಿಲುವಂಗಿ ಹಾಕಿಕೊಳ್ಳುವರೆಂದೂ ಗೊತ್ತಾಗಿದೆ.

ತಲೆಯ ಮೇಲೆ ವಿಮಾನಗಳು ಹಾರುವದನ್ನು ಕಂಡು ಅವರಲ್ಲಿ ಕೆಲವರು ಚಲ್ಲಾಪಿಲ್ಲಿಯಾಗಿ ಓಡತೊಡಗಿದರು. ಆದರೆ ಕೆಲ ಧೀರರು ತಮ್ಮ ಬಿಲ್ಲು ತೆಗೆದುಕೊಂಡು ಬಾಣಗಳಿಂದ ವಿಮಾನಗಳನ್ನು ಉರುಳಿಸಲು ಯತ್ನಿಸಿದರಂತೆ!

ಈ ಜನರ ಬದುಕಿನ ಬಗ್ಗೆ ವಿಶೇಷವೇನೂ ತಿಳಿದುಬಂದಿಲ್ಲ. ಅವರನ್ನು ಕಂಡವರೆಲ್ಲ ನೆಲಕ್ಕಿಳಿಯದೆ ವಿಮಾನಗಳಲ್ಲೆ ದುರ್ಬೀನು ಹಿಡಿದು ನೋಡಿದವರು. ಆದರೆ ಅವರ ನಡೆನುಡಿಗಳು ಜಗತ್ತಿಗೆ ತಿಳಿದುಬರುವ ದಿನಗಳು ಇನ್ನು ಬೇಗನೆ ಬರುವವೆಂದು ಖಂಡಿತ ಹೇಳಬಹುದು.

● ಬೆಂಗಳೂರಿನಲ್ಲಿದ್ದ ಹೈದ್ರಾಬಾದದ ಓರ್ವ ಪ್ರಮುಖ ಮುಸ್ಲಿಮರನ್ನು ಬಂಧಿಸಿ ಸಂಸ್ಥಾನದಲ್ಲಿಯ ಅವನ ವಾಸವು ಅನವಶ್ಯಕವೆಂದು ಅವನನ್ನು ಗಡೀಪಾರು ಮಾಡಲಾಯಿತು.

ನಿಜಾಮರಿಗೆ ಸರದಾರರ ಎಚ್ಚರಿಕೆ

ಸೇರ್ಪಡೆಯಲ್ಲದ ಗತ್ಯಂತರವಿಲ್ಲ

ಪತಿಯಾಳಾ ಪೂರ್ವ ಪಂಜಾಬದ ಸಂಸ್ಥಾನಗಳ ಒಕ್ಕೂಟದ ಉದ್ಘಾಟನೆ ಸಮಾರಂಭ ನೆರವೇರಿಸುತ್ತ ತಾ. ೧೫ ರಂದು ಹಿಂದುಸ್ತಾನದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಹೈದರಾಬಾದದ ಬಗ್ಗೆ ಹೀಗೆ ಉದ್ಗಾರಗಳನ್ನು ತೆಗೆದರು.

"ಹೈದರಾಬಾದದಲ್ಲಿ ಈಗ ಅಧಿಕಾರಾರೂಢರಾದವರೊಡನೆ ಒಪ್ಪಂದ ಶಕ್ಯವೇ ಇಲ್ಲ. ಜುನಾಗಡದಲ್ಲಿ ಒಳನುಗ್ಗಿದಂತೆ ಹೈದರಾಬಾದದಲ್ಲಿಯೂ ಏಕೆ ನುಗ್ಗಬಾರದೆಂದೂ ಹೈದರಾಬಾದದ ಬಗ್ಗೆ ಸೌಮ್ಯ ಧೋರಣ ವಹಿಸಿದ್ದೇಕೆ ಎಂದೂ ಜನರು ಟೀಕಿಸುವದುಂಟು. ಈ ಪ್ರಶ್ನೆಯು ಶಾಂತ ಮಾರ್ಗದಿಂದ ಬಿಡಬಹುದೆಂದು ನಾನು ತಿಳಿದಿದ್ದೆ. ಇನ್ನು ಒಂದೇ ಮಾರ್ಗ ಉಳಿದಿದೆ. ಅದೆಂದರೆ ಸೇರ್ಪಡೆಪತ್ರಕ್ಕೆ ಸಹಿ ಹಾಕುವದು. ಹಿಂದಿನ ಗವರ್ನರ ಜನರಲ್‌ರಾದ ಲಾರ್ಡ ಮೌಂಟಬ್ಯಾಟನ್ನರು ನಿಜಾಮರಿಗೆ ಕೊಟ್ಟ ಸವಲತ್ತುಗಳೂ ಒಪ್ಪಂದದ ಕರಾರುಗಳೂ ಅವರ ಜೊತೆಗೇ ಹೋದವು. ಇನ್ನು ನಿಜಾಮರು ಉಳಿದ ಸಂಸ್ಥಾನಗಳು ಒಪ್ಪಿದ ಕರಾರುಗಳಿಗೆ ಒಪ್ಪಿದರೆ ಮಾತ್ರ ಒಪ್ಪಂದ ಸಾಧ್ಯ. ಪರಕೀಯರ ಸಹಾಯದ ಮೇಲೆ ಭರವಸೆಯಿಟ್ಟು ನಿಜಾಮರು ಕುಣಿದಾಡಿದರೆ ಅದು ಅವರನ್ನು ಬದುಕಿಸಿಕೊಳ್ಳಲಾರದು. ಆದ್ದರಿಂದ ಹೈದರಾಬಾದದ ಬಗ್ಗೆ ಆತುರರಾಗಬೇಡಿರಿ. ನಮ್ಮಲ್ಲಿ ಭರವಸೆ ಇರಲಿ. ಈ ಪ್ರಶ್ನೆಯ ಬಗ್ಗೆ ನಿಮಗಿಂತ ನನಗೆ ಹೆಚ್ಚಿನ ವ್ಯಥೆಯಾಗುತ್ತದೆ. ಆದರೆ ರೋಗಿಗೆ ಶಸ್ತ್ರಕ್ರಿಯೆ ಮಾಡುವಾಗ ಶಕ್ಯವಿದ್ದಷ್ಟು ಕಡಿಮೆ ಭಾಗವನ್ನು ಕತ್ತರಿಸುವದೂ ಶಸ್ತ್ರಕ್ರಿಯೆಗೆ ತಕ್ಕ ಸಮಯ ಬಂದಾಗಲೇ ಅದನ್ನು ಮಾಡುವದೂ ವೈದ್ಯನ ಹೊಣೆ ಎಂಬುದನ್ನು ಮರೆಯಬೇಡಿರಿ."

ಹೈದರಾಬಾದದ ಮೇಲೆ ಹಿಂದೀ ವಿಮಾನ ಹಾರಲು ಹಕ್ಕಿದೆ

ಹಿಂದೀ ಸರಕಾರದ ಹೇಳಿಕೆ

ಹಿಂದುಸ್ತಾನದ ಸಾರಿಗೆ ಇಲ್ಲವೆ ಬೇರೆ ವಿಮಾನಗಳು ಹೈದರಾಬಾದದ ಪ್ರದೇಶದ ಮೇಲೆ ಹಾರುವ ಮೊದಲು ಹೈದರಾಬಾದ ಸರಕಾರಕ್ಕೆ ತಿಳಿಸಬೇಕೆಂಬ ನಿಜಾಮ ಸರಕಾರದ ಬೇಡಿಕೆಯನ್ನು ಹಿಂದುಸ್ತಾನ ಸರಕಾರವು ನಿರಾಕರಿಸಿ ಒಂದು ಪ್ರಕಟನೆ ಹೊರಡಿಸಿದೆ. ಅದರ ಸಾರ ಹೀಗೆ.

ಈ ಸಂಬಂಧದಲ್ಲಿ ಹಿಂದುಸ್ತಾನ ಸರಕಾರವು ನಿಜಾಮ ಸರಕಾರದ ಹಕ್ಕನ್ನು ಒಪ್ಪುವದಿಲ್ಲ. ಹಿಂದೀ ವಿಮಾನಗಳಿಗೆ ಅವಶ್ಯ ಬಿದ್ದಾಗಲೆಲ್ಲ ಹೈದರಾಬಾದ ಪ್ರದೇಶದ ಮೇಲೆ ಹಾರುವ ಅಧಿಕಾರವಿದೆ. ಹೈದರಾಬಾದದ ಮುಖ್ಯ ವಿಮಾನ ನಿಲ್ದಾಣವು ಹಿಂದುಸ್ತಾನ ಸರಕಾರದ್ದಿದ್ದು ಇನ್ನೂ ಅದನ್ನು ಹೈದರಾಬಾದ ಸರಕಾರಕ್ಕೆ ಒಪ್ಪಿಸಿಕೊಟ್ಟಿಲ್ಲ ಎಂದು ಮೊದಲಾಗಿ ಆ ಪ್ರಕಟನೆಯಲ್ಲಿ ಕಾಣಿಸಲಾಗಿದೆ.

ನಿಜಾಮ ಪೋಲೀಸರ ಮೇಲೆ ಕಿಸಾನರ ದಾಳಿ

ರಜಾಕಾರರ ಅತ್ಯಾಚಾರದಿಂದ ಸಂತಪ್ತರಾದ ಕಿಸಾನರು ಔರಂಗಾಬಾದ ಜಿಲ್ಹೆಯ ಲಿಂಗತಪುರಿ ಪೋಲಿಸ ಠಾಣೆಯ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡು ಸಾರ್ವಜನಿಕ ಸಭೆ ಮಾಡಿ ಒಕ್ಕೂಟದ ಧ್ವಜ ಏರಿಸಿ ರಾಷ್ಟ್ರಗೀತೆಯ ನಂತರ ಚದುರಿದರೆಂದು ಸುದ್ದಿ ಬಂದಿದೆ.

ನಿಜಾಮರ ಅಸತ್ಯಪೂರ್ಣ ಪ್ರಕಟನೆ

ನಿಜಾಮ ಸರಕಾರದವರು ತಾ. ೧೩ ಕ್ಕೆ ಪ್ರೊ. ಭನಸಾಲಿಯವರ ಆಮರಣ ಉಪವಾಸದ ಬಗ್ಗೆ ಒಂದು ಪ್ರಕಟನೆ ಹೊರಡಿಸಿ ಅವರಿಗೆ ಹೈದರಾಬಾದ ಸಂಸ್ಥಾನದಲ್ಲಿ ಪ್ರವಾಸ ಮಾಡಲು ನಿರ್ಬಂಧ ಹಾಕಿಲ್ಲವೆಂದೂ ಅವರು ಸ್ವಸಂತೋಷದಿಂದ ಸಂಸ್ಥಾನದಿಂದ ಹೊರಗೆ ಹೋಗಿರುವರೆಂದೂ ಸಾರಿದ್ದರು. ಆದರೆ ಇದು ವಸ್ತುಸ್ಥಿತಿಗೆ ಸಂಪೂರ್ಣ ವಿರುದ್ಧವಿದ್ದು ಅಸತ್ಯಪೂರಿತವಾಗಿದೆ ಎಂದು ವರ್ಧಾಕ್ಕೆ ಹೋಗಿ ಪ್ರೊ. ಭನಸಾಲಿಯವರನ್ನು ಕಂಡು ಮಾತಾಡಿ ಬಂದ ನಾಗಪುರದ ಕಾಂಗ್ರೆಸ ಮುಖಂಡರು ಹೇಳಿಕೆ ಹೊರಡಿಸಿದ್ದಾರೆ.

ಯಾರು ಬಾಗಿಲೊಳಲ್ಲಿ?

ಯಾರು ಬಾಗಿಲೊಳಲ್ಲಿ?
ಓ, ಅನಾಗರಿಕತೆಯೆ!
ಗೊತ್ತವಳು ಬಹಳಿಂದು
ಬೇಕಾದ ಕಾಲದಲಿ.
ಕ್ರೈಸ್ತತ್ವ ಪ್ರಾಕೃತ-
ತ್ವದ ಹಾಗೆ ನಶಿಸಿದುದು;
"ಚೆಲುವು ಚೆಲುವಾದ ಹಳೆ
ಪದ್ಯವನು ಕಟ್ಟುತಿದೆ"
ರಂಗ್ಗಕಲೆಯ ಬಲವಾ-
ಗುತ್ತಿದೆ; ಮಹಾದ್ಭುತದ
ವಿಜ್ಞಾನ ನಮ್ಮ ಸಿರೆ
ನಾವೆ ನುಂಗುವ ಹಾಗೆ
ಅನಿವಾರ್ಯ ಮರಣಕೆ ಮ-
ಹತ್ವವನು ಕೊಟ್ಟಿಹುದು;
ಇದರಿನೆಳೆಯರು ಹೆಚ್ಚು
ಹೆಚ್ಚು ಎಳೆತನದಲ್ಲೆ
ಸಾಯಬಹುದೆನಿಬರಾ
ದರು, ಅಗೋ ಪ್ರತ್ಯಾಶೆ
ದೂರ ಸರಿದಿತು; ಮಾರಿ-
ಬೇನೆ ಹಸಿವಿನ ಸಿಡುಗು
ಹುಟ್ಟುತಿವೆ; ರೇಡಿಯೋ-
ಕ್ರಿಯೆಯ ಸಿಡಿಬಾಂಬುಗಳ
ಗೊತ್ತು ಗುರಿಯಿರ್ದದ ಬೀ-
ಸಾಟದಿಂದಕಟ! ದಯೆ
ದಾಕ್ಷಿಣ್ಯಗಳು ಹಳೆಯ
ಕಂತೆ; ಕಾಡಾಡಿತನ,
ಬಾರೆಲಾ ಸುಪ್ರಭಾ-
ತವ ಬಯಸುವೆನು ನಿನಗೆ!

('ಅಟ್ಲಾಂಟಿಕ್' ಪತ್ರಿಕೆಯಲ್ಲಿ ಲಿಯೋನಾರ್ಡ್ ಬೇಕನ್ ಬರೆದ ಪದ್ಯದ ಅನುವಾದ)

— ಬಿ. ಎಚ್. ಎಸ್.

ರಜಾಕಾರರ ಪುಂಡಾಟಿಕೆ

ಹೈದರಾಬಾದ ಮಂತ್ರಿಗಳ ಹೇಳಿಕೆ

ಹೈದರಾಬಾದ ವಾಣಿಜ್ಯ ಮಂತ್ರಿಗಳಾದ ಶ್ರೀ ಜೋಶಿಯವರು ಔರಂಗಾಬಾದದಲ್ಲಿ ಭಾಷಣ ಮಾಡುತ್ತ ಹೀಗೆ ಹೇಳಿದರು:— "ರಜಾಕಾರ ಮುಖಂಡರು ಹಿಂದುಗಳ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಕೊಡಲು ಸಿದ್ಧರೆಂದು ಆಶ್ವಾಸನಕೊಟ್ಟಿದ್ದರು ಆದರೆ ರಜಾಕಾರರ ದುರ್ವರ್ತನೆಯ ಬಗ್ಗೆ ನನ್ನ ಮುಸ್ಲಿಂ ಬಾಂಧವರನ್ನು ಎಚ್ಚರಿಸಬೇಕಾಗಿ ಬಂದಿದೆ. ಕೆಲವು ಸ್ವಾರ್ಥ ಸಾಧಕರು ರಜಾಕಾರ ಸಂಸ್ಥೆಯಲ್ಲಿ ಸೇರಿ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿರುವರೆಂಬಲ್ಲಿ ಸಂದೇಹವಿಲ್ಲ. ಹಿಂದು ಕಾಂಗ್ರೆಸಿಗರಾಗಲಿ, ಕಮ್ಯುನಿಸ್ಟರಾಗಲಿ ರಜಾಕಾರರ ವೇಷದಲ್ಲಿ ಅತ್ಯಾಚಾರ ನಡೆಸಿರುವರೆಂಬುದನ್ನು ನಾನು ಸರ್ವಥಾ ಒಪ್ಪಲಾರೆ. ರಜಾಕಾರರ ಅತ್ಯಾಚಾರದಿಂದ ಹಿಂದುಗಳ ವಿಶ್ವಾಸ ಹಾರಿಹೋಗಿದೆ. ಆದ್ದರಿಂದ ಸಮಯ ಮೀರುವ ಮೊದಲೇ ತಪ್ಪನ್ನು ತಿದ್ದಿಕೊಂಡು ಹಿಂದುಗಳಲ್ಲಿ ಉಂಟಾದ ಅವಿಶ್ವಾಸ ಮತ್ತು ಭಯವನ್ನು ನಿವಾರಿಸಬೇಕು."

ವಾರ್ಷಿಕ ಸ್ವಾತಂತ್ರ್ಯೋತ್ಸವ

ಡಾ. ರಾಜೇಂದ್ರ ಪ್ರಸಾದರ ಪ್ರಕಟನೆ

ಹಿಂದೀಯರಿಗೆ ಸ್ವಾತಂತ್ರ್ಯ ಲಭಿಸಿದ ೧೫ ನೇ ಆಗಸ್ಟ ದಿನವನ್ನು ಹುತಾತ್ಮರ ಸ್ಮಾರಕ ದಿನವೆಂದೂ ಭಾರತದ ಭವಿಷ್ಯತ್ತಿಗಾಗಿ ಸ್ವಾರ್ಥತ್ಯಾಗ ಮಾಡಲು ಪ್ರತಿಜ್ಞೆ ಮಾಡುವ ದಿನವೆಂದೂ ತಿಳಿದು ಅಂದು ಒಂದಿಲ್ಲೊಂದು ರಚನಾತ್ಮಕ ಕಾರ್ಯದಲ್ಲಿ ತೊಡಗಿ ಸಂಜೆಗೆ ಸಾರ್ವಜನಿಕ ಸಭೆ ಮಾಡಿ ದೇಶದ ಕಲ್ಯಾಣಕ್ಕೆ ಸ್ವಾರ್ಥತ್ಯಾಗ ಮಾಡುವ ಪಣಮಾಡಬೇಕೆಂದು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಪ್ರಕಟನೆ ಹೊರಡಿಸಿದ್ದಾರೆ. ಮುಂಬಯಿ ಸರಕಾರದವರು ಈ ಬಗ್ಗೆ ಒಂದು ಪ್ರಕಟನೆ ಹೊರಡಿಸಿ ಮೇಲ್ಕಾಣಿಸಿದ ಕಾರ್ಯಕ್ರಮವಲ್ಲದೆ ಅಂದು ವೃಕ್ಷಾರೋಪಣ ದಿನವೆಂದು ಎಲ್ಲ ಕಡೆಗೂ ಉಪಯುಕ್ತ ಗಿಡ ಹಚ್ಚಬೇಕೆಂದು ಹೇಳಿದ್ದಾರೆ.

● ಗವರ್ನರ ಜನರಲ್‌ರಾದ ಚಕ್ರವರ್ತಿ ರಾಜಗೋಪಾಲಾಚಾರ್ಯರು ಆಗಸ್ಟ ೧೮ ಬುಧವಾರ ಮಧ್ಯಾಹ್ನ ೩-೧೫ ಗಂಟೆಗೆ ಮೈಸೂರಿಗೆ ವಿಮಾನದಲ್ಲಿ ಬರುವರು. ಒಂದು ದಿನದ ಮಟ್ಟಿಗೆ ಅವರು ಲಲಿತ ಮಹಾಲ ಅರಮನೆಯಲ್ಲಿ ಉಳಿದುಕೊಂಡು ಮರುದಿನ ಬೆಂಗಳೂರಿಗೆ ಪ್ರಯಾಣ ಬೆಳಸುವರು.

ಬಗಲೂರಿನ ಮೇಲೆ ಪಠಾಣರ ದಾಳಿ

ರೋಮಾಂಚಕ ಘಟನೆಯ ವಿವರಗಳು

[ನಮ್ಮ ವಿಶೇಷ ಪ್ರತಿನಿಧಿಯಿಂದ]

ಹೈದರಾಬಾದ ಪ್ರದೇಶದಿಂದ ಭಾರತದ ಮೇಲಾಗುವ ದಾಳಿಗಳ ಸುದ್ದಿಗಳು ತುಣುಕು ತುಣುಕಾಗಿ ಪತ್ರಿಕೆಗಳಲ್ಲಿ ಆಗಾಗ್ಗೆ ಬರುತ್ತಿರುತ್ತವೆ. ಅದರಿಂದ ಓದಿದ ಜನಕ್ಕೆ ಆ ದಾಳಿಗಳ ಸರಿಯಾದ ಕಲ್ಪನೆ ಬರುವದಿಲ್ಲ. ಅಂಥ ಪ್ರದೇಶಗಳ ಜನರಲ್ಲುಂಟಾಗುವ ದಿಗಿಲು, ದಾಳಿಗಳ ಹಿಂದಿರುವ ಹೇತು ಇವೇ ಮೊದಲಾದವು ಓದುವವರ ಮನಸಿನಲ್ಲಿ ಮಸುಕು ಮಸುಕಾಗಿಯೇ ಬಿಂಬಿಸುತ್ತವೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಹಿಂದ-ಹೈದರಾಬಾದ ಗಡಿ ಹಳ್ಳಿಯಾದ ಬಗಲೂರಿನ ಮೇಲೆ ೪೦—೫೦ ಸಶಸ್ತ್ರ ಪಠಾಣ ಸೈನಿಕರ ದಾಳಿಯಾದ ಇಪತ್ತನಾಲ್ಕು ತಾಸುಗಳಲ್ಲಿ ಆ ಪ್ರದೇಶದಲ್ಲಿ ಸಂಚರಿಸಿದಾಗಲೆ ನನಗೆ ಈ ದಾಳಿಗಳ ಸಾಧಾರಣ ಕಲ್ಪನೆ ಬಂತು.

ಯಲ್ಲಿ ನಿಂತು ಪಠಾಣರ ಮೇಲೆ ಗುಂಡು ಹಾರಿಸಬೇಕಾಯಿತು. ಪೋಲೀಸರ ಗುಂಡು ತಾಗಿ ಒಬ್ಬ ಪಠಾಣನು ಸತ್ತನಲ್ಲದೆ ಮತ್ತೆ ೫ ಜನ ಗಾಯಗೊಂಡರು. ಅದರಿಂದ ಗಾಬರಿಯಾಗಿ ಅವರು ಗುಂಡು ಹಾರಿಸುತ್ತ ಹಾರಿಸುತ್ತ ನಿಜಾಮ ಗಡಿಯೊಳಗೆ ಪಾರಾಗಿ ಹೋದರು. ಸತ್ತ ಸಂಗಡಿಗನನ್ನು ಬಿಟ್ಟು ಹೋದರೆ ಗಂಡಾಂತರವೆಂದುಕೊಂಡು ಅವನನ್ನು ಒಬ್ಬ ಹಳ್ಳಿಗನ ಮೇಲೆ ಹೊರಿಸಿಕೊಂಡು ಪಲಾಯನ ಮಾಡಿದರು. ಹಳ್ಳಿಗನಿಗೆ ಅವನನ್ನು ಹೊತ್ತುಕೊಂಡು ಹೋಗದೆ ಉಪಾಯವೇ ಇರಲಿಲ್ಲ. ಅವನು ಪ್ರಾಣವನ್ನೆ ಕಳೆದುಕೊಳ್ಳಬೇಕಾಗುತಿತ್ತು.

ದಾಳಿಯ ಗೊತ್ತು ಗುರಿ

ಈ ಪಠಾಣ ದಾಳಿಗಾರರು ಬಂದುದು ಹೈದರಾಬಾದದೊಳಗಿನ ಮಾಂಡವಳಿಯೆಂಬಲ್ಲಿಂದು. ಅದು ಗಡಿಯೊಳಗೇ ೯ ಮೈಲು ದೂರದಲ್ಲಿದೆ. ಅವರ ಒಂದು ಶಿಬಿರವೇ ಅಲ್ಲಿದೆ; ತಮ್ಮ ಪ್ರಸಂಗಾವಧಾನದಿಂದ ತಾನು ಬಳೆಗಾರನೆಂದೂ ಆ ಊರವನಲ್ಲವೆಂದೂ ಹೇಳಿ ಸುಟಕೊಂಡನು. ಬೇಗನೆ ಸುದ್ದಿ ತಲಪಿಸೋಣವೆಂದರೆ ಸರಿಯಾದ ರಸ್ತೆ ಕೂಡ ಇಲ್ಲ. ಅಲ್ಲಿಂದ ಮೊರಟಗಿಯ ವರೆಗೆ ೬ ಮೈಲು ಕೆಟ್ಟ ಗಾಡಿ ರಸ್ತೆ. ಮುಂದೆ ತಾಲೂಕು ಸ್ಥಳವಾದ ಸಿಂದಗಿಗೆ ೧೪ ಮೈಲು. ರಜಾಕನು ಒಬ್ಬ ವಾರಿಹೋಕನಿಂದ ಒಂದು ಕುದುರೆಯನ್ನು ಪಡೆದು ಸಿಂದಗಿಗೆ ತಲಪಿದಾಗ ಮೂರು ಗಂಟೆ ಹೊಡೆದಿತ್ತು. ಅಲ್ಲಿಂದ ವಿಜಾಪುರಕ್ಕೆ ಸೈನ್ಯದ ಆಕಾಶವಾಣಿಯಿಂದ ಸುದ್ದಿ ಮುಟ್ಟಿತು. ಅದೂ ಅವಾಸ್ತವ ಸುದ್ದಿ. ಒಂಭತ್ತು ಜನ ಪೋಲೀಸರು ಸತ್ತಿದ್ದರು, ಒಬ್ಬನು ಮಾತ್ರ ಪಾರಾಗಿದ್ದಾನೆಂದು! ಆ ಮೇಲೆ ಡಿ. ಎಸ್. ಪಿ., ಸೈನ್ಯ ಇವೆಲ್ಲ ಹೊರಟು ಬಂದು ತಲಪಿದಾಗ ಪಠಾಣರು ತಮ್ಮ ಕಾಯಕ ಮುಗಿಸಿಕೊಂಡು ಹೊರಟು ಹೋಗಿಬಿಟ್ಟಾಗಿತ್ತು. ಆದರೂ ಅವರು ಬಂದ ಬಳಿಕ ಜನರ ಜೀವನದಲ್ಲಿ ಜೀವ ಬಂದಂತಾಯಿತು.

ಪಠಾಣರು ಸದ್ದಿಲ್ಲದೆ ಹಳ್ಳಿಯಲ್ಲಿನುಗ್ಗಿದರು. ಊರ ಹೊರಗೆ ಕಣ್ಣಿಗೆ ಬಿದ್ದ ಹಳ್ಳಿಗನೊಬ್ಬನನ್ನು ಎಲ್ಲಾದರೂ ಕೂಗಿಕೊಳ್ಳಬಹುದೆಂದು ಅಲ್ಲಿಯೆ ಗುಂಡು ಹಾಕಿ ಕೊಂದರು. ಹಳ್ಳಿಯಿಂದ ೫೦ ಗಜ ದೂರದಲ್ಲಿದ್ದ ಬೇಲಿಯ ಮರೆಗೆ ನಿಂತು ಇನ್ನೊಬ್ಬನ ಮೇಲೆ ಗುಂಡು ಹಾರಿಸಿದರು. ಬಳಿಕ ಮೂರು ದಿಕ್ಕುಗಳಿಂದ ಅವರು ನುಗ್ಗಿದರು. "ಎಲ್ಲಿ ಪೋಲೀಸರು, ಎಲ್ಲಿ ಕಾಂಗ್ರೆಸ್ಸು" ಎಂದು ಅವರ ಆರ್ಭಟಿ.

ಅವರು ಪೋಲೀಸ ಠಾಣೆಯನ್ನು ಮುತ್ತಿದರು. ಪೆಟ್ಟಿಗೆ ಮುರಿದಾಗ ಅವರಿಗೆ ನೂರು ಗುಂಡು ದೊರಕಿದವು. ಪಾಲೀಕಾರನ ಮನೆಯ ಮೇಲೆ ನುಗ್ಗಿ ಅವನನ್ನು ಕೊಂದು ಅವನ ಮಗನನ್ನು ಗಾಯಗೊಳಿಸಿದರು. (ಪಾಲೀಕಾರನ ಮನೆ ಚಿತ್ರದಲ್ಲಿ ನೋಡಿರಿ.) ಹವಾಲದಾರ ಕರೀಮನೂ ಇತರ ಪೋಲೀಸರೂ ಅನಿತು ಕೊಂದು ಗುಂಡು ಹಾರಿಸತೊಡಗಿದ್ದರಿಂದಲೆ ಅವರು ಕಾಲಿಗೆ ಬುದ್ಧಿ ಹೇಳಬೇಕಾಯಿತು.



ಸತ್ತ ಪಠಾಣನ ಶವವನ್ನು ಹೊತ್ತವ: ನಾಗಪ್ಪ ಗುರುಲಿಂಗಪ್ಪ ತಿರಣಗಿ

ಬಗಲೂರಿಂದ ನಾನು ಮರಳುವ ಸ್ವಲ್ಪ ಹೊತ್ತು ಮೊದಲು ಇಂಥ ಪ್ರಸಂಗಗಳಲ್ಲಿ ಜನರು ಯಾವ ಪರಿ ಹೌಹಾರುವರೆಂಬ ಕಲ್ಪನೆ ಬರುವಂತೆ ಒಂದು ಸಂಗತಿ ಜರುಗಿತು. ಹತ್ತಿರದ ಹಳ್ಳಿಯಾದ ಗಟ್ಟರಗಿಗೆ ಪಠಾಣರು ಬಂದಿದ್ದಾರೆಂದು ಯಾರೋ ಸುದ್ದಿ ಹಬ್ಬಿಸಿದರು. ಕಣ್ಣುಮುಚ್ಚಿ ತೆರೆಯುವದರೊಳಗೆ ೬೦೦ ಜನವಸತಿಯ ಆ ಹಳ್ಳಿಯಲ್ಲೆಲ್ಲ ಗದ್ದಲವೋ ಗದ್ದಲ. ಕೆಲವರು ಛಾವಣಿಗಳನ್ನೇರಿ ನೋಡತೊಡಗಿದರು. ಪೋಲೀಸರು ಬಂದೂಕುಗಳನ್ನು ಎದುರಿಗೆ ಹಿಡಿದು ಸನ್ನದ್ಧರಾದರು. ಉಳಿದವರು ಸಿಕ್ಕಾಬಟ್ಟೆ ಓಡತೊಡಗಿದರು. ಐದು ನಿಮಿಷದಲ್ಲಿ ಗಟ್ಟರಗಿಯಿಂದ ಸುದ್ದಿ ಬಂತು. ಅಲ್ಲಿ ಏನೂ ಸಂಭವಿಸಲಿಲ್ಲ.



ಪಠಾಣರ ಗುಂಡಿಗೆ ಆಹುತಿ: ಗಾಯಬಿದ್ದು ಪಟ್ಟಿಸ್ತ ಕೋರನಾರ ಹಾಗು ಭಗವಂತರಾವ ಪಾಲಿಕಾರ ಸಿಂದಗಿ ಆಸ್ಪತ್ರೆಯಲ್ಲಿನ ದೃಶ್ಯ

ನಟ್ಟನಡು ಹಗಲಲ್ಲಿ ಈ ದಾಳಿ ಅಕಾರಣವಾಗಿ ಜರಗಿತು. ಧನ-ಆಯುಧ ಸಾಮಗ್ರಿಗಳಿಗಾಗಿಯೇ ದರೋಡೆ ನಡೆದಂತೆ ತೋರುತ್ತದೆ. ೦.೪೧೦ ಆಕಾರದ ಒಂದು ಬಂದೂಕನ್ನೂ ೭೦ ಸುತ್ತು ಗುಂಡುಗಳನ್ನೂ ಸುಮಾರು ೧೩೫೦ ರೂಪಾಯಿಗಳನ್ನೂ ದಾಳಿಗಾರರು ಕೊಳ್ಳೆ ಹೊಡೆದುಕೊಂಡೊಯ್ದರು. ಈ ಸಾಹಸದಲ್ಲಿ ಅವರು ಇಬ್ಬರು ನಿರಪರಾಧಿಗಳನ್ನು ಕೊಂದರಲ್ಲದೆ (ಚಿತ್ರ ನೋಡಿರಿ) ಮೂವರನ್ನು ಗಾಯಗೊಳಿಸಿ ಹೋದರು. ಸಿರಸಗಿಗೆ ಹೋಗಬೇಕಾಗಿದ್ದ ಪೋಲೀಸ ಪಡೆ ಏನೋ ಸುದೈವದಿಂದ ಇನ್ನೂ ಅಲ್ಲೇ ಉಳಿದದ್ದರಿಂದಾಯಿತು: ಅವರ ಸಂಖ್ಯೆ ದಾಳಿಗಾರರೊಡನೆ ಎದುರಾಎದುರು ಕಾದಾಡಲು ಸಾಲುವಷ್ಟಿದ್ದಿಲ್ಲ. ಆದುದರಿಂದ ಅವರು ಮರೆ ಸಂಖ್ಯಾಬಲ ಕಡಿಮೆಯಾಗಿದ್ದುದರಿಂದ ನಮ್ಮ ಪೋಲೀಸರು ಅವರನ್ನು ಬೆಂಬತ್ತಿ ಹೋಗುವಂತಿದ್ದಿಲ್ಲ. ನಮ್ಮ ಸೈನ್ಯಪಡೆಗೆ ಸುದ್ದಿ ಮುಟ್ಟಿ ಅದು ಬಂದು ತಲಪಿದಾಗ ನಡುರಾತ್ರಿಯಾಗಿತ್ತು. ಆದುದರಿಂದ ಗಡಿಯಲ್ಲಿ ನುಗ್ಗಿ ಅವರನ್ನು ಹೊಡೆದು ಬರುವದೂ ಸಾಧ್ಯವಿದ್ದಿಲ್ಲ.

ಪಠಾಣ ದಾಳಿಗಾರರು ಬಗಲೂರನ್ನು ಸಮೀಪಿಸುತಿದ್ದಾಗಲೆ ಅಲ್ಲಿಂದ ಒಂದು ಫರ್ಲಾಂಗಿನ ಮೇಲಿದ್ದ ಒಂದು ಹಳ್ಳಕ್ಕೆ ಸ್ನಾನಮಾಡಲು ಹೋಗಿದ್ದ ಅಬ್ದುಲ ರಜಾಕನೆಂಬ ಪೋಲೀಸ ಶಿಪಾಯಿಗೆ ಅವರು ಎದುರಾದುದು ಒಂದು ಸುದೈವವೆಂದೇ ಹೇಳಬೇಕು. ಪಠಾಣರು ಅವನನ್ನು ಹಿಡಿದು ಹಳ್ಳಿಯ ಸಂಗತಿಗಳನ್ನು ಅರಿತುಕೊಳ್ಳಲು ಪ್ರಯತ್ನಿಸಿದರು. ರಜಾಕನು



ಬಗಲೂರಿನ ದಾಳಿಗಾರರನ್ನು ಓಡಿಸಿದ ಪೋಲೀಸರು

ಸಿಂದಗಿಯ ಆಸ್ಪತ್ರೆಯಲ್ಲಿ ನಾನು ಅವರ ದಾಳಿಗೆ ಆಹುತಿಯಾದ ಇಬ್ಬರನ್ನೂ ಅವರ ಬಳಗದವರನ್ನೂ ಕಂಡೆ. ಮೊರಟಗಿಯಲ್ಲಿ ಹೈದರಾಬಾದದಿಂದ ಬಂದ ಅನೇಕ ನಿರಾಶ್ರಿತರನ್ನೂ ನೋಡಿದೆ.

ಈ ರೀತಿಯ ಗಾಬರಿಯಾಗುವದು ತೀರ ನಾಚಿಕೆಗೇಡು. ನಮ್ಮ ಸನ್ನಾಹ, ಎಚ್ಚರಿಕೆ ಸಾಲದುದರಿಂದಲೇ ಇಂಥ ಘಟನೆಗಳಾಗುತ್ತವೆಯೆಂಬದು ನಿಜ. ಆದರೆ ಜನರಲ್ಲಿ ಸರಿಯಾದ ಸಂಘಟನೆಯಿಲ್ಲದಿರುವದರಿಂದ ಇನ್ನಷ್ಟು ಕೆಡಕುಂಟಾಗುತ್ತದೆ. ಅತ್ತ ನಾವು ಗಮನಿಸಲೇಬೇಕು.



ದಾಳಿಗಾರರು ಪಾಲೀಕಾರನನ್ನು ಕೊಂದ ಸ್ಥಳ



ಹೈದರಾಬಾದ ನಿರಾಶ್ರಿತರ ಕುಟುಂಬ

ಜನಮತ

ವಿವಿಧ ಪ್ರಪಂಚ

[ಓದುಗರ [illegible] ಪ್ರಕಟಿಸಲಾಗದಂದಿದ್ದವರು ಹಾಗೆ ತಿಳಿಸಿ ಅವನ್ನು ಗುಚ್ಛವಾಗಿಡಲಾಗುವುದು.]

— ಸಂ

ಸ್ತ್ರೀಯರೂ ನೌಕರಿಯೂ

ಹಕ್ಕಿಗಾಗಿ ಸ್ತ್ರೀಯರು ಪುರುಷರೊಡನೆ ಸ್ಪರ್ಧಿಸುವುದರಲ್ಲಿ ತಾತ್ವಿಕವಾಗಿ ನ್ಯಾಯವಿದೆ; ಆದರೆ ಸಮಾಜದ ಕುಟುಂಬ ಜೀವನದ ದೃಷ್ಟಿಯಿಂದ ಮತ್ತು ಪ್ರಜೆಗಳಿಂದ ವಸೂಲು ಮಾಡುವ ಕಂದಾಯದ ಖರ್ಚಿನ ದೃಷ್ಟಿಯಿಂದ ಹೆಂಗಸರು ನೌಕರಿಗೆ ಸೇರುವುದರಂಥ (ಇಲ್ಲವೆ ವ್ಯಾಪಾರ ಮಾಡುವುದು) ಜೀವಿಕಾನಿರ್ವಹಣ ವೃತ್ತಿಯನ್ನು ಹಿಡಿದರೆ ಹೊಟೇಲ ಜೀವನ ಇಲ್ಲವೆ, ನೌಕರನಿಂದ ಮನೆಗೆಲಸ ಮಾಡಿಸಿಕೊಳ್ಳುವ ಮತ್ತು ಶಿಶು ಸಂಗೋಪನಾದಿಗಳನ್ನು ಮಾಡಿಸಿಕೊಳ್ಳುವ ಅಹಿತವೂ ಕೆಲವೊಮ್ಮೆ ಅಸಾಧ್ಯವೂ ಅಪಾಯಕಾರಕವೂ ಆದ ಸ್ಥಿತಿ ದಂಪತಿಗಳಿಗೆ ಉಂಟಾಗುತ್ತದೆ. ವಿನೆಯವಾಗಿ ಸರಕಾರ ಅವರಿಗೆ ಗರ್ಭಕಾಲ ಪ್ರಸೂತಿಕಾಲಗಳಲ್ಲಿ ತಿಂಗಳುಗಟ್ಟಲೆ ರಜೆಯ ಮೇಲೆ, ಕಳಿಸಬೇಕಾಗಿ ಅಡಳಿತದ ವೆಚ್ಚ ಹೆಚ್ಚಾಗುವುದು; ಹಾಗಲ್ಲದೆ ಉದ್ಯೋಗದಲ್ಲಿ ಶ್ರಮಿಸುತ್ತ ಹೋದರೆ ಅವರ ಗರ್ಭಧಾರಣ ಶಕ್ತಿ ಮತ್ತು ಗರ್ಭಪೋಷಣ ಶಕ್ತಿಗಳು ಕುಂದುವ ಸಂಭವವಿರುವುದಲ್ಲದೆ, ಮಕ್ಕಳಿಗೆ ಬಾಲ್ಯದಲ್ಲಿ ಮಾತೃಪ್ರೇಮದ, ಸಹವಾಸದ ಅಮೃತಪಾನ ಅಲಭ್ಯವಾಗುತ್ತದೆ. ಸಾಕ್ಷಾತ್ ಹಡೆದವಳು ತನ್ನ ಕೂಸುಗಳ ಸೇವೆ ಮಾಡುವುದನ್ನು ಬಿಟ್ಟು ಅನ್ಯರು ಮಾಡುವುದು ಅನ್ಯರಿಗೂ ಶಿಶುವಿಗೂ ಹಿತಕರವಲ್ಲ, ಚೆನ್ನಾಗಿಯೂ ಆಗಲಾರದು. ಗಂಡಸು ದುಡಿದರೆ ತಾನೂ ದುಡಿದಂತೆ, ಅವರ ಅರ್ಧ ತನ್ನದು ಎಂಬ ಹಕ್ಕು ಹೆಂಡತಿಗೆ ಬಂದರೆ ಸಾಲದೇನು? ಈ ಮಾತುಗಳನ್ನಾಡಿರುವುದು ಸಾರ್ವತ್ರಿಕದೃಷ್ಟಿಯಿಂದ. ಒಬ್ಬಿಬ್ಬರು ಸಾಮಾಜಿಕ ಅನಾನುಕೂಲತೆಗಳಿಂದ ನೌಕರಿ, ವ್ಯಾಪಾರ ಮುಂತಾದ ಜೀವಿಕಾನಿರ್ವಹಣೋಪಾಯವನ್ನು ಕೈಕೊಳ್ಳಬಾರದೆಂದಲ್ಲ. ಹಿರಿದಿನ ಅಂಥಯುಗದ [illegible]ಜನ್ಮ ಜೀವನಕ್ರಮದಿಂದ ಹೀಗೆಳೆಯಲ್ಪಟ್ಟು ಎಳ್ಳೆತ್ತಕೀಲ ಹೆಂಗಸರಿಂದು ಹೇಳುವದರಲ್ಲಿ ಸತ್ಯಾಂಶವಿದೆ, ಅವರಿಗೆ ಹಕ್ಕಿಲ್ಲ; ಆದರೆ ಅದನ್ನು ಅತಿಗೇರಿಸುವುದರಿಂದ ಅಮೇರಿಕದ ವಿದ್ಯಾಂಸರಾದ ನರನಾರಿಯರಿಂದು ಕಳವಳಿಸುವಂತೆ ಕುಟುಂಬಜೀವನಕ್ಕೆ ಕುಠಾರ ಬಿದ್ದೀತು.

—ಕೃಷ್ಣರಾವ

\+ \+ \+

ಗೋವಿನ ಜೋಳ ಭಕ್ಷಣೋಪಾಯ

ಮಾನ್ಯ ಸಂಪಾದಕರೆ,

ನಿಮ್ಮ ೧೨-೭-೪೮ ರ ಪತ್ರಿಕೆಯಲ್ಲಿ ಒಬ್ಬ ಕಾರ್ಯಕರ್ತನು ಗೋವಿನ ಜೋಳದ ಉಪಯೋಗ ಹೇಗೆ ಮಾಡಿಕೊಳ್ಳಬೇಕು ಎಂದು ಕೇಳಿದ್ದನು. ಅದಕ್ಕೆ ನನ್ನ ಸೂಚನೆ ಹೀಗಿದೆ: ಗೋವಿನಜೋಳವನ್ನು ನೀರಿನಲ್ಲಿ ೨ ತಾಸು ನೆನೆಯಲಿಕ್ಕೆ ಇಟ್ಟು ಅನಂತರ ಅದನ್ನು ಥಳಿಸಬೇಕು. ಆಗ ಅದರ ಎಲ್ಲ ತವುಡು ಹೋಗಿ ಅದು ಬೆಳ್ಳಗಾಗುವದು; ಗಿರಣಿಯವರೂ ಹಾಕಿಕೊಡುವರು. ಅದನ್ನು ಬೀಸಿ ತಂದಲ್ಲಿ ಉತ್ತಮ ಜಳ್ಳಿಗೆ [illegible] ಅದರಿಂದ ನೀವು ಉಪ್ಪಿಟ್ಟು [illegible] ಮಾಡಿಕೊಂಡರೂ [illegible] ಅದು ಬಲು ರುಚಿಕರವಾಗುವದು. ನಾನು ಯೋಗ್ಯವಿದ್ದ ಅಂಗಡಿ ಸುರು ಮಾಡಿದ[illegible] ಈ ಪ್ರಯೋಗ ಮಾಡಿ ಯಶಸ್ಸು ಪಡೆದಿದ್ದೇನೆ.

ಗದಗ —ಎ. ಬಿಂದುಮಾಧವ.

[ಶ್ರೀ ಬಿಂದು ಮಾಧವರ ಸೂಚನೆಯನ್ನು ನಮ್ಮ [illegible] ಪ್ರಯೋಗಮಾಡಿ ನೋಡಿ ಪರಿಣಾಮ ತಿಳಿಸುವೆವು. ಅದು ಯಶಸ್ವಿಯಾದರೆ ನೆರೆಯವರಿಗೆ ತಿಳಿಸಲಿ. ಅದೂ ಒಂದು ಸಮಾಜಸೇವೆಯೇ—ಸಂ]

ಆದರ್ಶರಾಜ್ಯ

ದ. ಅಮೇರಿಕದ ರಯೋದಿ ಲಾಪ್ಲಾಟಾ ಎಂಬಲ್ಲಿ ೨೫೦ ಜನರು ಸೇರಿ ತಮ್ಮ ದೇಶದ ಒಂದು ಪ್ರಜಾರಾಜ್ಯವನ್ನು ಸ್ಥಾಪಿಸಿಕೊಂಡಿದ್ದಾರೆ. ಅವರಿಗೆ "ಪಾರ್ವಿನ್ಸ್" ಗಳೆಂದು ಹೆಸರು. ಅವರು ಒಮ್ಮೆ ಸೇರಿದಾಗ ನ್ಯಾಯವಾಗಿ ಬದುಕುವ ಬಗ್ಗೆ ವಿಚಾರ ಮಾಡಿದರು. ಅಂದು ೧೮೦೦ ನೆಯ ವರ್ಷ. ಜುಕೇಲಿ ಎಂಬವನು ಮೊದಲು ಆ ಪ್ರಶ್ನೆಯನ್ನೆತ್ತಿದ: 'ಇಂದಿನ ಜೀವನದಲ್ಲಿ ನಮಗೆ ಸಿಗುವುದು ಚಿಂತೆ, ಅಸೂಯೆ, ಡಂಭ ಮತ್ತು ಕಾಪಟ್ಯ; ಇವು ನಮಗೆ ಬೇಡ. ಸ್ನೇಹ, ನಗೆ, ಶಾಂತಿಗಳು ನಮಗೆ ಬೇಕಾದಾಗ ಸಿಗಬೇಕು' ಎಂದು ಕುಳಿತವರು ದನಿಯೆತ್ತಿದರು.

ವಿವೇಚನೆಯಿಂದ ಸಭೆ ಸೇರಿದ ಜನರು ನಿರ್ಣಯಕ್ಕೆ ಬಂದು ಉಳಿದ ಜಗತ್ತು 'ಹುಚ್ಚಿದೆ'ಯೆಂದೂ ತಾವು ಅದರಿಂದ ಪ್ರತ್ಯೇಕವಾಗಿ ತಮ್ಮದೊಂದು ರಾಜ್ಯವನ್ನು ಸ್ಥಾಪಿಸಬೇಕೆಂದೂ ಸಾರಿದರು. ಆ ಪ್ರಕಾರ ಅವರು ತಮ್ಮ ರಾಜ್ಯವನ್ನು ಅತಿ ಸಂಸ್ಕೃತಿಸೆ ಮುಟ್ಟಿದ ರೀತಿ ನೀತಿಗಳಂತೆ ಸ್ಥಾಪಿಸಿ ನಡೆಸತೊಡಗಿದರು. ಬೇರೆ ಬೇರೆ ನಡೆಗಳಲ್ಲಿ ಯಾರು ಯಾರಿಗೆ ಯಾವ ಯಾವ ಸ್ಥಾನ ಮಾನಗಳಿದ್ದರೂ ಪ್ರಜಾರಾಜ್ಯದೊಳಗೆ ಕಾಲಿಟ್ಟೊಡನೆ ಅವರೆಲ್ಲರಿಗೂ ಅಕ್ಷರಶಃ ಒಂದೇ ಮಟ್ಟದ ಮಾನ ಮರ್ಯಾದೆಗಳು ಲಭಿಸುವುವು. ಅಲ್ಲಿಯ ಮೊದಲ ಕಾಯದೆಯಂತೆ ಅಲ್ಲಿ ಯಾರೂ ರಾಜಕಾರಣ, ವ್ಯಾಪಾರ, ಧರ್ಮಶ್ರದ್ಧೆ, ಸ್ವಪ್ರಾಮುಖ್ಯಗಳನ್ನು ಮಾತಿಗೆ, ತೆಗೆದುಕೊಳ್ಳುವುದಿಲ್ಲ. ಹೀಗೆ ಮನುಷ್ಯರ ಕೃತಕತೆಯನ್ನು ಬಹಿಷ್ಕರಿಸಿದ್ದರಿಂದ ಆ ಪ್ರಜಾರಾಜ್ಯವೇ ಇಡಿ ಜಗತ್ತಿನಲ್ಲೇ ಅತ್ಯಂತ ಹೆಚ್ಚು ನಾಗರಿಕ ರಾಜ್ಯವಾಗಿದೆ ಎಂದು ಅವರೆನ್ನುತ್ತಾರೆ. ಸ್ವಾಮಿಭೃತ್ಯ, ಉಚ್ಚನೀಚ, ಸಬಲ ಅಬಲ, ಸ್ತ್ರೀಪುರುಷ ಭೇದಗಳಿಗೆ ತಿಲಾಂಜಲಿಯಿತ್ತು ದೀನ ಧನಿಕ ಮುಂತಾಗಿ ಎಲ್ಲವರೂ ಸಾಮರಸ್ಯದಿಂದ ಪರಸ್ಪರರನ್ನು ಸುಖದಲ್ಲಿಡುವುದೇ ತಮ್ಮ ಅತ್ಯಂತಿಕ ಧ್ಯೇಯವೆಂದು ತಿಳಿದು ಆ ರೀತಿ ನಡೆದುಕೊಳ್ಳುತ್ತಿದ್ದಾರೆ.

ಜೀವನದ ಸರ್ವ ಅನವಶ್ಯಕ ವಸ್ತುಗಳನ್ನೂ ತ್ಯಜಿಸುವುದು ಅದರ ಧೋರಣ; ಉಳಿದವರು ಎಷ್ಟು ಹುಚ್ಚರೆಂದು ತೋರಿಸುವುದೇ ಪಾರ್ವಿನ್ಸಿಗಳ ವಿದೇಶನೀತಿ. ಒಕ್ಕಟ್ಟಿಗೆ ತಳಹದಿಯೆಂದು ವಾರಕ್ಕೊಮ್ಮೆ ಅವರೆಲ್ಲರೂ ಸಾರ್ವಜನಿಕ ಸಮಾರಾಧನೆ ನಡೆಸುತ್ತಾರೆ. ಸಾರಾಗಿ ೨೫೦ ಜನರೂ ಕುಳಿತು ಆನಂದದಿಂದ ಉಣ್ಣುತ್ತಾರೆ; ಅಡಿಗೆ ಭಟ್ಟನೇ ಅಲ್ಲಿ ದೊಡ್ಡ ಅತಿಥಿ. ಜಗತ್ತಿನ ರೀತಿ ನೀತಿಗಳ ಹುಚ್ಚುತನವನ್ನು ಹೊರಗೆಡಹುವ ಮುಖ್ಯ ಸಾಧನವೆಂದರೆ ನಡೆನುಡಿಗಳಲ್ಲಿ ಅಣಕದಿಂದ ವರ್ತಿಸುವುದು; ಚಿನ್ನವಲ್ಲ ಕಬ್ಬಿಣವಲ್ಲ; ಜಗತ್ತಿನಲ್ಲಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿಕೊಡುವುದು ಧೂಳು ಎಂದು ವೈಜ್ಞಾನಿಕವಾಗಿ ಅಲ್ಲಿಯ ಪಂಡಿತರು ತೋರಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬನೂ ಅಲ್ಲಿ ತನ್ನ ಸಂಗಾತಿಯ ಜ್ಞಾನಭಾರವನ್ನು ಹೆಚ್ಚಿಸಬೇಕೆಂಬ ನಿಯಮವಿದೆ. ಈ ರಾಜ್ಯಪದ್ಧತಿಯು ಜಗತ್ತಿಗೇ ಒಂದು ಉತ್ತಮ ಆದರ್ಶವಲ್ಲವೆ?

ಮಂಗನ ಆಮರಣ ಉಪವಾಸ

ಒಂದು ಮಂಗವು ತನ್ನ ಮರಿಯನ್ನು ಕಳೆದುಕೊಂಡು ಅದರ ಶೋಧ ಮಾಡಿ ಕಡೆಗೆ ನಿರಾಶೆಗೊಂಡು ಉಪವಾಸ ಮಾಡಿ ಸತ್ತಿತು. ಈ ಮಂಗವು ೭ ದಿನಗಳಿಂದ ಏನೂ ಆಹಾರ ಸ್ವೀಕರಿಸದೆ ಪ್ರಾಣ ಬಿಡುವವರೆಗೂ ಉಪವಾಸ ಕುಳಿತಿತ್ತು. ಇದನ್ನು ನೋಡಲು ದಿನಾಲು ನಾವಿರಾರುಜನರು ನೆಗೆ [illegible]ರುತ್ತಿದ್ದರು. ಮಂಗವು "[illegible] ಆಮರಣ ಉಪವಾಸ ವ್ರತ" ಹಿಡಿದದ್ದು ಕಂಡು ಕೆಲವರು ಕಳೆದು ಹೋದ ಮಂಗನ ಮರಿಯನ್ನು ತಂದುಕೊಟ್ಟವರಿಗೆ ಇನಾಮು ಕೊಡುವದಾಗಿ ಸಾರಿದರು. ಆದರೆ ಮಂಗನಮರಿಯ ಶೋಧವಾಗಲಿಲ್ಲ. ಏಳು ದಿನ ಉಪವಾಸವಿದ್ದು ಮಂಗವು ಇಂದು ಪ್ರಾಣ ಬಿಟ್ಟಿತು. ಕೃತಕ ಉಪಾಯಗಳಿಂದ ಗರ್ಭಪಾತ ಮಾಡುವ ನಾರಿಯರಿಗೆ ಈ ಮಂಗ ಒಂದು ಪಾಠಕಲಿಸಿದಂತಾಗಲಿಲ್ಲವೇ?

ಮರಣೋತ್ತರ ಜೀವನ

ಹೃದಯಕ್ರಿಯೆ ನಿಂತ ಮೇಲೆ ಮಾನವನ ಅನೇಕ ಅಂಗಗಳು ಬದುಕಿರುತ್ತವೆ. ಆದರಿಂದಲೇ ಅನೇಕ ವೇಳೆ ಅಂಗಹೀನರಿಗೆ ಸತ್ತವರ ಯೋಗ್ಯ ಅಂಗಗಳನ್ನು ತೆಗೆದು ಜೋಡಿಸುವದನ್ನು ವೈದ್ಯವಿದ್ಯೆ ಯಶಸ್ವಿಯಾಗಿ ನಡೆಸಿದೆ.

ಪ್ರಯೋಗದಿಂದ ದೇಹಭಾಗಗಳು ಮರಣಾನಂತರ ಬದುಕಿರುವದನ್ನು ಶೋಧಿಸಲಾಗಿದೆ. ಇಲ್ಲಿ ಕೆಲವು ಉದಾಹರಣೆಗಳಿವೆ; ಮನುಷ್ಯ ಸತ್ತ ಮೇಲೆ ಅವನ ಮಿದುಳು ೧೦ ನಿಮಿಷ ಬದುಕಿರುತ್ತದೆ; ಹೃದಯದ ಮಾಂಸ ಖಂಡಗಳು ೨೦ ನಿಮಿಷ ಜೀವಿಸಿರುತ್ತವೆ; ಕಣ್ಣುಗಳು ೩೦ ನಿಮಿಷದ ವರೆಗೆ, ಕಿವಿಗಳು ೧ ಗಂಟೆಯ ಕಾಲ, ಕಾಲು ಮತ್ತು ಕೈಯ ಮಾಂಸಗಳು ೪ ಗಂಟೆಗಳ ತನಕ; ರಕ್ತಕಣಗಳು ೧೪ ಗಂಟೆಗಳ ವರೆಗೆ ಬದುಕಿರುತ್ತವೆ; ಮೂಳೆಗಳ ಮರಣೋತ್ತರ ಜೀವನ ೩ ದಿನ; ಚರ್ಮ ೫ ದಿನಗಳ ನಂತರ ಸಾಯುವದು. ಈ ವಿಷಯವನ್ನು ಸ್ಟಾಕ್‌ಹೋಮಿನ ಹೆಮ್ಮೆಟ್ಸ್ ಜರ್ನಲ್ಲಿನಲ್ಲಿ ಒಮ್ಮೆ ಹೇಳಲಾಗಿತ್ತು.

ಉಗುರಿನ ಮಹತ್ವ

ಉಪಯುಕ್ತವೆನಿಸುವ ವಸ್ತು ಹಿತಕರವೂ ಸುಂದರವೂ ಸುಖಕರವೂ ಆಗಿತೋರುತ್ತದೆ. ಅದು ಕೆಲವೊಮ್ಮೆ ಮನಸ್ಸಿಗೆ, ಕೆಲವೊಮ್ಮೆ ದೇಹಕ್ಕೆ, ಮತ್ತೆ ಕೆಲವೊಮ್ಮೆ ಎರಡಕ್ಕೂ



ಕ್ಯಾ. ಚಾರಲ್ಸ ಈ. ಯೇಗರ್, ಮೇಜರ್ ಗಸ್ ಲಂಡಕ್ವಿಸ್ಟ್, ಕ್ಯಾ. ಜೇಮ್ಸ್ ಫಿಟ್ಸ ಜೆರಾಲ್ಡ—ಇವರು ರಾಕೆಟ್ ವಿಮಾನದಲ್ಲಿ ಶಬ್ದವೇಗಕ್ಕಿಂತ ಹೆಚ್ಚಿನ ವೇಗದಿಂದ ಹಾರಿದ ಸಾಹಸಿಗಳೆನಿಸಿದ್ದಾರೆ.

ಉಪಯುಕ್ತವೆನಿಸಬಹುದು. ಇದು ಮನುಷ್ಯ ದೃಷ್ಟಿಯ ತರ್ಕಶುದ್ಧವ್ಯಾಖ್ಯೆಯೆಂಬುದು ಅನುಭವ ಸಿದ್ಧವಾದುದು. ಇದಕ್ಕೆ ಉಗುರೊಂದು ಉತ್ತಮ ಉದಾಹರಣೆ. ಅದು ಬೆರಳಿಗಿಂತ ಗಟ್ಟಿಯಾದರೂ ಅದಕ್ಕೆ ತನ್ನದೇ ಆದ ಒಂದು ಸೌಂದರ್ಯವಿದೆ. ಬೆರಳಿನ ರಕ್ಷಣೆ ಅದರ ಪಾಲಿಗೇ ಸೇರಿದ್ದು. ಅದರ ಅಂದವನ್ನು ಹೆಚ್ಚಿಸಲು ಹೆಂಗಸರು ಮಾಡುವ ಪ್ರಯತ್ನ ಸುವಿದಿತ.

ಉಗುರಿನಿಂದ ರೋಗ ಮತ್ತು ಆರೋಗ್ಯಗಳ ಚಿಹ್ನವನ್ನು ತಿಳಿಯಬಹುದೆಂದು ಅದರ ಮತ್ತೊಂದು ಉಪಯೋಗವನ್ನು ಚೀರಿಯೋ ಮತ್ತು ನೋಯೆಲ್ ಜಾಕಿನ್ ಎಂಬ ವಿದೇಶೀ ವಿಜ್ಞಾನಿಗಳು [illegible]ಶೋಧಿಸಿದ್ದಾರೆ. ಉಗುರಿನಲ್ಲಿ ರಕ್ತಚಲನೆಯನ್ನು ಕಾಣಬಹುದಾದುದರಿಂದ ತನ್ಮೂಲಕ ರಕ್ತಸಂಚಾರ, ರಕ್ತದ ಲಕ್ಷಣ ಇದನ್ನು ತಿಳಿದು ಆರೋಗ್ಯ ಪ್ರಮಾಣವನ್ನು ನಿರ್ಣಯಿಸಬಹುದು. ಉಗುರಿನ ಸ್ವಾಭಾವಿಕ ಬಣ್ಣ ಬದಲಿಸಿದ್ದರೆ ಅದು ಕೆಟ್ಟ ರೋಗಗಳನ್ನು ಸೂಚಿಸುತ್ತದೆ. ಉಗುರು ಹಳದಿಗೆ ತಿರುಗಿದರೆ ಕಾಮಾಲೆ, ಕರ್ರಗಾದರೆ ಪಾರ್ಶ್ವವಾಯು, ಹೀಗೆ ರೋಗದ ಗುರುತು ಹತ್ತುತ್ತದೆ. ಇದರ ಮೇಲೆ ಇನ್ನೊಂದು ಹೊಸ ಲಕ್ಷಣವಿದೆ. ಉಗುರನ್ನು ಕಚ್ಚುವ ಅಭ್ಯಾಸವಿದ್ದರೆ ಅದು ಹೃದಯದೌರ್ಬಲ್ಯವನ್ನು ಸೂಚಿಸುವುದಂತೆ! ನರಗಳ ಜಾಲ ಕೆಟ್ಟು ಸರಿಯಾಗಿ ರಕ್ತಸಂಚಾರವಾಗದಾಗ ಉಗುರಿನ ನುಣುಪು ಹೊಳಪುಗಳು ಹೋಗಿ ವಿವರ್ಣತೆಯುಂಟಾಗುತ್ತದೆ; ಮತ್ತು ಬೆರಳಿನ ತುದಿ ಒರಟಾಗಿ ಉಗುರಿನ ಕ್ಷಣ ಅನವಶ್ಯಕವಾಗುತ್ತದೆ. ಆಗ ಮನಸ್ಸಿಗೆ ಅದು ಅನವಶ್ಯಕ, ಅಲವರಿಕೆಯದು ಎನಿಸಿ ಅಪ್ರಯತ್ನತಃ ನಾವು ಉಗುರನ್ನು ಕಚ್ಚಲಾರಂಭಿಸುತ್ತೇವೆ!

ರೂಪದಾಸ್ಯ

ಹುಟ್ಟಿದ ಪ್ರತಿಯೊಂದು ವ್ಯಕ್ತಿಗೂ ಸಮಾಜದಲ್ಲಿ ಸ್ವಲ್ಪಮಟ್ಟಿಗಾದರೂ ಗಣ್ಯತೆ ಬರಬೇಕಾದರೆ ಅವನ(ಳ)ಲ್ಲಿ ಏನಾದರೊಂದು ವಿಶೇಷ ಗುಣವಿರಬೇಕು. ಬಹಳ ಕಾಲದಿಂದ ಜೀವನಕ್ಕೆ ಅಧಾರವಾದ ಅರ್ಥಸಂಗ್ರಹವನ್ನು ಪುರುಷ ಮಾಡುತ್ತ ಬಂದು ಅವನ ಕೊಳ್ಳುವ ಶಕ್ತಿ ಅವನ ಪ್ರಕೃತಿ ಸಹಜ ಸಾಮರ್ಥ್ಯಕ್ಕೆ ಸರಿಯಾಗಿ ಹೆಂಗಸನ್ನು ಮೀರಿ ನಿಂತಿತು. ಅವನು ಕೊಳ್ಳಲಾರದ ವಸ್ತುವೇ ಇಲ್ಲವೆಂದು ತಿಳಿಯುತ್ತ ಬಂದನು. ಅಂಥ ಸಮಯದಲ್ಲಿ ಸ್ತ್ರೀಯು ತನ್ನ ರೂಪವನ್ನು ವಜ್ರ ವೈಡೂರ್ಯಗಳ ಬೆಲೆಗೆ ಮಾರಿಕೊಂಡು ವಿಜಯದ ನಗೆ ನಕ್ಕುದುಂಟು. ಅದಕ್ಕೆ ಉದಾಹರಣೆಯಾಗಿ ೧೯೧೫ರಲ್ಲಿ ಮೇಡಲೋಯಿಯೆಂಬ ನಾರಿ ತನ್ನ ಕೆನ್ನೆಯನ್ನು ಒಂದು ಮುತ್ತಿಗೆ ಒಡ್ಡಲು ೧೨ ಸಾವಿರ ಪೌಂಡುಗಳನ್ನು ಸೆಂಟ್ ಅಲ್ಬಿಸ್ಸಿನ ಡ್ಯೂಕನಿಂದ ಹರಾಜಿನಲ್ಲಿ ಪಡೆದದ್ದನ್ನು ತೆಗೆದುಕೊಳ್ಳಬಹುದು. ಇದಲ್ಲದೆ ರೂಪಾಜೀವೆಯೆಂದು ವೇಶ್ಯೆಯರಿಗೆ ಹೆಸರುಬರಲೂ ಅವರಿಗೆ ರೂಪವೊಂದೇ ಬಂಡವಾಳವಾಗಿ ಉಳಿದುದಕ್ಕೆ ಸಾಕ್ಷಿ. ಈ ಹುಚ್ಚಿಗೆ ಪುರುಷರು ನೀರೆರೆದು ಪಾಶ್ಚಾತ್ಯರಲ್ಲಿ ರೂಪದಾಸರ ಸಂಖ್ಯೆ ಹೆಚ್ಚಿದೆ. ಹೆಣ್ಣೆಂದಕೂಡಲೆ ಗಂಡಿಗಿಂತ ಸುಂದರಿಯೆಂದೂ ಗಂಡೆಂದ ಕೂಡಲೆ ಅವನು ಕುರೂಪಿಯಿದ್ದು ಧನದಾನದಿಂದ ಅವಳು ಹೇಳಿದಂತೆ ಕೇಳಿ ಒಲಿಸಿಕೊಳ್ಳಬೇಕೆಂದೂ ಸ್ತ್ರೀಪುರುಷರಿಬ್ಬರೂ ತಿಳಿಯುತ್ತ ಬಂದರು. ಸ್ತ್ರೀ ತನ್ನ ರೂಪಭ್ರಾಂತಿಗೆ ಅಳಾಗಿ ಬುದ್ಧಿಶೂನ್ಯಳಂತೆ ವರ್ತಿಸಿ ತನ್ನ ಮತ್ತು ತನ್ನವನ ಜೀವನವನ್ನು ಹಾಳುಗೆಡಹಿದ ಅನೇಕ ಉದಾಹರಣೆಗಳು ಪ್ರತಿನಿತ್ಯ ಪಶ್ಚಿಮದಿಂದ ಕೇಳಿಬರುತ್ತವೆ. ವಿವೇಕವನ್ನೂ ಗಾಂಭೀರ್ಯವನ್ನೂ ಅಲಕ್ಷಿಸಿ ದಳಅವಳು ಸಂದರ್ಭೋಚಿತವಲ್ಲದ ತನ್ನ ವಿಸಂಗತ ನಡತೆಯಿಂದ ದುರಂತವನ್ನು ತಂದುದಕ್ಕೆ ಸಾಹಿತ್ಯದಲ್ಲೂ ಬಹಳ ನಿದರ್ಶನಗಳಿವೆ. ಶೇಕ್ಸ್ಪಿಯರನ ನಾಟಕಗಳ ಕಥಾನಾಯಿಕೆಯರಲ್ಲಿ ಸುಂದರಿ ಜೂಲಿಯಟ್ಟಳು ೯೭ ಸಾಲುಗಳನ್ನು ಮಾತ್ರ ತನ್ನ ಪ್ರಿಯತಮನೊಡನೆ ಮಾತಾಡುತ್ತಾಳೆ. ಆದರೆ ಮತ್ತೊಂದು ನಾಟಕದ ಕಥಾನಾಯಕನಾದ ಸುಂದರ ಹ್ಯಾಮ್ಲೆಟ್ಟನು ೧೫೬೯ ಸಾಲುಗಳಷ್ಟು ಮಾತಾಡಿದ್ದಾನೆ. ಸ್ತ್ರೀಗೆ ಇಂಥ ಹಠಬದ್ಧ ಮೌನ ಹಿಡಿಯಲು ಅವಳಲ್ಲಿಯ ರೂಪ ಭ್ರಾಂತಿಯ ಡಾಂಭಿಕತೆಯೇ ಕಾರಣವೆಂದು ನಿರ್ಣಯಿಸಲಾಗಿದೆ.

ಉದಾರಿಗಳು ಚಿರಂಜೀವಿಗಳು!

ಫ್ರಾನ್ಸಿನಲ್ಲಿ ದೀರ್ಘಾಯುಷ್ಯ ನಿರ್ಣಯಕ್ಕಾಗಿ ಅಂತಾರಾಷ್ಟ್ರೀಯ ಸಭೆಯೊಂದು ಸೇರಿತ್ತು. ಅದರಲ್ಲಿ ಸ್ವಿಜರ್‌ಲೆಂಡ್, ಫ್ರಾನ್ಸ್, ಚೀನ, ಬೆಲ್ಜಿಯಂ ಮತ್ತು ಅಮೇರಿಕಗಳ ತಜ್ಞರು ಈ ಕೆಳಗಿನ ಸೂತ್ರಗಳನ್ನು ನಿರ್ಣಯಿಸಿದರು:

(೧) ೫೦ ಕ್ಕೆ ಮೀರಿದ ವಯಸ್ಸಿನವರು ಹೃದಯ ಪರೀಕ್ಷೆ ಮಾಡಿಸಿಕೊಳ್ಳಬೇಕು.

(೨) ಎಲ್ಲರೂ ತೀವ್ರ ಕಾಹಿಲೆ ಬಂದು ಗುಣವಾದ ೬ ತಿಂಗಳಾದ ಕೂಡಲೇ ವೈದ್ಯರಿಂದ ಪರೀಕ್ಷಿಸಿಕೊಳ್ಳಬೇಕು.

ಇದಲ್ಲದೆ ಆ ತಜ್ಞರು ಮನಸ್ಸಿಗೆ ನಿಜಸುಖವಿದ್ದರೆ ದೀರ್ಘಾಯುಷ್ಯ ನಿಶ್ಚಿತವೆಂದು ಹೇಳುತ್ತಾರೆ. ಕ್ಷುದ್ರ ಬುದ್ಧಿಯವರಿಗಿಂತ ವಿಶಾಲ ಭಾವನೆಗಳುಳ್ಳವರು ಹೆಚ್ಚುಕಾಲ ಬದುಕುವರೆಂದು ಅವರ ಮತ. ಮಕ್ಕಳು ಮರಿಮಕ್ಕಳಿದ್ದವರು ಅವರ ಸಹಾಯಕ್ಕಾಗಿ ನಿಲ್ಲುವ ಸಂತೋಷದಿಂದ ಹೆಚ್ಚು ಕಾಲ ಉಳಿಯುವರು. ಒಳ್ಳೆಯ ಕುಟುಂಬ ಜೀವನವು ದೀರ್ಘಾಯುಷ್ಯಕೊಡುತ್ತದೆ. ಒಬ್ಬ ಬ್ರಹ್ಮಚಾರಿಗಿಂತ ಮೊಮ್ಮಕ್ಕಳಿಂದ ಸುತ್ತುವರಿಯಲ್ಪಟ್ಟ ಒಬ್ಬನು ಹೆಚ್ಚುಕಾಲ ಬದುಕಬಲ್ಲ! ಜಗತ್ತಿನ ಕೆಲವು ಭಾಗಗಳಲ್ಲಿ ಹೋಗಿ ಬದುಕಿದರೆ ಆಯುಷ್ಯ ಹೆಚ್ಚಾಗುವುದೆಂಬ ನಂಬಿಗೆ ಸುಳ್ಳು. ಚಿಕ್ಕಂದಿನಿಂದ ಸರಿಯಾಗಿ ಮನಸ್ಸನ್ನೂ ದೇಹವನ್ನೂ ಆರೈಕೆ ನೊಡಿಕೊಳ್ಳುತ್ತ ಬಂದರೆ ಮಾತ್ರ ಅದು ಸಾಧ್ಯ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨೨

ರಾಜಕೀಯ ವಾತಾವರಣದ ಪ್ರಭಾವ ಶೇರ ಪೇಟೆಯ ಮೇಲೆ ವಿಶೇಷವಾಗಿ ಹಣಗಾರರು ಹಿಂಜರಿದುದರಿಂದ ಪಾಲುಗಳು ಇಳಿಮುಖವಾಗಿದ್ದವು. ಈ ವಾರ ಅವು ತಕ್ಕ ಮಟ್ಟಿಗೆ ಸುಧಾರಿಸಿವೆ. ಟಾಟಾಸ್ಟೀಲ ಡೆಫರ್ಡ ೧೫೮೩ ರ ವರೆಗೂ ಇಳಿದಿತ್ತು. ಅದೀಗ ಚೇತರಿಸಿ ಕಳೆದ ವಾರದ ಮಟ್ಟಕ್ಕೆ ಮುಟ್ಟಿದೆ. ಇಂದಿನ ಕೊನೆಯ ದರಗಳು ಇಂತಿದ್ದವು:

ಜವಳಿ

ಅಹಮದಾಬಾದ ಅಡ್ವಾನ್ಸ	೨೭೫–೦–೦
ಬಾಂಬೆ ಡಾಯಿಂಗ್	೧೯೯೦–೦–೦
ಸೆಂಟ್ರಲ ಇಂಡಿಯಾ	೨೯೧–೮–೦
ಸೆಂಚುರಿ	೫೨೬–೪–೦
ಗೋಕಾಕ	೩೧೫–೦–೦
ಕೋಹಿನುರು	೩೨೩–೮–೦
ಫಿನಿಕ್ಸ	೪೪೬–೪–೦
ಸಿಂಪ್ಲೆಕ್ಸ	೨೧೩–೮–೦
ಸ್ವದೇಶಿ	೬೧೩–೦–೦

ಇತರ

ಬೇಲಾಪುರ ಸಕ್ಕರೆ	೩೧೧–೪–೦
ಬಾಂಬೇ ಬರ್ಮಾ	೪೧೩–೧೨–೦
ಸಿಂಧ್ಯ ಸ್ಟೀಮ	೨೬–೮–೦
ಟಾಟಾ ಸ್ಟೀಲ ಡೆಫರ್ಡ	೧೬೧೫–೮–೦
ಇಂಡಿಯನ್ ಅಯರ್ನ	೨೪–೧೪–೦
ಅಸೊ. ಸಿಮೆಂಟ್ಸ	೧೬೫–೮–೦
ಸೆಂಟ್ರಲ ಬ್ಯಾಂಕ್	೮೯–೮–೦
ಇಂಪೀರಿಯಲ್ ಬ್ಯಾಂಕ ಪೂರ್ಣ	೨೦೮೦–೦–೦
ಇಂಡಿಯನ್ ಬ್ಯಾಂಕ	೨೧೨–೮–೦
ರಿಝರ್ವ ,,	೧೧೩–೦–೦

ಚಿನ್ನ--ಬೆಳ್ಳಿ

ಪೇಟೆಗೆ ಬರುತ್ತಿರುವ ಬೆಳ್ಳಿಯನ್ನೆಲ್ಲ ತೇಜಿ ವ್ಯಾಪಾರಿಗಳು ಕೊಳ್ಳ ಹತ್ತಿದ್ದರಿಂದ ಅದು ಏರಿದ್ದರೂ ಚಿನ್ನ ಮಾತ್ರ ಪೇಟೆಗೆ ಬರುವದು ಹೆಚ್ಚಾಗಿ ಅದರ ಬೆಲೆ ಇಳಿದಿದೆ. ಇಂದಿನ ಚಿನ್ನದ ಬೆಲೆಗಳು ನಿನ್ನೆಗಿಂತ ಅರೇಆಣೆ ಹೆಚ್ಚಾಗಿವೆ. ಇಂದು ಬೆಲೆಗಳು ಈ ರೀತಿ ಕೊನೆಗಂಡವು—

ತಯಾರಿ ಚಿನ್ನ	೧೧೧–೧೪–೦
ವಾಯಿದಾ ಚಿನ್ನ	೧೧೧–೮–೦
ಸಾವರೀನ	೭೪–೮–೦
ತಯಾರಿ ಬೆಳ್ಳಿ	೧೭೭–೨–೦
ವಾಯಿದಾ	೧೭೬–೧೨–೦
ಚೇಂಬರ	೧೭೩–೬–೦

ಅರಳೆ

ಅರಳೆಯನ್ನು ಮಾರುವವರು ಹೆಚ್ಚಾದುದರಿಂದಲೂ ಪರದೇಶಗಳಿಂದ ಅರಳೆ ಬರುವದೆಂಬ ಸುದ್ದಿಯಿಂದಲೂ ಬಟ್ಟೆಯ ಮೇಲೆ ತಿರುಗಿ ನಿಯಂತ್ರಣ ಬರಬಹುದೆಂದೂ ಹೆದರಿ ಜುಲೈ ವಾಯಿದೆ ಅರಳೆ ೬೩೪–೦–೦ ತನಕವೂ ಕಳೆದ ವಾರ ಇಳಿದದ್ದು ಈ ವಾರ ತೇಜಿಗಳ ಪ್ರಭಾವದಿಂದ ಚೇತರಿಸಿಕೊಂಡಿತು. ಇಂದಿನ ಬೆಲೆಗಳು ಹೀಗಿವೆ:

ಜುಲೈ	೬೭೫–೮–೦
ಸೆಪ್ಟೆಂಬರ	೬೪೫–೮–೦

ಎಣ್ಣೆ ಕಾಳು

ಶೇಂಗಾ	೧೬೭–೮–೦
,, (ಹೊಸ)	೧೬೬–೪–೦
ಅಗಸಿ	೨೮–೩–೦
,, (ಹೊಸ)	೨೮–೦–೦
,, ಎಣ್ಣೆ	೧೬–೮–೦

ಸಾಂಗಲಿ

ಅರಸಿನ (ಹೊಸ) ಹೇರು	೧೯೦
ಶೇಂಗಾ ಖಂಡಿ	೧೪೫–೦–೦
ಮೆಣಸಿನಕಾಯಿ ಹೇರು	೨೨೫
ಬೆಲ್ಲ ಹೇರು	೬೫

ಹುಬ್ಬಳ್ಳಿ

ಜಯವಂತ ಹತ್ತಿ	೧	೪೪೦–೪೫೦
,,	೨	೪೨೦–೪೩೦
,,	೩	೪೦೦–೪೦೧
ಅಪಲಂಡ ಹತ್ತಿ	೧	೪೧೦–೪೩೦
ಜತ		೨೮೦–೩೦೦
ಅ. ಡಬಲರೋಲ		೨೭೫–೨೮೫
ಜ. ಹತ್ತಿಕಾಳು		೮॥ ಪೌಂ.
ಅ. ಹತ್ತೀಕಾಳು		೮॥ ,,

ಮುಂಬೈಯಲ್ಲಿ ತಯಾರಿ ಮಾಲಿಗೆ ಗಿರಾಕಿಗಳು ಇಲ್ಲದ್ದರಿಂದ ಇಲ್ಲಿಯೂ ಪೇಟೆಯಲ್ಲಿ ವಿಶೇಶ ವ್ಯಾಪಾರವಿಲ್ಲ.

ನಾಲ್ಕು ಮಾತು — ರಂಗನಾಥ ದಿವಾಕರ

೧. ಮಾತೃವಿಯೋಗ

ಇದೇ ಹೋದ ೧೩–೭–೪೮ ನೇ ದಿನ ಶ್ರೀ ಸೀತಾಬಾಯಿಯವರು ತಮ್ಮ ವಯಸ್ಸಿನ ೮೦ ನೇ ವರುಷ ತೀರಿಕೊಂಡರು. ನನಗೆ ಆದ ಈ ಮಾತೃವಿಯೋಗಕ್ಕಾಗಿ ಅನೇಕ ಬಾಂಧವರು ಭಗಿನಿಯರು ನನಗೆ ಬಗೆಬಗೆಯ ಪತ್ರಗಳನ್ನು ತಂತಿಗಳನ್ನೂ ಕಳಿಸಿ ನನ್ನ ದುಃಖದಲ್ಲಿ ಭಾಗಿಗಳಾದುದಕ್ಕೆ ನಾನು ಅವರಿಗೆ ತುಂಬಾ ಕೃತಜ್ಞನು. ಇವರೆಲ್ಲರಿಗೂ ಪ್ರತ್ಯುತ್ತರ ಬರೆದು ಉಪಕಾರ ಮನ್ನಣೆ ಮಾಡುವದು ಸಾಧ್ಯವಾಗದ್ದರಿಂದ ಈ ಪತ್ರಿಕೆಯ ಮುಖಾಂತರ ಉಪಕಾರಸ್ಮರಣೆ ಮಾಡುತ್ತಿರುವೆ. ಕ್ಷಮಿಸಬೇಕು.

× × ×

ವಿಶೇಷತಃ ನಾನು ಆ ವಿಯೋಗದ ವೇಳೆಗೆ ಇಲ್ಲಿರದೆ ಇದ್ದುದು ನನಗೆ ಹೆಚ್ಚು ದುಃಖವನ್ನು ಕೊಟ್ಟಿದೆ. ವಿಜಾಪುರದಿಂದ ನಾನು ೧೨ ನೇ ತಾರೀಖಿಗೆ ಬರಬೇಕಾಗಿತ್ತು. ಆದರೆ ಬಗಲೂರಿನ ದುರ್ಘಟನೆ ನಡೆದುದರಿಂದ ಅತ್ತ ಹೋಗಿ ಬರಬೇಕಾಯಿತು. ಸಾರ್ವಜನಿಕ ಕರ್ತವ್ಯ ಹಾಗೂ ವೈಯಕ್ತಿಕ ಇವುಗಳ ನಡುವೆ ಅನೇಕ ಸಾರೆ ಧರ್ಮಸಂಕಟವುಂಟಾಗುವದು. ಅವುಗಳಲ್ಲಿ ಇದೊಂದು ಉದಾಹರಣೆ. ಎರಡೂ ಸಾಧಿಸುವದು ಕಠಿಣವಾಗುವದು. ಈ ಸಂದರ್ಭದಲ್ಲಿ ಗಾಂಧೀಜಿಯವರು ತಮ್ಮ ಆಪ್ತ ಕಾರ್ಯದರ್ಶಿಗಳಾದ ಶ್ರೀ ಕೃಷ್ಣದಾಸ ಎಂಬವರಿಗೆ ಒಮ್ಮೆ ಪತ್ರ ಬರೆದುದನ್ನು ನಾನು ಎಲ್ಲಿಯೋ ಓದಿದಂತಿದೆ. ಶ್ರೀ ಕೃಷ್ಣದಾಸರ ತಂದೆಗೆ ಬಹಳ ಜಡ್ಡಾಗಿತ್ತು. ಅವರ ಬದಿ ಬಿಟ್ಟು ನಾನು ಸಾರ್ವಜನಿಕ ಕಾರ್ಯಕ್ಕೆ ಹೋಗಲೋ ಬೇಡವೊ ಎಂದು ಅವರು ಗಾಂಧೀಜಿಯವರನ್ನು ಕೇಳಿದ್ದರು. ಅದಕ್ಕೆ ಗಾಂಧೀಜಿಯವರು, ನಿಮ್ಮ ತಂದೆಯವರ ಪರಾಮರಿಕೆಯನ್ನು ಇನ್ನೊಬ್ಬರು ಮಾಡುವದು ಸಾಧ್ಯವಿದ್ದ ಪಕ್ಷದಲ್ಲಿ ಹಾಗೂ ನೀವು ಮಾಡಬೇಕೆಂದಿರುವ ಸಾರ್ವಜನಿಕ ಕರ್ತವ್ಯವನ್ನು ಇನ್ನೊಬ್ಬರು ಮಾಡುವದು ಸಾಧ್ಯವಿಲ್ಲ ಎಂದು ನಿಮ್ಮ ಮನವರಿಕೆ ಇದ್ದಲ್ಲಿ ನೀವು ಸಾರ್ವಜನಿಕ ಕಾರ್ಯಕ್ಕೆ ಹೆಚ್ಚು ಮಹತ್ವ ಕೊಡಬೇಕು ಎಂದು ಬರೆದರು. ಅದೇ ಮಾತು, ಇಲ್ಲಿಯಾದರೂ ಅನ್ವಯಿಸುವದೊ?

× × ×

'ಹಿಂದ ಮಾತೆಯೋ ಮಾತೆಯಾದ ನಿಮಗೆ ಇಂಥ ಘಟನೆಯಾದುದು ಆಶ್ಚರ್ಯವಲ್ಲ' ಎಂದು ಒಬ್ಬರು ಬರೆದಿದ್ದಾರೆ. ಬರೆಯುವ ಮಿತ್ರರ ದೃಷ್ಟಿಯಲ್ಲಿ ಹಿಂದ ಮಾತೆಯೊಡನೆ ಆಷ್ಟೊಂದು ಆಪ್ತತ್ವವಿದ್ದುದೆ ಆದರೆ ನಾನು ಧನ್ಯನೆಂಬುವಲ್ಲಿ ಸಂಶಯವಿಲ್ಲ. ಆದರೂ ತಾಯಿ ಎಂಬ ವಸ್ತು ಜಗತ್ತಿನಲ್ಲಿ ಬಹಳ ದೊಡ್ಡದು. ಮನುಷ್ಯನು ಯಾವದೇ ಪ್ರಸಂಗದಲ್ಲಿ ತಾಯಿಯನ್ನು ನೆನೆಸುವನೇ ಹೊರತು ಇನ್ನಾರನ್ನೂ ಇಲ್ಲ. ತಾಯಿಯಂಥ ಆಪ್ತ, ಬಂಧು ಯಾರೂ ಅಲ್ಲ. ಶುದ್ಧ ನಿರ್ಮಲ ನಿಷ್ಕಾಮ ನಿರ್ವ್ಯಾಜ ಪ್ರೇಮ, ನಿರಲಸ ಸೇವೆ, ಅವ್ಯಾಹತ ಮಕ್ಕಳ ಚಿಂತೆ ಈ ವಿಷಯಗಳಲ್ಲಿ ತಾಯಿಯನ್ನು ದೇವರು ಸಹ ಮಿಕ್ಕಲಾರ.

೨. ಇಂಗ್ಲಂಡದ ಇತಿಹಾಸ

ಇಂಗ್ಲಂಡದ ಇತಿಹಾಸವನ್ನು ಕಲಿಸುವನ್ನೇ ಬಿಟ್ಟು ಬಿಡಬೇಕು, ಅದು ವ್ಯರ್ಥ ವೇಳೆ, ಹಣ, ಕಾಗದ ಇವುಗಳ ಅಪವ್ಯಯ ಎಂದು ಒಬ್ಬ ಬಾಂಧವರು ನನಗೆ ಸೂಚಿಸಿರುವರು. ಹಿಂದುಸ್ತಾನವು ಪರತಂತ್ರವಿದ್ದಾಗ ಇಂಗ್ಲಂಡ, ಇಂಗ್ಲಂಡದ ಇತಿಹಾಸ, ಇಂಗ್ಲೀಷ ಭಾಷೆ ಮುಂತಾದವುಗಳ ಬಗ್ಗೆ ಒಂದು ಬಗೆಯ ಹೇಯ ಭಾವವು ನಮ್ಮಲ್ಲಿ ಉತ್ಪನ್ನವಾಯಿತು. ಅದು ಸ್ವಾಭಾವಿಕ. ಯಾಕಂದರೆ ಅವರು ಬಲಾತ್ಕಾರದಿಂದ ನಮ್ಮ ಮೇಲೆ ಆಳತೊಡಗಿದ್ದರು. ಆದರೆ ಈಗ ಆ ಬಲಾತ್ಕಾರ ಹೋಗಿ ಆ ಬಲಾತ್ಕಾರ ಮಾಡುವವರೂ ಇಲ್ಲಿಂದ ತೆರಳಿರುವರು. ಆದುದರಿಂದ ಈಗ ಆಯಾ ಮಾತುಗಳ ನಿಜವಾದ ಬೆಲೆ ಕಟ್ಟಲು ಅನುವಾಗಿದೆ. ಆ ರೀತಿ ಬೆಲೆಕಟ್ಟಿ ಅವುಗಳನ್ನು ಉಪಯೋಗಿಸಬೇಕೆ ಹೊರತು ಕೇವಲ ಬ್ರಿಟಿಶರು ಇಲ್ಲಿಂದ ಹೋದುದರಿಂದ ಅವುಗಳನ್ನೆಲ್ಲ ತಳ್ಳಬೇಕೆಂದು ಹೇಳುವದು ಯೋಗ್ಯವಲ್ಲ.

× × ×

ಇಲ್ಲಿ ಇಂಗ್ಲೀಷರು ರಾಜರೆಂದು ಇರುವವರೆಗೆ ಆಂಗ್ಲಭಾಷೆಯನ್ನು ಉಪಯೋಗಿಸುವಾಗ, ನಾನೊಬ್ಬ ದಾಸ್ಯದಲ್ಲಿದ್ದೇನೆ, ಅದಕ್ಕಾಗಿ ರಾಜಭಾಷೆಯನ್ನು ಉಪಯೋಗಿಸುತ್ತಿರುವೆ, ಎಂಬ ಹೀನತೆಯ ಭಾವನೆ ಉಂಟಾಗುತ್ತಿತ್ತು. ಆದರೆ ಈಗ ನನಗೆ ಆ ಭಾವನೆ ಬರಲರಿಯದು. ಈಗ ಆ ಭಾಷೆಯ ಯೋಗ್ಯತೆ, ಜಗತ್ತಿನಲ್ಲಿ ಅದರ ಸ್ಥಾನ, ನಮ್ಮ ದೇಶದಲ್ಲಿ ಅದರ ಉಪಯೋಗ ಇವೆಲ್ಲವುಗಳ ವಿಚಾರ ಮಾಡಿ ನಾವು ಅದರ ಸ್ಥಾನಮಾನಗಳನ್ನು ನಿರ್ಣಯಿಸಬೇಕಾಗಿರುವದು. ಇಂಗ್ಲೀಷ ಭಾಷೆಗೆ ಹಿಂದುಸ್ತಾನದಲ್ಲಿ ಸದ್ಯಕ್ಕಿದ್ದ ಸ್ಥಾನವು ಇನ್ನು ದೊರೆಯದೆಂಬದು ನಿರ್ವಿವಾದವು. ಆದರೆ ಅದಕ್ಕೆ ಸ್ಥಾನವೇ ಇಲ್ಲ ಎಂದು ಹೇಳುವದು ತಪ್ಪು. ಹಿಂದಿಯು ಬೆಳೆದು, ಪ್ರಚಾರ ಹೊಂದಿ ಇಡೀ ಹಿಂದುಸ್ತಾನದಲ್ಲಿ ಅಂತಃಪ್ರಾಂತೀಯ ವಿಚಾರ ವಿನಿಮಯದ ಸಾಧನವಾಗುವವರೆಗೆ ಇಂಗ್ಲೀಷಕ್ಕೆ ಶಾಲೆ ಕಾಲೇಜುಗಳಲ್ಲಿ ಸಹ ಒಂದು ಸ್ಥಾನವಿದ್ದೇ ಇದೆ. ಆ ಬಳಿಕ ಅದು ಕೇವಲ ಅಂತರ್ ರಾಷ್ಟ್ರೀಯ ಭಾಷೆಯಾಗಿ ಉಳಿಯಬಲ್ಲದು.

× × ×

ಇನ್ನು ಇಂಗ್ಲಂಡದ ಇತಿಹಾಸವು ತ್ಯಾಜ್ಯವೆಂದು ಯಾರಾದರೂ ತಿಳಿದಿದ್ದರೆ ಅದು ಬಹಳ ತಪ್ಪು ಎಂದು ಹೇಳಬಲ್ಲೆ. ಈಗ ಅದು ನಮ್ಮ ಮೇಲೆ ಬಲಾತ್ಕಾರದಿಂದ ಆಳುವವರ ಇತಿಹಾಸವಲ್ಲ. ಅದು ಬೇರೆ ಅನೇಕ ದೃಷ್ಟಿಯಿಂದ ಮಹತ್ವದ್ದಿರುವದು. ಪ್ರಜಾಪ್ರಭುತ್ವದ ಬೆಳವಣಿಗೆಯ ದೃಷ್ಟಿಯಿಂದ ಇಂಗ್ಲಂಡದ ಇತಿಹಾಸವು ಬಹಳ ಮಹತ್ವದ್ದೆಂದು ಬೇರೆ ಹೇಳಬೇಕಾಗಿಲ್ಲ. ಇನ್ನು ಈ ಪ್ರಶ್ನೆಗಳತ್ತ ಈ ದೃಷ್ಟಿಯಿಂದ ನೋಡಬೇಕೇ ಹೊರತು ಕೇವಲ ತ್ಯಾಜ್ಯ ಎಂದು ಹೇಳುವದು ನ್ಯಾಯವಲ್ಲ.

೩. ನಮ್ಮ ವಾಚನಾಲಯ

ನಮ್ಮ ವಾಚನಾಲಯಗಳು ಬೆಳೆಯದಿರುವದಕ್ಕೆ ಅನೇಕ ಕಾರಣಗಳಿರಬಹುದು. ಸಾಕಷ್ಟು ಸಾಕ್ಷರತೆಯ ಪ್ರಸಾರವಿಲ್ಲದಿರುವದು, ವಾಚನಾಭಿರುಚಿ ಸಾಕಷ್ಟು ಇಲ್ಲದಿರುವದು ಇವೂ ಕಾರಣಗಳಿರುವವು. ಆದರೆ ಇಲ್ಲಿ ಇನ್ನೂ ಒಂದು ವಿಶೇಷ ಕಾರಣದ ಬಗ್ಗೆ ನಾನು ಬರೆಯಬೇಕಾಗಿದೆ. ಅದಾವದೆಂದರೆ ಪುಸ್ತಕಗಳ ಬಗ್ಗೆ ನಮ್ಮ ದುರ್ನೀತಿ. ಪುಸ್ತಕಗಳನ್ನು ಹೇಳದೆ ಕೇಳದೆ ಒಯ್ಯುವದು, ಒಯ್ದ ಪುಸ್ತಕಗಳನ್ನು ತಿರುಗಿ ಕೊಡದೆ ಇರುವದು, ಓದದೆ ಪುಸ್ತಕಗಳನ್ನು ಹಾಗೆಯೇ ತಮ್ಮ ಕಡೆಗೆ ಇಟ್ಟುಕೊಂಡು ಬಿಡುವದು, ಪುಸ್ತಕಗಳಲ್ಲಿಯ ಚಿತ್ರಗಳನ್ನು ಕದಿಯುವದು, ಹೀಗೆ ಒಂದಲ್ಲ ಎರಡಲ್ಲ ನಾವು ಪುಸ್ತಕಗಳೊಡನೆ ಬಹಳ ದುರ್ವ್ಯವಹಾರ ಮಾಡುತ್ತೇವೆ ಎಂದು ಹೇಳಿದರೆ ತಪ್ಪಲ್ಲ.

× × ×

ಸ್ವಾಮೀ ರಾಮತೀರ್ಥರು ಜಪಾನದ ಬಗ್ಗೆ ಒಮ್ಮೆ ಬರೆಯುವಾಗ ನಮ್ಮ ಈ ದುರ್ನಡತೆಯ ಕಡೆಗೆ ಲಕ್ಷ್ಯವನ್ನೆಳೆದಿದ್ದಾರೆ. ಅಲ್ಲಿಯ ಒಂದು ವಾಚನಾಲಯದಲ್ಲಿಯ ಒಂದು ಪುಸ್ತಕದಲ್ಲಿಯ ಚಿತ್ರವನ್ನು ಯಾರೋ ಕದ್ದೊಯ್ದರಂತೆ. ಆ ಪುಸ್ತಕಾಲಯದ ರಕ್ಷಕನು ಇನ್ನಾರ ಮೇಲೂ ಸಂಶಯಗೊಳ್ಳದೆ ನೇರವಾಗಿ ಒಬ್ಬ ಹಿಂದೀ ವಿದ್ಯಾರ್ಥಿಯ ಬಗ್ಗೆಯೆ ಸಂಶಯ ತಳೆದನಂತೆ. ಹೀಗೇಕೆ ಎಂದು ಸ್ವಾಮೀ ರಾಮತೀರ್ಥರು ಅವನನ್ನು ಕೇಳಲಾಗಿ, ಯಾವದೇ ಜಪಾನಿಯು ಪುಸ್ತಕವನ್ನು ಈ ಪರಿ ಸೂರೆಗೊಳ್ಳಲಾರನು, ಎಂದನಂತೆ. ದುರ್ದೈವದಿಂದ ಹಿಂದೀ ವಿದ್ಯಾರ್ಥಿಯೆ ಅದನ್ನು ಕದ್ದುದ್ದು ಮುಂದೆ ಕಂಡುಬಂದಿತು.

× × ×

ನಮ್ಮಲ್ಲಿ ಇನ್ನೂ ಸಾಕ್ಷರತೆಯು ಪ್ರಸಾರವಾಗಬೇಕಾಗಿದೆ. ಆ ಪ್ರಸಾರವಾಗುವದಕ್ಕೆ ನೂರು ಅಡೆತಡೆಗಳು ಇದ್ದು ಅವುಗಳಲ್ಲಿ ದೇಶದಲ್ಲಿ ಕಾಗದದ ಕೊರತೆ, ಮುದ್ರಣದ ಅಡಚಣೆ, ಶಿಕ್ಷಕರ ಅಭಾವ. ಈ ಪರಿಸ್ಥಿತಿಯಲ್ಲಿ ನಮ್ಮ ಸಾಕ್ಷರತೆ ಹೆಚ್ಚಾಗಬೇಕಾದರೆ ನಾವು ಪುಸ್ತಕಗಳನ್ನು ಅಚ್ಚುಕಟ್ಟಿನಿಂದ ಸಂರಕ್ಷಿಸಿ ಅವುಗಳ ಉಪಯೋಗವನ್ನು ಆದಷ್ಟು ಹೆಚ್ಚಿಗೆ ಮಾಡಿಕೊಳ್ಳಲಿಕ್ಕೆ ಬೇಕು. ಒಂದೇ ಸಮನೆ ಅವುಗಳ ಉಪಯೋಗ ನಡೆಯಲಿಕ್ಕೆ ಬೇಕು. ಅದೇನು ಬೆಳ್ಳಿ ಬಂಗಾರದಂತೆ ತನ್ನಷ್ಟಕ್ಕೆ ತಾನೆ ಬೆಳೆಯುವ ವಸ್ತುವಲ್ಲ. ಓದಿದರೆ ಮಾತ್ರ ಅದಕ್ಕೆ ಬೆಲೆ, ಇಲ್ಲದಿದ್ದರೆ ಕಲ್ಲು ಮಣ್ಣು ಇದ್ದಂತೆ. ಅದಕ್ಕಾಗಿ ಇನ್ನು ಪುಸ್ತಕಗಳ ಬಗ್ಗೆ ಇರುವ ನಮ್ಮ ನೀತಿಯನ್ನು ಬಹಳ ಸುಧಾರಿಸಲಿಕ್ಕೆ ಬೇಕು. ಆದರೆ ಮಾತ್ರ ಅವು ನಮ್ಮ ಸೇವೆ ಮಾಡಬಲ್ಲವು. ನಮ್ಮಲ್ಲಿಯ ವಾಚನಾಲಯಗಳು ಅಭಿವೃದ್ಧಿ ಹೊಂದಬಲ್ಲವು.

ಶ್ರೀ ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳೂ ಉಡುಪಿಯ ಗಣ್ಯ ನಾಗರಿಕರೂ ಆದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಬದುಕಿದ್ದಾಗ ನಾಡಿಗೂ ನುಡಿಗೂ ಸಲ್ಲಿಸಿದ ಸೇವೆಯ ನೆನಪು ಚಿರಕಾಲ ಉಳಿವಂತೆ ಒಂದು ಸ್ಮಾರಕ ಯೋಜನೆಯನ್ನು ರಚಿಸಬೇಕೆಂದು ತಾ. ೨೪–೬–೪೮ ರಂದು ಉಡುಪಿ ಬೋರ್ಡ ಹೈಸ್ಕೂಲಿನ ಪೀಪಲ್ಸ ಹಾಲಿನಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ರಚಿಸಲ್ಪಟ್ಟ ಕೊರಡ್ಕಲ್ ಸ್ಮಾರಕ ಸಮಿತಿಯು ನಿಶ್ಚಯಿಸಿದೆ. ತೈಲಚಿತ್ರ ಅನಾವರಣ, ಸ್ಮಾರಕ ಗ್ರಂಥ ಪ್ರಕಾಶನ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಿವಿಧ ಪಾರಿತೋಷಕಗಳ ವ್ಯವಸ್ಥೆ ಮುಂತಾದುವನ್ನೇ ಸಮಿತಿ ಉದ್ದೇಶವಾಗಿಟ್ಟುಕೊಂಡಿದೆ.

ಕೊರಡ್ಕಲ್ ಶ್ರೀನಿವಾಸರಾಯರನ್ನು ಬಲ್ಲವರೂ ಶಿಷ್ಯವೃಂದದವರೂ ಗೆಳೆಯರೂ ಅಭಿಮಾನಿಗಳೂ ಈ ಕಾರ್ಯದಲ್ಲಿ ಕೊಡುಗೈಯಿಂದ ನೆರವಿತ್ತರೆ ನಮ್ಮ ಕಾರ್ಯವು ಹಗುರಾಗುತ್ತದೆ. ಅದ್ದರಿಂದಲೆ ಎಲ್ಲರೂ ಈ ಸತ್ಕಾರ್ಯಕ್ಕೆ ಉದಾರವಾದ ಸಹಾಯವನ್ನು ನೀಡಿ ನಮ್ಮೊಡನೆ ಸಹಕರಿಸಬೇಕೆಂದು ಸಮಿತಿಯ ಅಧ್ಯಕ್ಷ ಡಾ. ಸುಂದರರಾವ ಪೈ ಮತ್ತು ಉಪಾಧ್ಯಕ್ಷ ಶ್ರೀ ಬೈಲೂರು ವಾಸುದೇವರಾವ ಹಾಗು ಕಾರ್ಯದರ್ಶಿ ಹೊನ್ನಯ್ಯ ಶೆಟ್ಟರೂ ಬಿನ್ನವಿಸಿಕೊಂಡಿದ್ದಾರೆ.

ಪ್ರೊ. ಭನಸಾಲಿಯವರ ಉಪವಾಸ ಮುಕ್ತಾಯ

ನಿಜಾಮ ಸರಕಾರವು ಪ್ರೊ. ಭನಸಾಲಿಯವರ ಹೈದರಾಬಾದ ಪ್ರವೇಶದ ನಿರ್ಬಂಧವನ್ನು ಹಿಂತೆಗೆದುಕೊಂಡುದಾಗಿ ವಾರ್ತೆ ಬಂದದ್ದರಿಂದ ಪ್ರೊ. ಭನಸಾಲಿಯವರು ತಾ. ೨೧ ರಂದು ತಮ್ಮ ೧೨ ದಿನಗಳ ಉಪವಾಸದ ವ್ರತವನ್ನು ಗ್ಲುಕೋಜ ನೀರು ತೆಗೆದುಕೊಂಡು ಮಾಡಿದರೆಂದು ತಿಳಿಯುತ್ತದೆ.

ಕರ್ಮವೀರ

[illegible]

ಸ್ಟರ್ಲಿಂಗಿನ ವ್ಯವಸ್ಥೆ

ನಮ್ಮ ಹಣಕಾಸಿನ ಮಂತ್ರಿ ಸರ್ ಷಣ್ಮುಖಂ ಚೆಟ್ಟಿಯವರ ನೇತೃತ್ವದಲ್ಲಿ ಇಂಗ್ಲೆಂಡಿಗೆ ಹೋಗಿ ಹಿಂದೀ ಶಿಷ್ಟ ಮಂಡಲ ವೊಂದು ಸಾಧಿಸಿಕೊಂಡು ಬಂದ ಸ್ಟರ್ಲಿಂಗ್ ಒಡಂಬಡಿಕೆಯ ಮುಖ್ಯಾಂಶಗಳು ಕಳೆದ ವಾರ "ಕರ್ಮವೀರ"ದಲ್ಲಿ ಕೊಡಲ್ಪಟ್ಟವೆ. ನಮಗೆ ಇಂಗ್ಲೆಂಡಿನಿಂದ ೧೫೦೦ ಕೋಟಿ ಮಿಕ್ಕಿ ರೂಪಾಯಿಗಳು ಬರ ಬೇಕಾಗಿದ್ದು ಈ ಸಾಲದಲ್ಲಿ ಅಧಿಕಾಂಶವನ್ನು ಮುಳುಗಿಸಿಬಿಡಬೇಕೆಂದು ಇಂಗ್ಲಂಡಿನಲ್ಲಿ ಅನೇಕ ದಿವಸಗಳಿಂದ ಚಳವಳಿ ಇರುವದು ಸರ್ವವಿದಿತವಾದ ಮಾತು. ಹೀಗಿರುವದ ರಿಂದ ನಮ್ಮ ಅರ್ಥ ಮಂತ್ರಿಗಳು ಮಾಡಿ ಕೊಂಡು ಬಂದ ಒಡಂಬಡಿಕೆ ಸೂಕ್ಷ್ಮವಾಗಿ ಪರಿಶೀಲಿಸಲರ್ಹವಾಗಿದೆ.

ಈ ದೃಷ್ಟಿಯಿಂದ ಅರ್ಥ ಮಂತ್ರಿಗಳು ಮಾಡಿಕೊಂಡು ಬಂದ ಒಡಂಬಡಿಕೆ— ಅದನ್ನು ಅವರಷ್ಟೇ ಕೊಂಡಾಡಿಕೊಳ್ಳಲಿ,— ನಿರಾಶಾದಾಯಕವಾಗಿದೆಯೆಂದು ಹೇಳದೆ ವಿಧಿಯಿಲ್ಲ. ಸರ್ ಷಣ್ಮುಖಂ ಅವರು ನಮ್ಮ ಶಿಲ್ಕಿನ ಮೇಲೆ ದೊಡ್ಡ ಶಸ್ತ್ರಕ್ರಿಯೆ ಮಾಡಿಸಿ ಕೊಂಡು ಬಂದರು. ಯುದ್ಧ ಕಾಲದಲ್ಲಿ ಬ್ರಿಟಿಶರು ಇಲ್ಲಿ ಕಟ್ಟಿ ಬಿಟ್ಟುಹೋದ ಯುದ್ಧ ಕಾರ ಖಾನೆ-ಸಾಮಗ್ರಿಗಳಿಗೆಂದು ೧೩೭ ಕೋಟಿ, ಮತ್ತು ನಮ್ಮ ಕೇಂದ್ರ ಮತ್ತು ಪ್ರಾಂತಿಕ ಸರಕಾರಿಯಿಂದ ನಿವೃತ್ತರಾದ ಬ್ರಿಟಿಶ ನೌಕರ ರಿಗೆ ಪರಿಹಾರ-ನಿವೃತ್ತಿವೇತನಗಳನ್ನೊದ ಗಿಸಲು ೩೦೦ ಕೋಟಿ ರೂಪಾಯಿಗಳನ್ನು ಅವರು ತೊಡೆ ಬಿಟ್ಟರು. ಬ್ರಿಟಿಶರು ಇಲ್ಲಿ ಬಿಟ್ಟುಹೋದ ಸಾಮಗ್ರಿಗಳ ಮೂಲ ಬೆಲೆ ೩೦೦ ಕೋಟಿ ರೂಪಾಯಿಯಾದೀತೆಂದೂ ಅದನ್ನು ೧೩೭ ಕೋಟಿ ರೂಪಾಯಿಗಳಿಗೆ ದೊರಕಿಸಿಕೊಂಡದ್ದು ದೊಡ್ಡ ಪೌರುಷ ವೆಂದು ಹೇಳಿಕೊಂಡಿದ್ದರೂ ಈ ಹಳೆ ಸಾಮ ಗ್ರಿಗಳಿಗೆ ಕೊಟ್ಟ ಬೆಲೆ ಹೆಚ್ಚೇ ಸರಿ. ಅವು ನಮಗೆ ಉಪಯೋಗಬೀಳುವದೂ ಸಂಶಯ.

ಇಷ್ಟೆಲ್ಲ ಹಣವನ್ನು ಕಳೆದೂ ೧೦೦೦ ಕೋಟಿ ರೂಪಾಯಿ ಮಿಕ್ಕಿ ಬ್ರಿಟನ್ನಿನಿಂದ ನಮಗೆ ಬರಬೇಕಾಗುವದು. ಇದರ ಬಗ್ಗೆ ಯಾದರೂ ಒಂದು ಉಪಯುಕ್ತ ವ್ಯವಸ್ಥೆ ಯಾಗಿದ್ದರೆ ಚಿಂತಿಸಬೇಕಾಗಿದ್ದಿಲ್ಲ. ಆದರೆ ಮುಂದಿರುವ ಮೂರು ವರ್ಷಗಳಲ್ಲಿ ನಮಗೆ ಉಪಯೋಗಕ್ಕೆ ದೊರಕಲಿರುವದು ಸುಮಾರು ನೂರು ಕೋಟಿ ರೂಪಾಯಿಗಳು ಮಾತ್ರ. ಇದಲ್ಲದೆ ಈ ಹಿಂದೆ ಉಪಯೋಗ ಕ್ಕೆಂದು ಕೊಡಲ್ಪಟ್ಟು ಇನ್ನೂ ಉಪ ಯೋಗ ಮಾಡದಿರುವ ಸುಮಾರು ೧೦೦ ಕೋಟಿ ರೂಪಾಯಿಗಳೂ ಈ ಅವಧಿಯಲ್ಲಿ ದೊರೆಯುವವೆಂದು ನಮ್ಮ ಅರ್ಥ ಸಚಿವರು ಹೇಳಿದ್ದರೂ ಬ್ರಿಟಿಶ ಮಂತ್ರಿಗಳ ಹೇಳಿಕೆ ಯಲ್ಲಿ ಈ ಮಾತು ಸ್ಪಷ್ಟವಿಲ್ಲ. ಈ ರೀತಿ ಯಲ್ಲಿ ನಮ್ಮ ಸಾಲ ತೀರಲು ೬೦ ವರ್ಷಕ್ಕೂ ಹೆಚ್ಚು ಅವಧಿ ಬೇಕಾದೀತು. ನಮಗೆ ಇಂಗ್ಲಂಡಿನಿಂದ ಮುಖ್ಯವಾಗಿ ಬೇಕಾಗಿರುವ ಯಂತ್ರ ಸಾಮಗ್ರಿಗಳಿಗೆ ಬ್ರಿಟಿಶ ಕಾರಖಾನೆ ದಾರರು ಅತಿರೇಕ ಬೆಲೆ ಹೇಳುವದರಿಂ ದಲೂ ಸಕಾಲದಲ್ಲಿ ಸರಕುಗಳನ್ನೊದಗಿಸದಿ ರುವದರಿಂದಲೂ ಈಗಾಗಲೆ ಕೊಡಮಾಡಿದ ೧೦೦ ಕೋಟಿ ರೂಪಾಯಿ ಕೂಡ ಉಪಯೋ ಗವಾಗದೆ ಬಿದ್ದಿದೆಯೆಂದು ನಮ್ಮ ಉದ್ಯಮೆ ಗಾರರು ದೂರುತ್ತಾರೆ. ಹೀಗಾದರೆ ಈ ೨೦೦ ಕೋಟಿ ರೂಪಾಯಿಯನ್ನಾದರೂ ೩ ವರ್ಷ ದಲ್ಲಿ ಬಳಸಿಕೊಳ್ಳುವದು ಹೇಗೆ? ಅಮೇರಿಕೆ ಮೊದಲಾದ ಅನ್ಯ ದೇಶಗಳಿಂದ ತರಿಸಬಹುದೆಂದರೆ ಈ ಒಪ್ಪಂದ ದಿಂದ ಒದಗುವ ಡಾಲರ್ ದೊರಕುವ ಡಾಲರ್ ವಿನಿಮಯ ಬರಿ ೧೫ ಕೋಟಿ ರೂಪಾಯಿ. ಬರಿ ಆಹಾರ ತರಿಸಲಿಕ್ಕೇ ಇಷ್ಟು ಹಣ ನಮಗೆ ಬೇಕಾಗಿರುವಾಗ ಯಂತ್ರಗಳೆಲ್ಲಿಂದ? ಯಂತ್ರ ಗಳಿಲ್ಲದೆ ಅಧಿಕ ಉದ್ಪಾದನವೆಲ್ಲಿಂದ?

ಸ್ಟರ್ಲಿಂಗ್ ಶಿಲ್ಕನ್ನು ಎಷ್ಟಂಶವಾದರೂ ಮುಳುಗಿಸಿಬಿಡಬೇಕೆಂದು ಬ್ರಿಟಿಶ ಅರ್ಥ ಮಂತ್ರಿಗಳು ಸೂಚಿಸಲೇ ಇಲ್ಲವಾದುದರಿಂದ ಆ ಭೀತಿಯ ಭೂತದ ಉಚ್ಚಾಟನೆಯಾಯಿ ತೆಂದು ಷಣ್ಮುಖಂ ಹೇಳಿದ್ದಾರೆ. ಆದರೆ ಇವರು ಇಲ್ಲಿ ಹೀಗೆ ಹೇಳುತ್ತಿರುವಾಗಲೆ ಅಲ್ಲಿ ಬ್ರಿಟಿಶ ಹಣಕಾಸಿನ ಮಂತ್ರಿ ಕ್ರಿಪ್ಸರು, ಹಿಂದುಸ್ತಾನವನ್ನು ಸಂರಕ್ಷಿಸಿದ್ದ ವೆಚ್ಚ ವನ್ನು ಕೇಳುವ ಹಕ್ಕು ನಮಗಿದ್ದೇ ಇದೆ ಯೆಂದು ಪಾರ್ಲಮೆಂಟಿನಲ್ಲಿ ಹೇಳಿದರು. ಸರ್ ಷಣ್ಮುಖಂ ಅವರು ಕಲ್ಪನಾ ರಾಜ್ಯ ದಲ್ಲಿದ್ದರೇನೊ.

"ಈಸ್ಟರ್ನ್ ಇಕಾನಮಿಸ್ಟ್" ಪತ್ರಿಕೆ ಹೇಳುವಂತೆ ಹಣಕ್ಕಿಂತ ಬ್ರಿಟಿಶರ ಸ್ನೇಹ ಮಿಗಿಲೆಂದು ಭಾವಿಸಿ ನಮ್ಮ ಅರ್ಥ ಮಂತ್ರಿ ಗಳು ಈ ಒಪ್ಪಂದಕ್ಕೆ ಒಪ್ಪಿದ್ದರೆ ಏನೋ. ಇಲ್ಲದಿದ್ದರೆ ಇದರಲ್ಲಿ ಬೆನ್ನು ಚಪ್ಪರಿಸಿಕೊಳ್ಳು ವಂಥ ಮಾತು ಯಾವದೂ ಇಲ್ಲ

ಮುಖ್ಯ ಮಂತ್ರಿಗಳ ಪರಿಷತ್ತಿಗೆ ಮೊದಲು



ದಿಲ್ಲಿಯಲ್ಲಿ ಜರಗಿದ ಕೇಂದ್ರ ಮತ್ತು ಪ್ರಾಂತಿಕ ಮುಖ್ಯಮಂತ್ರಿಗಳ ಪರಿಷತ್ತಿಗೆ ಮೊದಲು ಮುಖ್ಯ ಮಂತ್ರಿ ಪಂ. ಜವಾಹರರೂ ಉಪಮುಖ್ಯಮಂತ್ರಿ ಸರದಾರ ಪಟೇಲರೂ ಗಹನವಾದ ಮಂತ್ರಾಲೋಚನೆಯಲ್ಲಿ ತೊಡಗಿರುವದು. ನಡುವೆ ನಿಂತಿರುವವರು ಮಣಿಬೆನ್, ಸರದಾರರ ಮಗಳು.

ವಾರದ ಸಿಂಹಾವಲೋಕನ

ದಸ್ಯುವೊಬ್ಬನ ಆಹ್ವಾನ

ಸಿಡ್ನಿ ಕಾಟನ್ನನೆಂಬ ಆಸ್ಟ್ರೇಲಿಯನ್ ವೈಮಾ ನಿಕನೊಬ್ಬನು ಹಿಂದುಸ್ತಾನದ ಆಕಾಶಗಮನ ನಿಯಮಗಳನ್ನು ಧಿಕ್ಕರಿಸಿ ಕರಾಚಿಯಿಂದ ಹೊರಟು ಭಾರತದ ಯಾವುದೊಂದು ವಿಮಾನ ಗೃಹದಲ್ಲಿಳಿಯದೆ ನೇರವಾಗಿ ಹೈದರಾಬಾದಿಗೂ ಅಲ್ಲಿಂದ ತಿರುಗಿ ಕರಾಚಿಗೂ ಹಾರಿ ನಮ್ಮ ರಾಷ್ಟ್ರದ ಸಾರ್ವಭೌಮತ್ವಕ್ಕೆ ಆಹ್ವಾನ ಕೊಟ್ಟಿ ದ್ದಾನೆ. ಚಿಕಾಗೊ ವಿಮಾನ ಒಡಂಬಡಿಕೆಯ ಮೇರೆ ಕಲಮಿನನ್ವಯ ಯಾವದೇ ರಾಷ್ಟ್ರದ ಮೇಲೆ ಎಲ್ಲಿಯೂ ಇಳಿಯದೆ ಹಾರುವ ಹಕ್ಕು ಬೇಕಾದವರಿಗೆ ಬರುವದೆಂದು ಅವನ ವಕೀ ಲರು ಹೇಳಿದ್ದಾರಂತೆ! ಈ ವಾದವನ್ನು ನಿರಾ ಕರಿಸಿ ಭಾರತ ಸರಕಾರ ಯೋಗ್ಯ ಉತ್ತರ ಕೊಟ್ಟುದಲ್ಲದೆ ಆಸ್ಟ್ರೇಲಿಯನ್ ಸರಕಾರಕ್ಕೆ ದೂರು ಕೊಟ್ಟಿದೆ. ಪಾಕಿಸ್ತಾನ ಸರಕಾರ ದಿಂದಲೂ ಈ ಬಗ್ಗೆ ವಿವರಣ ಕೇಳಲಾಗಿದೆ. ಕಾಟನ್ನನು ಹೈದರಾಬಾದದ ಮೇಲಿನ ಭಾರ ತದ ದಿಗ್ಬಂಧನವನ್ನು ಮುರಿಯಬೇಕೆಂದೇ ತಾನು ಹೀಗೆ ಮಾಡಿದುದಾಗಿ ಬೇರೆ ಸಾರಿ ತನ್ನ ಅಪರಾಧದ ಗುರುತ್ವವನ್ನು ಹೆಚ್ಚಿಸಿಕೊಂಡಿ ದ್ದಾನೆ. ಅವನು ವಿಮಾನದಲ್ಲಿ ಒಯ್ದುದು ಬರಿ ಔಷಧ ಸಾಮಗ್ರಿಯೆಂದು ಹೇಳಲಾಗಿ ದ್ದರೂ ಮೇಲಿನ ಕಾರಣದಿಂದ ಅವನ ನಡೆವಳಿ ಅಕ್ಷಮ್ಯವಾಗಿದೆ. ಎರಡೂ ಬಾರಿ ನಮ್ಮ ಗಸ್ತಿ ವಿಮಾನಗಳ ಕಣ್ಣು ತಪ್ಪಿಸಿ ಹಾರಿದ ಈ ಸಾಹಸಿಯನ್ನು ಭಾರತ ಸರಕಾರ ಹೀಗೆಯೆ ಬಿಡಕೂಡದೆಂದು ನಾವು ಒತ್ತಿ ಹೇಳುತ್ತೇವೆ. ಕೆಲ ವಾರಗಳ ಹಿಂದೆ ವಿಮಾನ ಮೂಲಕ ಹೈದರಾಬಾದಿಗೆ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ದಿಂದ ಸಾಗಿಸುತ್ತಿದ್ದವರಲ್ಲಿ ಇವನೂ ಒಬ್ಬನೆಂದು ಸಂಬಲಾಗಿದೆ. ಔಷಧವಿರಲಿ, ಇನ್ನೇನಿರಲಿ, ನಮ್ಮ ಆಕಾಶಯಾನ ನಿಯಮವನ್ನು ಮುರಿದ ವಿಮಾನವನ್ನು ಹೊಡೆದು ಕೆಡಹುವ ಧೃಷ್ಟತೆ ಯನ್ನು ನಾವು ತೋರದಿದ್ದರೆ ಜಗತ್ತಿನ ಉಪಹಾಸಕ್ಕೆ ಗುರಿಯಾದೇವು.

ಶಾಂತಿವಾದಿಗಳ ಸಮ್ಮೇಲನ

ಮುಂಬರುವ ಜನೆವರಿಯಲ್ಲಿ ಜಗತ್ತಿನ ಶಾಂತಿವಾದಿಗಳ ಸಮ್ಮೇಲನ ಹಿಂದುಸ್ತಾನದಲ್ಲಿ ನೆರೆವದು. ಇತಿಹಾಸದ ಅದ್ವಿತೀಯ ಶಾಂತಿ ವಾದಿಯಾದ ಗಾಂಧೀಜಿಯ ಜನ್ಮಭೂಮಿ. ಕರ್ಮಭೂಮಿಯಾದ ಈ ದೇಶದಲ್ಲಿ ಈ ಸಮ್ಮೇಲನ ಜರುಗುವದು ಉಚಿತವೇ ಸರಿ. ಅದಕ್ಕೆ ಅಗ್ರ ಸ್ಥಾನಿ ಮಹಾಗಣತರ ಮಹಾತ್ಮರು ಮನು ಷ್ಯರು ಇಂದು ಇಲ್ಲದಿರುವದೇ ವಿಷಾದದ ಸಂಗತಿ. ಆದರೆ ಶಾಂತಿ ಪ್ರೇಮಿಗಳ ಆವರ ಸಂದೇಶವಿನ್ನೂ ಇದೆ. ಪ್ರಥಮ ಮಹಾಯುದ್ಧದಿಂದ ಬುದ್ಧಿ ಕಲಿಯದ ಜೀವಾತ್ಮರು ಪ್ರಬಲ ರಾಷ್ಟ್ರಗಳು ಒಂದು ಯುದ್ಧ ದ ಗಾಯಗಳಿಂದ ಇನ್ನೂ ಚೇತರಿಸಿಕೊಂಡಿ ರದ ಜಗತ್ತನ್ನು ಇನ್ನೊಂದು ಘನಘೋರ ಸಂಗ್ರಾಮದತ್ತ ಎಳೆದೊಯ್ಯುತ್ತಿರುವಾಗ ಶಾಂತಿವಾದಿಗಳು ಮಾಡುವ ಪ್ರಯತ್ನಕ್ಕೆ ಯೋಗ್ಯ ಫಲ ಸಿಗಲೆಂದು ಪ್ರತಿಯೊಂದು ಸಾತ್ವಿಕ ಹೃದಯವೂ ಅತ್ಯಾತುರದಿಂದ ಪ್ರಾರ್ಥಿಸುವದು ಖಂಡಿತ. ಗಾಂಧೀಜಿಯ ಪಟ್ಟಶಿಷ್ಯರಾದ ಕಾಂಗ್ರೆಸ್ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಈ ವಿಷಯದಲ್ಲಿ ಆಕಾಶವಾಣಿ ಭಾಷಣ ಮಾಡುತ್ತ "ಮನುಷ್ಯ ಕುಲದ ವಿಧ್ವಂಸದ ಕಡೆಗೆ ನಾವು ಅವಿಚಾರ ದಿಂದ ಸಾಗುತ್ತಿದ್ದೇವೆ. ನಾವೀಗಲೇ ದೆಸೆ ಬದಲಿಸಿ ಸತ್ಯ, ಸಾತ್ವಿಕತೆ, ಪ್ರೇಮ ಇವುಗಳ ದಾರಿಯನ್ನು ಅನುಸರಿಸದಿದ್ದರೆ ಸರ್ವನಾಶದ ದಂಡೆಯನ್ನು ಮುಟ್ಟುವ ದಿನ ಬೇಗನೆ ಬಾರ ದಿರದು" ಎಂದು ಸಂದೇಶಕೊಟ್ಟಾಗ ಅವರು ಕೋಟ್ಯಂತರ ಶಾಂತಿ ಪ್ರಿಯ ನಾಗರಿಕರ ಹೃದ ಯದ ಮಿಡಿತವನ್ನೇ ಪ್ರತಿಧ್ವನಿಸಿದರು.

ಸಂಸ್ಥಾನಗಳ ಆಡಳಿತ

ಬೇಸರರಿಯದೆ ದುಡಿಯುವ ಭಾರತ ಸರ ಕಾರದ ಶಾಖೆಯೊಂದಿದ್ದರೆ, ಅದು ಸರದಾರ ಪಟೇಲರ ಸಂಸ್ಥಾನ ಶಾಖೆಯೆಂದು ಧಾರಾಳ ವಾಗಿ ಹೇಳಬಹುದು. ಆರುನೂರಕ್ಕೆ ಮಿಕ್ಕಿದ ಸಂಸ್ಥಾನಗಳನ್ನು ಮೂವತ್ತಕ್ಕಿಳಿಸಿದ ಅದರ ವಿಕ್ರಮಕ್ಕೆ ಎಲ್ಲರೂ ತಲೆದೂಗಬೇಕು. ಕೆಲ ಚಿಕ್ಕಪುಟ್ಟ ಸಂಸ್ಥಾನಗಳನ್ನು ಪ್ರಾಂತಗಳಲ್ಲಿ ಲೀನಗೊಳಿಸಿ ಉಳಿದ ಕೆಲವನ್ನು ಒಕ್ಕೂಟವಾಗಿ ಮಾರ್ಪಡಿಸಲು ಸಮರ್ಥವಾದ ಅದು ಈಗ ಕ್ರಾಂತಿಯ ಎರಡನೆ ಅಂಕಕ್ಕೆ ರಂಗವನ್ನು ಸಿದ್ಧಗೊಳಿಸಿದೆ. ಕಳೆದ ವಾರ ಹೊಸದಿಲ್ಲಿಯಲ್ಲಿ ಜರಗಿದ ಒಕ್ಕೂಟ ರಚಿಸಿಕೊಂಡ ಸಂಸ್ಥಾನಗಳ ಮುಖ್ಯ ಮಂತ್ರಿಗಳ ಮತ್ತು ರಾಜಪ್ರಮುಖರ ಸಭೆಯಲ್ಲಿ ಇದಕ್ಕಾಗಿ ಅವಶ್ಯನಿರ್ಣಯಗಳನ್ನು ಕೈಕೊಳ್ಳಲಾಯಿತೆಂದು ತಿಳಿಯುತ್ತದೆ. ಪ್ರತಿ ಯೊಂದು ಸಂಸ್ಥಾನ ಒಕ್ಕೂಟಕ್ಕೂ ಒಂದು ಕೇಂದ್ರ ಕಚೇರಿ, ಸ್ವತಂತ್ರ ನ್ಯಾಯಾಲಯ, ಸ್ವತಂತ್ರ ಲೆಕ್ಕ ಪರಿಶೋಧಕ, ಪಬ್ಲಿಕ್ ಸರ್ವೀಸ್ ಕಮಿಶನ್, ಆಡಾಯ ಮಂಡಲ ಇವಿರಬೇಕೆಂದೂ ಇವನ್ನು ವ್ಯವಸ್ಥಿತ ರೀತಿ ಯಿಂದ ಸಂಘಟಿಸಲು ಕೇಂದ್ರ ಸರಕಾರದಿಂದ ಅನುಭವಿಗಳನ್ನು ಕಳಿಸಬೇಕೆಂದೂ ನಿರ್ಧರಿಸ ಲಾಗಿದೆಯಂತೆ. ಈ ಸಂಸ್ಥಾನ ಒಕ್ಕೂಟಗಳ ಆಡಳಿತವನ್ನು ಪ್ರಾಂತಗಳ ಆಡಳಿತದ ದರ್ಜೆಗೇ ತರುವದು ಈ ಬದಲಾವಣೆಗಳ ಉದ್ದೇಶ. ಸಂಸ್ಥಾನಗಳಲ್ಲಿ ಜಾಗೀರದಾರಿ ರಾಜ್ಯಪದ್ಧತಿಯು ಕೇವಲ ಶೋಭೆ ಉಳಿಯುವಂತೆ ತಿದ್ದಿ ಪಾಲಿಸಲಾ ಗುವದು. ಹೊಸ ವ್ಯವಸ್ಥೆಯಲ್ಲಿ ಸಂಪೂರ್ಣ ಪ್ರಜಾತಂತ್ರ ಜಾರಿಗೆ ಬರುವದು. ಘಟನಾ ಸಮಿತಿಗೆ ಕೂಡ ಹೊಸ ಸದಸ್ಯರನ್ನು ಆರಿಸಿ ಕಳಿಸಲಾಗುವದು. ಈಗಿನಂತೆ ಅರ್ಧಾಂಶ ಸದಸ್ಯರನ್ನು ನರೇಂದ್ರರೂ ಉಳಿದ ಅರ್ಧವನ್ನು ಜನರೂ ಆರಿಸುವ ಪದ್ಧತಿಯನ್ನು ತೆಗೆದು ಎಲ್ಲ ಸದಸ್ಯರೂ ಜನರಿಂದ ಆರಿಸಲ್ಪಡುವಂತೆ ಮಾಡ ಲಾಗುವದು. ನರೇಂದ್ರರೂ ಘಟನಾ ಸಮಿ ತಿಯ ಸದಸ್ಯತ್ವ ಬೇಕಾದರೆ ಜನರ ಮುಂದೇ ಶರಣು ಹೋಗಬೇಕಾಗುವದು.

ಒಕ್ಕೂಟ ಮುಸ್ಲಿಮರು ಮತ್ತು ಹೈದರಾಬಾದ

ದಿನ ದಿನವೂ ಹೈದರಾಬಾದದ ರಜಾಕಾರರ ಕೈಗೊಂಬೆಗಳಾಗಿ ಕೆಲಸ ಮಾಡುವ ಪಟ್ಟಾರು ಒಕ್ಕೂಟ ಮುಸ್ಲಿಮರು ಎಲ್ಲಿ ಮುಂಬಯಿ, ಎಲ್ಲಿ ಮದ್ರಾಸು, ಮಧ್ಯಪ್ರಾಂತ, ಯುಕ್ತ ಪ್ರಾಂತಗಳಿಂದು ಎಲ್ಲೆಡೆಯಲ್ಲೂ ಪೋಲೀಸರ ಕೈಗೆ ಸಿಕ್ಕಿಬೀಳುತ್ತಿರುವ ಸುದ್ದಿಗಳು ಬರು ತ್ತಿವೆ. ಹುಬ್ಬಳ್ಳಿ ನಿಲ್ದಾಣದಲ್ಲಿ ೭೦೦ ಕಾಡತೂಸು ಗಳ ಸಹಿತ ಬಂಧಿಸಲ್ಪಟ್ಟ ಇಬ್ಬರು ಮುಸ್ಲಿಮರ ಪ್ರಕರಣ ಎಲ್ಲಕ್ಕಿಂತ ಈಚಿನ ಉದಾಹರಣೆ. ಈ ಅವ್ಯಾಪಾರದಲ್ಲಿ ತೊಡಗಿ ದವರಲ್ಲಿ ಕೆಲವರಾದರೂ ಪೋಲೀಸರ ಕಣ್ಣಿಗೆ ಮಣ್ಣು ತೂರಿ ಪಾರಾಗುತ್ತಿರುವರೆಂಬಲ್ಲಿ ಸಂದೇಹವೇ ಇಲ್ಲ. ಒಕ್ಕೂಟ ಪ್ರದೇಶಗಳ ಮೇಲೆ ದಾಳಿ ಮಾಡುವ ರಜಾಕಾರರೂ ಅವರ ಗೆಳೆಯರೂ ನೂರಕ್ಕೆ ತೊಂಬತ್ತು ಪ್ರಸಂಗ ಗಳಲ್ಲಿ ನಮ್ಮ ದುರ್ಬಲ ಸ್ಥಳಗಳನ್ನೇ ಗುರಿ ಮಾಡಿಕೊಳ್ಳಲು ಸಮರ್ಥರಾಗುತ್ತಿದ್ದಾರೆ. ಇದನ್ನು ನೋಡಿದರೆ ಈ ದಸ್ಯುಗಳಿಗೆ ನಮ್ಮ ಬಂದೋಬಸ್ತಿನ ವಿವರಗಳು ತೆರಪಿ ಲ್ಲದೆ ದೊರೆಯುತ್ತಿವೆಯೆಂದೂಹಿಸಬಹುದು. ಹತ್ತು ವರ್ಷಗಳಿಂದ ಜಾತೀಯ ವಿಷವನ್ನುಣ್ಣುತ್ತ ಬಂದ ಹಿಂದೀ ಮುಸ್ಲಿಮರಲ್ಲಿ ಕೆಲವರು ರಜವಿಯ ಪ್ರಚಾರಕ್ಕೆ ಬಲಿಬೀಳು ವದು ವಿಚಿತ್ರವೇನೂ ಅಲ್ಲ. ಹೈದ್ರಾಬಾದಿಗೆ ನಿಷಿದ್ಧ ವಸ್ತುಗಳನ್ನು ಸಾಗಿಸುವವರು ಮುಸ್ಲಿ ಮರು ಮಾತ್ರವೇ ಎಂದೂ ಅಲ್ಲ. ಆದರೆ ಈ ಅವ್ಯಾಪಾರದ ಮೂಲಕ ಒಕ್ಕೂಟದ ಭದ್ರತೆ ಗುಂಟಾಗುವ ಗಂಡಾಂತರವನ್ನು ಒತ್ತಟ್ಟಿಗಿ ರಿಸಿದರೂ ಇಂದಿನ ಕಲುಷಿತ ವಾತಾವರಣದಲ್ಲಿ ಸ್ವತಃ ಒಕ್ಕೂಟದ ಮುಸ್ಲಿಮರ ಭದ್ರತೆ ಹಿತ ಗಳನ್ನು ಗಮನಿಸಿ ಇತ್ತ ಲಕ್ಷಕೊಡುವದವಶ್ಯ ವಿದೆ. ಹಿಂದೀ ಒಕ್ಕೂಟಕ್ಕೆ ನಿಷ್ಠೆಯ ಶಪಥ ಮಾಡುವ ಮುಸ್ಲಿಮ ನಾಯ ಕರು ಅಲ್ಲಲ್ಲಿ ಸಭೆ ಸೇರಿಸಿ ಮತ್ತು ಇತರ ಪ್ರಕಾರಗಳಿಂದ ಮುಸ್ಲಿಮರು ಈ ಅವ್ಯಾಪಾರ ದಲ್ಲಿ ತೊಡಗುವದರಿಂದ ಇಡಿ ಸಮಾಜಕ್ಕೆ ಬರ ಬಹುದಾದ ಗಂಡಾಂತರಗಳನ್ನು ಮನಗಾಣಿಸಿ ಈ ಕಾರ್ಯದಲ್ಲಿ ನಿರತರಾದವರಿಗೆ ಅವರು ಅಪ್ರಿಯ—ಸಹಾಯಗಳನ್ನೀಯದಂತೆ ಮಾಡ ಬೇಕಾಗಿದೆ.

ಹರಿಜನ ಅಗ್ರಲೇಖ

ನನ್ನ ಹಿಮಾಲಯ ಇಲ್ಲಿದೆ

(ದಿಲ್ಲಿ ದಿನಚರಿಯ ಅಂಗ್ಲ ಪ್ರತಿಯಲ್ಲಿ ಗಾಂಧಿಯವರ ಪ್ರಾರ್ಥನೋತ್ತರ ಭಾಷಣಗಳು ಹಿಂದುಸ್ತಾನಿಯಲ್ಲಿರುವುದಕ್ಕಿಂತ ಇಂಗ್ಲೀಷಿನಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಅದ್ದರಿಂದ ನಾನು ಅವರು ಸಾವ ಹಿಂದಿನ ದಿನ, ಅಂದರೆ ತಾ. ೨೯, ಜನವರಿ ೧೯೪೮ರಲ್ಲಿ ಮಾಡಿದ, ಪ್ರಾರ್ಥನೋತ್ತರ ಭಾಷಣದ ಒಂದು ಭಾಗದ ಸರಿಯಾದ ಭಾಷಾಂತರವನ್ನು ಕೊಡುವ ಧಾಷ್ಟ್ಯವನ್ನು ಇಲ್ಲಿ ತೋರಿದ್ದೇನೆ. ಏಕೆಂದರೆ ಅದು ಜೀವನ, ಮರಣ ಮತ್ತು ಜಾಗತಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುದರಿಂದ ಬಹು ಮುಖ್ಯವಾದುದೆನಿಸಿದೆ. ಭಾಷಣದಲ್ಲಿ ಗಾಂಧಿಯವರು ತಮಗೂ ಬನ್ನುವಿನಿಂದ ಬಂದು ಅವರಿಗಾಗಿ ಕಾದಿದ್ದ ನಿರಾಶ್ರಿತ ಪ್ರತಿನಿಧಿಗಳಿಗೂ ನಡುವೆ ನಡೆದ ವಾಗ್ವಾದವನ್ನು ಸಭಿಕರಿಗೆ ಹೇಳುತ್ತಿದ್ದಾರೆ. —ಕಿ. ಘ. ಮ.)

ಅವರೆಲ್ಲರೂ ಒಳ್ಳೆಯ ಜನರು. ಅವರು ಕ್ರೋಧ ಪೂರ್ಣರಾಗಿದ್ದುದು ಸ್ವಾಭಾವಿಕ. ಆದರೆ ಕಡೆಯಲ್ಲಿ ಅವರು ನನ್ನ ಬುದ್ಧಿವಾದವನ್ನು ಸ್ವೀಕರಿಸಿದರು. ಅವರಲ್ಲೊಬ್ಬ–ಅವನು ನಿರಾಶ್ರಿತನೋ ಅಥವಾ ಅವರ ಗೆಳೆಯನೋ ನಾನರಿಯೆ–ಹೇಳಿದ, "ನೀವು ಆಗಲೇ ಬೇಕಾದಷ್ಟು ಹಾನಿಯನ್ನು ಮಾಡಿದ್ದೀರಿ. ನೀವು ಮತ್ತೆ ಮತ್ತೆ ಹೆಚ್ಚು ಹಾನಿಯನ್ನು ಮಾಡಬೇಕೆನ್ನುವಿರೋ? ಅದಕ್ಕಿಂತ ನೀವು ಹೊರಟು ಹೋದರೇ ಲೇಸು. ನೀವು ಮಹಾತ್ಮರಾದರೇನು, ಬೇಕಾದವರಾದರೇನು–ನೀವು ನಮಗೆ ಕೇವಲ ತೊಂದರೆಯನ್ನೇ ಕೊಡುತ್ತ ಹೋದರೆ ಹೇಗೆ ? ನೀವು ನಮ್ಮನ್ನು ಬಿಟ್ಟುಬಿಡಿರಿ; ಮರೆತು ಬಿಡಿರಿ; ಓಡಿಹೋಗಿರಿ'' ನಾನು ಎಲ್ಲಿ ಹೋಗಬೇಕೆಂದು ಅವನನ್ನು ಕೇಳಿದೆ. ಅವನೆಂದ—''ಹಿಮಾಲಯಕ್ಕೆ ಹೋಗಿರಿ'' ಎಂದು. ಆಗ ನಾನವನಿಗೆ ಛೀಗುಟ್ಟಿದೆ, ನಿನಗೆ ನನ್ನಷ್ಟು ವಯಸ್ಸಾಗಿಲ್ಲ. ನೀನೂ ಮುದುಕನಾಗಿರುವುದೇನೋ ನಿಜ; ದೇಹದಲ್ಲಿ ಸಬಲನಾಗಿರುವುದು ಹೌದು; ನನ್ನಂಥ ಅರೇಳು ಜನರನ್ನು ನೀನು ಸುಲಭವಾಗಿ ಉಳಿರುಸಿಬಿಡಬಲ್ಲೆ. ನಾನು ಬರಿಯ ಒಬ್ಬ ಮಹಾತ್ಮ, ದುರ್ಬಲ ಶರೀರಿ. ನನಗೆ ಹೆದರಿಕೆಯಾದರೆ ನಾನೆಲ್ಲಿರಲಿ?" ಅನಂತರ ಮುಗುಳ್ನಗೆಯಿಂದ ಹೇಳಿದೆ– ''ಯಾರ ಹೇಳಿಕೆಯ ಮೇಲೆ ನಾನು ಹೋಗಲಿ? ನಾನು ಯಾರ ಮಾತನ್ನು ಕೇಳಬೇಕು? ಕೆಲವರು ನಾನೀ ಸ್ಥಳದಿಂದ ಕದಲಬಾರದೆನ್ನುತ್ತಾರೆ. ಮಿಕ್ಕವರೆನ್ನುತ್ತಾರೆ ನಾನಿಲ್ಲಿಂದ ತೊಲಗಬೇಕೆಂದು. ಕೆಲವರು ನನಗೆ ಹೆದರಿಸುತ್ತಾರೆ. ಕೆಲವರು ಬೈಯುತ್ತಾರೆ, ಇತರರು ನನ್ನನ್ನು ಹೊಗಳುತ್ತಾರೆ. ನನಗೆ ದಿಗ್ದರ್ಶಕವೆಂದು ಯಾರ ಅಭಿಪ್ರಾಯವನ್ನು ನಾನು ತೆಗೆದುಕೊಳ್ಳಲಿ? ಅದ್ದರಿಂದ ದೇವರನ್ನೇ ಮಾರ್ಗದರ್ಶಕನೆಂದು ನಾನು ಸ್ವೀಕರಿಸಿದೆ; ಅವನು ಹೇಳಿದಂತೆ ನಡೆಯಬೇಕೆಂದು ಮಾಡಿಕೊಂಡೆ. ದೇವರಲ್ಲಿ ನಂಬಿಕೆಯೇ ನನಗಿಲ್ಲ ಎಂದು ನೀನು ಹೇಳಬಹುದು. ಹಾಗಿದ್ದಲ್ಲಿ ನೀನು ಕಡೆಯ ಪಕ್ಷ ನನಗೆ ವಿಚಾರ ಸ್ವಾತಂತ್ರ್ಯವನ್ನಾದರೂ ಬಿಡಬೇಕು. ನೀನು ಕೂಡ ಹೇಳಬಹುದು, "ನಾವೇ ದೇವರು" ಎಂದು. ಅಂದರೆ ಸಮಾಜದ ಇಚ್ಛೆಯೇ ದೇವರು ಎಂದು. ಆದರೆ ಇದು ಸಂಯುಕ್ತ ಇಚ್ಛೆಗೆ ಸಂಬಂಧಿಸಿದ ಪ್ರಶ್ನೆಯಲ್ಲ, ದೇವರೇ ಇಲ್ಲಿ ಸ್ವತಃ ನರಳುವವನಲ್ಲ, ದುಃಖಸಾಗರ ಮಗ್ನನಾಗಿಲ್ಲ. ಆದರವನು ದುಃಖಿಗಳ ಸಹಾಯಕನೂ ಸ್ನೇಹಿತನೂ ಎನಿಸಿದ್ದಾನೆ.

ಪ್ರತಿಯೊಬ್ಬ ಹೆಂಗಸೂ ಸ್ವತಃ ನನ್ನ ತಂಗಿ ಅಥವಾ ಮಗಳು ಎಂದು ನಾನು ಹೇಳಿದಾಗ ಅವಳ ದುಃಖ ನನ್ನದಾಗಿ ಬಿಡುತ್ತದೆ. ನಿನ್ನ ಎಡರುಗಳನ್ನು ನಾನು ಅರಿತುಕೊಳ್ಳಲಿಲ್ಲವೆಂದೂ ಅದರಲ್ಲಿಯ ನನ್ನ ಭಾಗವನ್ನು ನಾನು ಅನುಭವಿಸುತ್ತಿಲ್ಲವೆಂದೂ ನಿನೇಕೆ ಭಾವಿಸುವೆ? ನಾನು ಹಿಂದು ಮತ್ತು ಶೀಖರ ಶತ್ರುವೆಂದೂ ಕೇವಲ ಮುಸಲ್ಮಾನರ ಮಿತ್ರನೆಂದೂ ನೀನೇಕೆ ಆಲೋಚಿಸುವೆ? "

ನನ್ನೊಡನೆ ಸ್ಪಷ್ಟವಾಗಿ ಮಾತಾಡಿ ಈ ನನ್ನ ಗೆಳೆಯ ಬಹಳ ಒಳ್ಳೆಯದನ್ನು ಮಾಡಿದ್ದಾನೆ. ಕೆಲವರು ನನಗೆ ಬೈದು ಬರೆಯುತ್ತಾರೆ, ಮತ್ತುಳಿದವರು ತಾವು ನರಕದಲ್ಲಿದ್ದರೂ ಸರಿಯೆ, ತಮ್ಮನ್ನು ಬಿಟ್ಟು ದೂರ ಹೋಗಿರೆಂದು ವಿನಯಪೂರ್ವಕವಾಗಿ ಬರೆಯುತ್ತಾರೆ. ಅವರ ನಡುವಿಂದ ನಾನು ಹೊರಟು ಹೋಗುವುದು ಅವರಿಗೆ ಬೇಕಾಗಿದೆ. ಆದರೆ ನಾನು ಯಾರದಾದರೂ ಮಾತನ್ನು ಕೇಳಿ ಹೇಗೆ ಹೊರಟ ಹೋಗಲಿ ? ನಾನು ಯಾರದಾದರೂ ಅಪ್ಪಣೆಯ ಮೇರೆಗೆ ಮಾನವ ಸೇವೆಯನ್ನು ಕೈಕೊಂಡಿಲ್ಲ; ನಾನು ದೇವರು ಇಚ್ಛಿಸಿದಂತಿದ್ದೇನೆ, ಅವನು ನಿರ್ದೇಶಿಸಿದಂತೆ ಕೆಲಸ ಮಾಡುತ್ತೇನೆ. ಅವನಿಗೆ ಇಷ್ಟಬಂದದ್ದನ್ನು ನನ್ನಿಂದ ಮಾಡಿಸಲಿ. ಅವನಿಗೆ ಬೇಕಾದರೆ ನನ್ನನ್ನವನು ಕೊಲ್ಲಬಲ್ಲ. ದೇವರ ಆದೇಶದ ಮೇರೆಗೆ ನಾನು ನಡೆದುಕೊಳ್ಳುತ್ತಿರುವೆನೆಂದು ನನ್ನ ನಂಬಿಗೆ.

ಹಿಮಾಲಯದಲ್ಲಿದ್ದರೆ ನನಗೆ ಬಹಳ ಆನಂದವಾಗುತ್ತಿತ್ತು. ನನಗಲ್ಲಿ ಅಹಾರ, ಪಾನೀಯ ಇಲ್ಲವೆ ಬಟ್ಟೆ ಯಾವುದೂ ಬೇಕಾಗುತ್ತಿದ್ದಿಲ್ಲ. ಅದೊಂದು ಶಾಂತಿಯ ಬೀಡಾಗುತ್ತಿತ್ತು. ಆದರೆ ನಾನು ಮಾರ್ಮಿಕ ವೇದನೆಯ ಮೂಲಕವೇ ಶಾಂತಿಯನ್ನು ಮುಟ್ಟಬೇಕೆಂದಿದ್ದೇನೆ. ನನ್ನ ಹಿಮಾಲಯ ಇಲ್ಲಿಯೇ ಇದೆ. ನೀವೆಲ್ಲರೂ ಹಿಮಾಲಯಕ್ಕೆ ಹೋಗಹತ್ತಿದ್ದರೆ ನಿಮ್ಮೊಡನೆ ನನ್ನನ್ನೂ ಕರೆದುಕೊಂಡು ಹೋಗಬಹುದು.

[ದಿಲ್ಲಿ ದಿನಚರಿಯ ಹಿಂದುಸ್ತಾನೀ ಪ್ರತಿಯಿಂದ ಭಾಷಾಂತರಿಸಿದುದು.]

ಗಾಂಧಿ

[ಯಾತನೆಯೆಂಬುದು ಮಾನವ ಜಾತಿಯ ಗುರುತು. ಅದೊಂದು ಕಾಲಾತೀತ ನಿಯಮ. ತನ್ನ ಮಗು ಬದುಕಲೆಂದು ತಾಯಿ ಯಾತನೆಯನ್ನು ಸಹಿಸುವಳು. ಸಾವಿನಿಂದ ಜೀವದ ಉದಯವಾಗುವದು. ಗೋದಿ ಬೆಳೆಯಬೇಕಾದರೆ ಬೀಜ ನಾಶಹೊಂದುವದು ವಿಧಿ. ಯಾತನೆಯ ಅಗ್ನಿಕುಂಡದಲ್ಲಿ ಪರಿಶುದ್ಧವಾಗದೆ ಯಾವ ದೇಶವೂ ಎಂದೂ ಏಳಿಗೆಹೊಂದಿಲ್ಲ.—. ಕೆಡುಕಿನ ಅಸ್ತಿತ್ವಕ್ಕೆ ಯಾವ ತರ್ಕಶುದ್ಧ ಕಾರಣವನ್ನೂ ನಾನು ಕೊಡಲಾರೆ. ಹಾಗೆ ಕೊಡಲೆಳಸಿದರೆ ಪರಮಾತ್ಮನಿಗೆ ಸಮಾನನೆನಿಸಲು ಹವಣಿಸಿದಂತೆ. ಆದುದರಿಂದ ಕೆಡುಕನ್ನು ಕೆಡುಕೆಂದು ಗುರುತಿಸುವದೊಂದೇ ನನಗೆ ಸಾಕು. ಜಗತ್ತಿನಲ್ಲಿ ಕೆಡುಕಿಗೆ ಅಸ್ಪದ ಕೊಟ್ಟದ್ದರಿಂದಲೆ ಭಗವಂತನು ದೀರ್ಘಕಾಲದಿಂದ ಯಾತನೆ ಪಡುತ್ತಿದ್ದಾನೆ, ಅದನ್ನು ಸಹಿಸುತ್ತಿದ್ದಾನೆ ಎಂದು ನಾನು ಬಗೆಯುವೆ ... ಮಕ್ಕಳಾಗಲಿ ಯುವಕರಾಗಲಿ ವೃದ್ಧರಾಗಲಿ ಸತ್ತರೆ ಸಾವೇಕೆ ಗಾಬರಿಯಾಗಬೇಕು ? ಆತ್ಮದ ಅಸ್ತಿತ್ವದಲ್ಲಿ ವಿಶ್ವಾಸವುಳ್ಳವರೆಲ್ಲ— ಹಿಂದುವಿರಲಿ ಮುಸ್ಲಿಮ ಅಥವಾ ಪಾರ್ಸಿಯಿರಲಿ ಯಾರಿಗೆ ಅದರಲ್ಲಿ ವಿಶ್ವಾಸವಿಲ್ಲ?— ಆತ್ಮಕ್ಕೆ ಮರಣವಿಲ್ಲೆಂದು ಬಲ್ಲರು. —ಗಾಂಧೀಜಿ]

ಹಿಂದೂ ಘಾತಕಿಯೊಬ್ಬನ ಕೈಯಿಂದ ಮಹಾತ್ಮಾ ಗಾಂಧಿಗೊದಗಿದ ಮೃತ್ಯುವಿನಿಂದ ಕೆಡುಕಿನ ಸಾಮರ್ಥ್ಯ ನೆನಪಿಗೆಬಂದು ಹೃದಯ ಹೌಹಾರುತ್ತದೆ. ಈ ಶತಕದ ಮತ್ತಾವ ಮನುಷ್ಯನಿಗಿಂತಲೂ ಹೆಚ್ಚಾಗಿ ಗಾಂಧಿಯವರು ಕೇಡು ಬಗೆದವರಿಗೆ ಒಳಿತು ಬಗೆದರು, ಪಿಡಿಸಿದವರನ್ನು ಹರಸಿದರು, ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ತೋರಿದರು. ನಿಂದಿಸಿದವರನ್ನು ಅವರು ತಿರುಗಿ ನಿಂದಿಸಲಿಲ್ಲ. ತಮ್ಮನ್ನು ಪೀಡಿಸಿದವರಿಗಾಗಿ ಅವರು ದೇವರಲ್ಲಿ ಪ್ರಾರ್ಥಿಸಿಕೊಂಡರು. ಒಂದು ಕೆನ್ನೆಗೆ ಹೊಡೆದವರಿಗೆ ಅವರು ಪುನಃಪುನಃ ಮತ್ತೊಂದು ಕೆನ್ನೆಯನ್ನು ಒಡ್ಡಿದರು. ಸಾಮಾನ್ಯವಾಗಿ ದೊಡ್ಡವರು ತಮಗೆ ಅವಶ್ಯವೆಂದು ಬಗೆಯುವ ಸಂರಕ್ಷಣೆಗಳನ್ನು ಸುತ್ತಲೂ ಇಟ್ಟುಕೊಂಡು ತಮ್ಮ ಜೀವ ಉಳಿಸಿಕೊಳ್ಳಲು ಅವರು ಪ್ರಯತ್ನಿಸಲಿಲ್ಲ. ತಮಗಿರುವ ಪ್ರಾಣಾಪಾಯ ಅವರಿಗೆ ತಿಳಿದಿತ್ತು. ಏಕೆಂದರೆ ಹಿಂದೆಷ್ಟೋ ಸಲ ಅವರನ್ನು ಕೊಲ್ಲುವ ಪ್ರಯತ್ನಗಳು ನಡೆದಿದ್ದವು. ಅದರೂ ಅವರು ಭಯವಿಲ್ಲದೆ ಹೋಗಿ ಜನರಲ್ಲಿ ಬೆರೆಯುತ್ತಿದ್ದರು, ತಮ್ಮನ್ನು ಕಾಣಬೇಕೆಂಬವರೆಲ್ಲರಿಗೂ ಕಾಣಿಸಿಕೊಳ್ಳುತ್ತಿದ್ದರು, ಮತ್ತು ಕೊನೆಗೊಮ್ಮೆ ದಿನವೂ ಜರಗಿಸುತ್ತಿದ್ದ ಸಾರ್ವಜನಿಕ ಪ್ರಾರ್ಥನೆಯ ಸಭೆಯಲ್ಲಿ ಗುಂಡಿಗಾಹುತಿಯಾದರು.

ಕೆಡುಕನ್ನು ಒಳಿತಿನಿಂದ ಸೋಲಿಸಲು ಯಾರಾದರೂ ಪ್ರಯತ್ನಿಸಿದ್ದರೆ ಗಾಂಧಿ ಅ ಪ್ರಯತ್ನ ಮಾಡಿದ್ದರೆನ್ನಬೇಕು. ಆದರೆ ಅವರ ಮರಣ ಹೊಂದಿದರು. ಒಳಿತೇ ಸೋತಿತು. ಗಾಂಧಿ ತಮ್ಮ ಪ್ರಾಣವನ್ನುಳಿಸಿಕೊಳ್ಳಲು ಹವಣಿಸಲಿಲ್ಲ; ಉಳಿಸಿಕೊಳ್ಳಲೂ ಇಲ್ಲ. ಅಹಿಂಸೆಯ ಪ್ರವರ್ತಕನು ಸತ್ತನು– ಹಿಂಸೆಗೆ ಬಲಿಯಾಗಿ. ಸತ್ಯದ ಪ್ರತಿಪಾದಕನು ದ್ರೋಹಕ್ಕೆ ಅಹುತಿಯಾಗಿ ನಾಶವಾದನು. ಹಗೆಗಳನ್ನೂ ಪ್ರೀತಿಸಿದವನು ಹಗೆಯ ಕೈಯಲ್ಲಿ ಸತ್ತನು. ಕೆಡಕು ತನ್ನ ಕೈಲಾದುದನ್ನೆಲ್ಲ ಮಾಡಿತು. ಆದರೆ ಅದು ಒಳಿತನ್ನು ಗೆದ್ದಿತೆ?

ಗಾಂಧಿ ನಮ್ಮ ಜಗತ್ತಿನಲ್ಲೆ ನರಶ್ರೇಷ್ಠರಾಗಿದ್ದರು. ಅವರ ಪಕ್ಕದಲ್ಲಿ ನಿಲ್ಲಿಸಿದರೆ ಅವರ ಸಮಕಾಲೀನರಾದ ರೂಜವೆಲ್ಟ, ಸ್ಟಾಲಿನ್, ಹಿಟ್ಲರ್, ಚರ್ಚಿಲ್ಲರು— ಏಕೆ, ವಿಲ್ಸನ್, ಸನ್–ಯತ್–ಸೇನ್ ಮತ್ತು ಲೆನಿನ್ನರು ಕೂಡ– ಕನಿಷ್ಠರಾಗಿ ಕಾಣುತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಗಳಿಸಿದ ಕೀರ್ತಿ ಮತ್ತಾರಿಗಿಂತಲೂ ಹೆಚ್ಚಾಗಿ ಅವರಿಗೇ ಸಲ್ಲಬೇಕೆಂಬುದರಲ್ಲಿದ್ದಿಲ್ಲ ಅವರ ಶ್ರೇಷ್ಠತೆ. ಭಾರತದ ಹೋರುತಿದ್ದ ಜಾತಿಗಳಲ್ಲಿ ಸತ್ಯಾಗ್ರಹದ ಬಲದಿಂದ ಸಂಧಿಯನ್ನು ಸಾಧಿಸಿದ ಅವರ ಅದ್ಭುತ ಸಾಹಸದಲ್ಲಿಯೂ ಆ ಶ್ರೇಷ್ಠತೆಯಿದ್ದಿಲ್ಲ. ಬದಲಿಗೆ, ಇಂದಿನ ಜಗತ್ತಿನ ಹೋರಾಟ ರಾಜಕಾರಣದಲ್ಲಿಲ್ಲವೆಂದೂ ಅದು ಮನುಷ್ಯನ ಆತ್ಮದಲ್ಲಿರುವ ಸದಸತ್ ಪ್ರವೃತ್ತಿಗಳ ಕದನದಲ್ಲಿದೆಯೆಂದೂ ಕಂಡುಕೊಂಡದ್ದರಲ್ಲಿ ಅವರ ಹಿರಿಮೆ ಅಡಕವಾಗಿದೆ. ಗಾಂಧಿಯಲ್ಲಿದ್ದ ಈ ಜ್ಞಾನದೃಷ್ಟಿ ಅವರ ರಾಜಕೀಯ ಸಂಗಾತಿಗಳಿಗೆ ಎಷ್ಟೋ ವೇಳೆ ಗಲಿಬಿಲಿಯನ್ನೂ ಗಾಬರಿಯನ್ನೂ ಉಂಟುಮಾಡುತಿತ್ತು. ನೆಹರೂ ಅವರು ತಮ್ಮ ಪುಸ್ತಕಗಳಲ್ಲಿ, ಈ ಋಷಿಯ ಅಂತರಂಗವನ್ನು ಅರಿತುಕೊಳ್ಳುವದು ತಮ್ಮಿಂದಾಗಿಲ್ಲವೆಂದು ಎಷ್ಟೋ ಕಡೆ ಒಪ್ಪಿಕೊಂಡಿದ್ದಾರೆ. ಅದರೂ ಅವರನ್ನು ಇವರು ಪ್ರೀತಿಸುತಿದ್ದರು, ಅವರ ಜ್ಞಾನದ ನಿರ್ಣಯಕ್ಕೆ ಬಾಗುತಿದ್ದರು.

ಗಾಂಧಿಯ ವಿಚಾರವೇ ಸರಿಯಾಗಿತ್ತು. ಅವರ ಮರಣವೇ ಅದಕ್ಕೆ ಸಾಕ್ಷಿ. ಎಲ್ಲ ರಾಜಕೀಯ ವ್ಯವಸ್ಥೆಗಳ ಪರಿಣಾಮವೂ ಕಟ್ಟಕಡೆಗೆ ಅಂತರಂಗಮಂಥನದ ಫಲವನ್ನೇ ಅವಲಂಬಿಸಿದೆ. ಆತ್ಮದ ಒಳ ಮೇರೆಯೆ ಮನುಷ್ಯನ ಕೊನೆಯ ಗಡಿ. ಅಧುನಿಕ ಮನುಷ್ಯ ಆ ಕೊನೆಯ ಸೀಮೆಯ ಬಳಿಗೆ ತಳ್ಳಲ್ಪಡುತಿದ್ದಾನೆ. ತಮ್ಮ ಹಿಂದೂ ಬಾಂಧವರನ್ನು ಅವರು ಅಂತರಂಗದ ಗರ್ಭಗುಡಿಯತ್ತ ನಿಷ್ಠುರವಾಗಿ ಅಟ್ಟಲು ತೊಡಗಿದರೆಂದೇ ಗಾಂಧಿಯ ಕೊಲೆಯಾಯಿತು. ಜಾತೀಯ ಹೋರಾಟದಿಂದ ಹಿಂದುಸ್ತಾನ ತನ್ನ ಸರ್ವನಾಶ ಮಾಡಿಕೊಳ್ಳುತಿರುವದನ್ನು ಕಂಡು ತಾಳಲಾರದೆ ಅವರು ತಮ್ಮ ಕೊನೆಯ ಉಪವಾಸವನ್ನು ಕೈಕೊಂಡರು. ಎಲ್ಲ ಪಕ್ಷಗಳ ಜನರೂ ಅವರ ಬಳಿಗೆ ಬಂದು ಈ ಸ್ವಯಂಕಲ್ಪಿತ ಯಾತನೆಯನ್ನು ಕೊನೆಗಾಣಿಸಲು ನಿಮ್ಮ ಕರಾರುಗಳೇನೆಂದು ಕೇಳಲಾಗಿ ಅವರು ಕರಾರುಗಳನ್ನು ಹೊರಿಸಿದ್ದು ತಮ್ಮ ಜಾತಿಯ ಮೇಲೆಯೇ. ಅವರು ಮುಸ್ಲಿಮರಿಂದಾಗಲಿ ಸೀಖರಿಂದಾಗಲಿ ಯಾವ ವಾಗ್ದಾನವನ್ನೂ ಅಪೇಕ್ಷಿಸಲಿಲ್ಲ; ಹಿಂದ್ರುಗಳಿಂದಲೇ ಬಹಳ ಬೇಡಿದರು.

ಒಟ್ಟಿನಲ್ಲಿ, ಯಾತನೆಯ ಅಗ್ನಿಕುಂಡವನ್ನು ಹೊಕ್ಕು ಹೊರಡುವ ಅವಮಾನಕರ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಹಿಂದೂ ಬಾಂಧವರನು ಅವರು ಒಪ್ಪಿಸಿದರು. ಪಾಕಿಸ್ತಾನಕ್ಕೆ ವಲಸೆ ಹೋದ ಲಕ್ಷಾಂತರ ಮುಸ್ಲಿಮರನ್ನು ತಿರುಗಿ ತಮ್ಮ ಮನೆಗಳಿಗೆ ಬರುವಂತೆ ಹಿಂದುಗಳು ಆಮಂತ್ರಣವೀಯಬೇಕಾಯಿತು. ಸ್ವತಃ ಮುಸ್ಲಿಮರ ಕೈಯಲ್ಲಿ ಘೋರ ಅತ್ಯಾಚಾರಗಳನ್ನು ಅನುಭೋಗಿಸಿದ್ದ ಹಿಂದುಗಳು ಹಿಂದೆ ಬರಲೊಪ್ಪಿದ ಮುಸ್ಲಿಮರನ್ನು ಸುರಕ್ಷಿತವಾಗಿ ಕರೆತರಲು ಒಪ್ಪಿದರು. ಮುಸ್ಲಿಮರ ಮಸೀದೆಗಳನ್ನು ಪುನಃ ತೆರೆದು ಅವುಗಳನ್ನು ಅವುಗಳ ಅಧಿಕಾರಿಗಳಿಗೆ ಒಪ್ಪಿಸಬೇಕು ಎಲ್ಲ ಬಗೆಯ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರವನ್ನು ನಿಲ್ಲಿಸಬೇಕು. ಇದಕ್ಕೆ ಪ್ರಮಾಣವೆಂದೂ ಪ್ರಾಯಶ್ಚಿತ್ತ ಸ್ವರೂಪವೆಂದೂ ನೂರು ವರ್ಷ ಹಿಂದೆ ಜಾತೀಯ ತಿಕ್ಕಾಟ ತಲೆದೋರುವ ಮೊದಲು ಮಾಡುತ್ತಿದ್ದಂತೆ ಮುಸ್ಲಿಮರ ಹಬ್ಬದ ದಿನ ಅವರಲ್ಲಿ ಹೋಗಿ ಉಡುಗೊರೆಗಳನ್ನು ಕೊಡಲು ಹಿಂದುಗಳು ಒಪ್ಪಿಕೊಂಡರು. ಹಾಲದ್ದಕ್ಕೆ, ಕಾಶ್ಮೀರದ ಮೇಲಿನ ದಾಳಿಗೆ ಧನಸಹಾಯ ಮಾಡಲು ಉಪಯೋಗಿಸಲ್ಪಟ್ಟೀತೆಂಬ ಸಂಶಯದಿಂದ ಪಾಕಿಸ್ತಾನಕ್ಕೆ ಸಲ್ಲಬೇಕಾದ ೫೦ ಕೋಟಿ ರೂಪಾಯಿಗೆ ಪಾಕಿದ ಮುಟ್ಟುಗೋಲನ್ನು ಹಿಂದುಸ್ತಾನ ಸರಕಾರ ತಿರುಗಿ ತೆಗೆದುಕೊಳ್ಳಬೇಕೆಂದು ಗಾಂಧಿ ಹಟ ಹಿಡಿದರು. ಆ ಹಣ ಪಾಕಿಸ್ತಾನಕ್ಕೆ ದೊರಕಿತು.

[illegible] ಅರ್ಥ ಏನೆಂದು [illegible] ಅಲ್ಪ ಸ್ವಲ್ಪವಾದರೂ [illegible] [ಯುದ್ಧ ಕಾಲದಲ್ಲಿ [illegible]] [illegible] ಅಮೇರಿಕನ್ [illegible] ಕೆಲಿಫೋರ್ನಿಯಾದ [illegible] ನೆನಪಿದೆಯೆ? [illegible] ಅಮೇರಿಕನ್ [illegible] ಎಂದಾದರೂ ಪ್ರಯತ್ನಿಸೀತೆ? [illegible] ಎಷ್ಟು ಸಂಭವನೀಯವೆಂದು ವಿಚಾರಿಸಿರಿ. [illegible] ಅಮೇರಿಕನ್ನರನ್ನು [illegible] ಅಮೇರಿಕೆಯಲ್ಲಿ [illegible] ಗಾಂಧಿಯು [illegible] ಹಿಂದುಗಳು [illegible] ಸಮಾನವಾದ ತ್ಯಾಗದ [illegible]. ಅದುದರಿಂದ ಗಾಂಧಿಯು [illegible] ಇಂಥ ಪ್ರಸಂಗದಲ್ಲಿ ಇಷ್ಟು [illegible] ಅನೇಕ ಭಾರತೀಯರು ಭಾವಿಸಿದ್ದರೆ ಅದರಲ್ಲೇನು ಆಶ್ಚರ್ಯ?

ಅದು ಕಾರಣ ಗಾಂಧಿ ಸತ್ತರು. ಇತರ ಹಿಂದುಗಳು ಪಶ್ಚಾತ್ತಾಪಪಟ್ಟು ತಮ್ಮ ಶಸ್ತ್ರಗಳನ್ನು ತ್ಯಜಿಸುವಂತೆ ಮಾಡಿದ ಗಾಂಧಿಯನ್ನು ಒಬ್ಬ ಹಿಂದು ಕೊಂದನು. ಆದರೆ ಗಾಂಧಿ ಸತ್ತೂ ಮಾತಾಡುತ್ತಿದ್ದಾರೆ. ತಮಗೂ ಹಿಂದೂ ಮುಂದಾಳುಗಳಿಗೂ ಆದ ಒಪ್ಪಂದಕ್ಕೆ ಅವರು ತಮ್ಮ ಪ್ರಾಣಗಳಿಂದಲೇ ಮುದ್ರೆಯೊತ್ತಿದರು. ಅದರಿಂದ ಅವರು ಜೀವಂತರಾಗಿದ್ದಾಗ ಕೊಟ್ಟ ಮಾತನ್ನು ಪೂರೈಸಲು ಹಿಂದುಗಳು ಇನ್ನಷ್ಟು ಬದ್ಧರಾದರು. ಹಿಂದೂ ಭಾರತದ ಬಗ್ಗೆ ಮುಸ್ಲಿಮರ ಮನಸ್ಸು ಮೃದುವಾಗುವದಕ್ಕೆ ಅವರ ಬಲಿದಾನವೆ ಎಲ್ಲಕ್ಕಿಂತ ಪ್ರಬಲ ಕಾರಣವಾದೀತು. ಗಾಂಧಿಯನ್ನು ಕೊಂದವನು ಮುಸ್ಲಿಮನಾಗಿದ್ದರೆ ಏನಾಗುತಿತ್ತೆಂಬುದು ಕಲ್ಪನಾತೀತ. ಆದರೆ ಗಾಂಧಿಯನ್ನು ಅವರ ಜಾತಿಯವನೇ ಕೊಂದದ್ದರಿಂದ ಭಾರತದ ಸಮಸ್ಯೆಯ ಅಧ್ಯಾತ್ಮಿಕ ಸ್ವರೂಪ ಕಣ್ಣಿಗೆ ಕಟ್ಟಿದಂತಾಗಿ ಎಲ್ಲ ಜಾತಿಯವರ ಹೃದಯಗಳಲ್ಲಿಯೂ ಅದು ಅಚ್ಚೊತ್ತಿದಂತೆ ಉಳಿಯುವದು.

ಗಾಂಧಿಯವರು ಸತ್ತಿದ್ದಾರೆ, ಆದರೂ ವಿರೋಧಾಭಾಸವಾಗಿ ಎಂದಿಗಿಂತಲೂ ಅತಿ ಸಶಕ್ತರಾಗಿ ಬಾಳುತ್ತಿದ್ದಾರೆ. ಅವರು ಭಾರತದ ಸಾಮಾನ್ಯ ಜನತೆಯಲ್ಲಿ ಬದುಕಿದ್ದಾರೆ; ಅವರನ್ನು ಗಾಂಧಿಯವರು ಆಧುನಿಕ ಇತಿಹಾಸದಲ್ಲಿ ಮೊದಲಸಲ ಆತ್ಮಗೌರವಕ್ಕೆ ಎತ್ತಿದ್ದಾರೆ. ಅವರು ಭಾರತದ ಹಿಂದು, ಮುಸ್ಲಿಮ ಇತರ ಮುಖಂಡರಲ್ಲಿ ಬದುಕಿದ್ದಾರೆ; ಸೇಡಿಗೆ ಬದಲಾಗಿ ಒಳ್ಳೆಯದನ್ನು ಮಾಡುವೆವೆಂದು ಬದ್ಧಪ್ರತಿಜ್ಞರಾದ ಹಿಂದು, ಮುಸಲ್ಮಾನರೆಲ್ಲರಲ್ಲೂ ಒಂದೇ ಸಮವಾಗಿ ಅವರು ಬದುಕಿದ್ದಾರೆ. ಜಗತ್ತಿನ ಸುತ್ತಲಿರುವ ಕ್ರೈಸ್ತ ಧರ್ಮದಲ್ಲಿ ಅವರು ಬದುಕಿದ್ದಾರೆ. ಅದು ತನ್ನ ಅನ್ಯಾಯಗಳಲ್ಲಿ [illegible], ರಾಷ್ಟ್ರೀಯ ಸಂಬಂಧಗಳಲ್ಲಿ ಕ್ರಿಸ್ತನ [illegible] ಜೀವಂತ [illegible] ಅವರಲ್ಲಿ ಕಾಣಬೇಕಾಯಿತು. ನಮ್ಮ ಒಳ ಹೊರಗಣ ಜಗತ್ತುಗಳ [illegible] ಆಧ್ಯಾತ್ಮಿಕ ಮತ್ತು ರಾಜಕೀಯ ಹೋರಾಟಗಳು ನಿಜವಾಗಿಯೂ ಒಂದೇ, ಅವನ್ನು ಒಟ್ಟಿಗೆ [illegible] ಎಂಬುದಕ್ಕೆ ಅವರು ಇತಿಹಾಸದಲ್ಲಿ ಒಂದು ಜೀವಂತ ಪ್ರಮಾಣವಾಗಿ ನಿಂತಿದ್ದಾರೆ.

ಇಷ್ಟೆಲ್ಲ ಹೇಳಿದ ಬಳಿಕ, ಇದಕ್ಕಿಂತ ಏನಾದರೂ ಹೆಚ್ಚಿನದಿದೆಯೆಂದು ಕೇಳಬಯಸುವವರಿಗೆ ಗಾಂಧಿಯವರ ಜೀವನ [illegible] ಹೇಳಬೇಕಾಗುತ್ತದೆ. ಅವರ ೭೮ ವರ್ಷಗಳನ್ನು [illegible]

([illegible])

ಯಾವಾಗಲೂ ಇರುವ ಮಹಾತ್ಮ

[illegible]

ಅಂಥ ಮಹಾತ್ಮನು ಸತ್ಯನಿಷ್ಠೆಯುಳ್ಳ ಮಹಾಪುರುಷ. ಅವರ ಕಾರ್ಯ, ಸತ್ಯ ಎಂದಿಗೂ ನಮ್ಮನ್ನು ಹೊಂದಿಕೊಂಡೇ ಇರುತ್ತದೆ. [illegible]

"ಅವರು ಅಹಿಂಸೆ, ಸತ್ಯ, ತ್ಯಾಗ ಮತ್ತು [illegible]"

ಅಜ್ಞಾನಿಯ ಮತ

[illegible]

ಸಾವು ನಿಜವಾದ ಗೆಳೆಯ

[illegible]

"ಸಾವು ಒಬ್ಬ ನಿಜವಾದ ಗೆಳೆಯ [illegible]"

ಸರದಾರ ಪಟೇಲರು ತಮ್ಮ "ನಾಯಕನ ಬಗ್ಗೆ ಹೇಳಿದ್ದಕ್ಕೂ ಬಹಳ ಕಾಲದ ಹಿಂದೆ [illegible]"

ನಿರಾಕಾರ ಸ್ಫೂರ್ತಿ

[illegible]

ಹಾಗೆಯೇ ನಮ್ಮ ಪ್ರಿಯತಮನೂ ಸುತ್ತಲೂ ಅವರ [illegible] ಇಂದು ನಮಗೆ ಹೆಚ್ಚು ಹತ್ತಿರದವರಾಗಿದ್ದಾರೆ. ಅವರಿಗೆ ಈಗ ಭೌತಿಕವಾದ ಕಾಲದೇಶಗಳ ಬಂಧನ ಇಲ್ಲ. ಪ್ರಾಕಾರ ಸ್ಥಿತಿಯಲ್ಲಿ ಅವರು ದೇಹ ತ್ಯಾಗ ಮಾಡುವವರೆಗೆ ಹಿಂದೆ ಮಾಡುತ್ತಿದ್ದುದ ಕ್ಕಿಂತ ಹೆಚ್ಚು ಸಹಾಯ ಮಾಡಲು ಸಮರ್ಥರಾಗಿದ್ದಾರೆ. ಅವರನ್ನು ತೀವ್ರವಾಗಿ ಧ್ಯಾನಿಸಿ ಮೌನವಾಗಿ ಪ್ರಾರ್ಥಿಸಿದಲ್ಲಿ ಅವರು ಇಲ್ಲಿ ಈಗ ಸದಾ ಇರುವರು ಎಂಬುವನ್ನು ನಾವು ಸ್ಥಿರವಾಗಿ ಒಪ್ಪಬಲ್ಲೆವಷ್ಟೇ. ಏಕೆಂದರೆ ನಾವು ಮಂಗಲು ಹೋಗುವಾಗ ಬೆಳಕು ಮತ್ತು ಉತ್ತರ ಬೇಕಾದ ನಮ್ಮ ಸಮಸ್ಯೆಗಳನ್ನು ಬಿಡಿಸಿದರೆ, ದೇಶಕ್ಕೆ ಬೆಳವಣಿಗೆಯಲ್ಲಿ ನಮ್ಮ ವೈಯಕ್ತಿಕ ಸಮಸ್ಯೆ ಬಗೆಹರಿಸು ನಮ್ಮಲ್ಲಿ ಮಾರ್ಗದರ್ಶನ ಮಾಡಲು ನಾಳಿನ್ನು ಬೆಳಕು ಸತ್ಯವನ್ನು ಕಂಡು ನಾವು ಸಂತಸಪಡುತ್ತಾ ಸಾಗುವೆವು.

—ಎಂ. ಹಾಫೀಜ್ ಸಯ್ಯದ್

ಗಾಂಧಿ

(೮ ನೇ ಪುಟದಿಂದ)

ದೇಶಾಗುತ್ತದೆ. ಒಬ್ಬ ಮನುಷ್ಯನ ಪ್ರಭಾವದ ಶಾಶ್ವತತ್ವ, ಗಾಂಧಿಯವರ ಶೀತಲ ಸ್ಪರ್ಶದ ಪ್ರಭಾವ ಕೂಡ, ಈ ಜಜ್ಞನ ಕೊಲೆಯಲ್ಲಿ ಮೂರ್ತೀಭವಿಸಿದ ಕೀಡಿಗೆ ಯೋಗ್ಯವಾದ ಉತ್ತರವಾಗಲಾರದು, ಔಷಧವಾಗಲಾರದು.

ಕ್ರಿಸ್ತ ಚರ್ಚಿನ ಶ್ರದ್ಧೆಯಂತೆ ಒಳ್ಳೆಯ ಬಾಳಿಗೆ ಸಾವೇ ಕೊನೆಯಲ್ಲ, ಅತ್ಯ ಬದುಕಿಯೇ ಉಳಿಯುವುದು ಎಂದು ಗಾಂಧಿಯವರು ನಂಬಿದರು. ಬಹಳ ಕಾಲದ ಹಿಂದೆ ಅವರು ಹೇಳಿದ ಕೆಲವು ಮಾತುಗಳು ಈಗ ನೆನಪು ಮಾಡಿಕೊಳ್ಳಲು ಯೋಗ್ಯವಾಗಿವೆ.

"ನನ್ನ ಸುತ್ತಲಿನ ಎಲ್ಲವೂ ನಿತ್ಯಪರಿವರ್ತನಶೀಲವುಳ್ಳವೆಂದೂ, ಸದಾ ಸಾಯುವಂಥವೆಂದೂ ನನಗೆ ಅನುಭವವಿದ್ದರೂ ಆಯೆಲ್ಲ ಬದಲಾವಣೆಗೆ ಆಧಾರವಾಗಿ ಅಪರಿವರ್ತನೀಯವೂ, ಸರ್ವಧಾರಿಯೂ, ಸೃಷ್ಟಿಶಕ್ತಿಯುಳ್ಳದ್ದೂ, ಲಯಕಾರಕವೂ, ಪುನಃ ಸೃಷ್ಟಿ ಮಾಡಬಲ್ಲುದೂ ಆದ ಒಂದು ಚೈತನ್ಯಶಕ್ತಿ ಇದೆ. ಆ ಚೈತನ್ಯ, ಆ ಅಕ್ತಿ—ಅದೇ ದೇವರು. ಅವನು ಕೇವಲ ದಯಾಮಯನೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಸಾವಿನ ನಡುವೆ ಜೀವದ ಅಮರತ್ವವನ್ನು ನಾನು ನೋಡಬಲ್ಲೆ; ಅಸತ್ಯದ ಮಧ್ಯೆ ಸತ್ಯ ಮುನ್ನುಗ್ಗಿ ಸಾಗಿದ್ದು ಕತ್ತಲ ನಡುವೆ ಬೆಳಕು ಪ್ರಜ್ವಲಿಸುತ್ತಿದೆ. ಆದುದರಿಂದ ದೇವರೆಂದರೆ ಜೀವ (ಜೀವನ), ಸತ್ಯ ಮತ್ತು ಬೆಳಕು. ಅವನೇ ಪ್ರೇಮ. ಅವನೇ ಸರ್ವೋತ್ತಮ ಸಾಕ್ಷಿತತ್ವ." (ಕೊಲಂಬಿಯಾ ಗ್ರಾಮೋಫೋನ್ ಕಂಪನಿಯ ರೆಕಾರ್ಡಿನಿಂದ.)

ಆ ಶ್ರದ್ಧೆಯಲ್ಲಿ ಗಾಂಧಿ ಬದುಕಿ, ಬಾಳಿಯುವರು. ಆ ನಂಬಿಗೆಯಲ್ಲಿ, ಕೇವಲ ಅವರಲ್ಲೇ ಇಂದಿಗೂ ಮತ್ತು ಎಂದೆಂದಿಗೂ ಕ್ರಿಸ್ತನ ಶಿಲುಬೆಗೆ ಅರ್ಥವಿದೆ, ಇರುವುದು.

(೧೧—೧೨—೪೮ ಅಮೇರಿಕದ "ಕ್ರಿಶ್ಚಿಯನ್ ಸೆಂಚುರಿ"ಯ ಕೃಪೆಯಿಂದ)

[ಟಿಪ್ಪಣಿ— ಈ ಸುಂದರ ಸಂಪಾದಕೀಯವನ್ನು ಬರೆದವರಿಗೆ ತಕ್ಕ ಮರ್ಯಾದೆಯನ್ನು ಸಲ್ಲಿಸಿ, ನಾನು ಉಪಾಂತ್ಯ ಪರಿಚ್ಛೇದದಲ್ಲಿ ಹೇಳಿದ ನಿಗಮನವನ್ನು ಒಪ್ಪಿಕೊಳ್ಳಲಾರೆನೆಂದು ವಿನಯಪೂರ್ವಕವಾಗಿ ಹೇಳಬೇಕಾಗಿದೆ. ಮರಣೋತ್ತರ ಜೀವನವಿರಲಿ ಇಲ್ಲದಿರಲಿ (ಅಂದರೆ, ವ್ಯಕ್ತಿತ್ವದ ಅವಿನಾಶಿತ್ವ) ಕೇವಲ ಕೇಡನ್ನು ಎದುರಿಸುವವನ ಶರೀರವನ್ನು ನಾಶಮಾಡಿದ ಕಾರ್ಯದಿಂದ ಅವನ ಬಾಳಿನ ಸೋಲು ಗೆಲವುಗಳನ್ನು ನಿರ್ಣಯಿಸಲು ಬರದು. ಒಳ್ಳೆಯವನೊಬ್ಬನನ್ನು ಕೊಲ್ಲುವ ಗುಂಡು ಅದೇ ಕಾಲದಲ್ಲಿ ಕೊಲೆಗಾರನ ಉದ್ದೇಶವನ್ನೂ ನಾಶಮಾಡಿ ಜೀವತೆತ್ತ ಒಳ್ಳೆಯವನ ಧ್ಯೇಯವನ್ನು ಎತ್ತಿಹಿಡಿಯುವಂತಾದರೆ, ಆಗ ಅದು ಕೇವಲ ಅವನ ಜೀವ ತೆಗೆದುಕೊಂಡ ಮಾತ್ರದಿಂದ ಆ ಒಳ್ಳೆಯವನು ಸೋತನೆಂದಾಗದು. ಅದು ಅವನ ಧ್ಯೇಯ ಸಾಧನೆಗೆ ಕೊಡಬೇಕಾದ ಮೌಲ್ಯದ ಒಂದು ಭಾಗ; ಬದುಕಿ ಇನ್ನೂ ಹೆಚ್ಚು ಹೆಚ್ಚಾಗಿ ಅಂಥ ಮೌಲ್ಯವನ್ನು ಕೊಡಬೇಕಾಗಿ ಬರಬಹುದು. ಭವಿಷ್ಯತ್ತೊಂದೇ ಗೆಲುವಿನ ಅಂತವನ್ನೆಂಬುದನ್ನು ನಿರ್ಣಯಿಸಬಲ್ಲದು.

ವರ್ಧಾ ೧೫—೬—೪೮. —ಕಿ. ಘ. ಮ.]

ಸರ್ ಮಿರ್ಜಾ ಇಸ್ಮಾಯಿಲರು ಫ್ರಾನ್ಸದಲ್ಲಿ ಹಿಂದೀ ರಾಯಭಾರಿಗಳಾಗಿ ನೇಮಕ ಹೊಂದಿರುವರೆಂದು ತಿಳಿದು ಬರುತ್ತದೆ. ಯುಕ್ತರಾಷ್ಟ್ರ ಸಭೆಯ ಸಾಮಾನ್ಯ ಅಧಿವೇಶನವು ಪ್ಯಾರಿಸ್ಸಲ್ಲಿ ಕೂಡಲಿದ್ದು ಅಷ್ಟರೊಳಗಾಗಿಯೇ ಸರ್ ಮಿರ್ಜಾ ಇಸ್ಮಾಯಿಲರು ಅಧಿಕಾರ ಸ್ವೀಕರಿಸಲಿರುವರೆಂದು ಹೇಳಲಾಗುತ್ತಿದೆ.

ಹಳಕೇರಿ ಗ್ರಾಮ ರಕ್ಷಕ ದಲ


ಶ್ರೀ. ಆಯ್. ಜಿ. ಶ್ರೀ ಕೆ. ಎಸ್. ಪಾಟೀಲ ಹಾಗೂ ಶ್ರೀ ನಿರಾಕರರು ಹೋಟಾಗೆ ೧೪—೬—೪೮



ಕೋಟೆ ಉಮಚಗಿ ಹಾಗೂ ಸುತ್ತಲಿನ ಹಳ್ಳಿಗಳ ಗ್ರಾಮ ರಕ್ಷಾ ದಲ



[illegible] ಶ್ರೀ ಪಾಟೀಲರೂ ಶ್ರೀ [illegible] ೧೪—೬—೪೮ ರ [illegible]





ರೂಪರಂಗ

ಕಲೆ ಮತ್ತು ನೀತಿ

ತಜ್ಞರು ಮತ್ತು ತಳಗಜ್ಞರೊಡನೆ [illegible] ಪರಲೋಕಕ್ಕೆ ಕೂಡಲೆ, ಹೇಗೆಸುಬೇಕೆಂಬುವರೋ? ಮತ್ತು ಕಷ್ಟವನ್ನು [illegible] ತರಗನ [illegible] ನನ್ನ [illegible] ಬರೋ? ಎಂಬ ಪ್ರಶ್ನೆಯನ್ನು ಮೊದಲು ಹಾಕಬೇಕು. ಆಗ ಅವರ ವಾದದ ಬಣ್ಣ ಬಯಲಾಗುತ್ತದೆ. ಕೊಂಬೆಯಿಂದ ಕೊಂಬೆಗೆ ಹಾರಿ ತಪ್ಪಿಸಿಕೊಳ್ಳಲು ಅವರಿಗೆ ಅವಕಾಶ ಸಿಗದಾಗುತ್ತದೆ. ಅದೇ ಪ್ರಕಾರ 'ಸಾಂಸ್ಕೃತಿಕ ಕಟ್ಟುಗಳಿಗೆ ಬೆಲೆ ಕೊಡುವ ಸಾಮಾಜಿಕರೋ ಇಲ್ಲವೇ ನೀವು ಕಾಡಿಗೆ ಹೋಗಿ ಕುಳಿತು ಸ್ವೈರವಾಗಿ ಅನೀತಿ ನೀತಿಗಳ ಭೇದವನ್ನು ಮೀರಿ ನಿಲ್ಲಬಯಸುತ್ತವರೋ?' ಎಂದು ಕಲಾಶಾಸ್ತ್ರಜ್ಞನಿಗೆ ಮೊದಲು ಪ್ರಶ್ನೆ ಹಾಕಿ ಉತ್ತರವನ್ನು ತೆಗೆದುಕೊಳ್ಳಬೇಕು. ಈ ಎಲ್ಲರೂ ವಾದದ ಕಾಲದಲ್ಲಿ ಜೀವನಕ್ಕೆ ಉಳಿದವೆಲ್ಲ ಸಾಧನಗಳು ಎಂಬ ಮಾತನ್ನು ಮರೆತು ಜೀವನಕ್ಕೆ, ಸಮಾಜಜೀವನಕ್ಕೆ, ಅಹಿತವಾಗುವ ಅಂಶಗಳನ್ನು ಸಕ್ಕರೆಯ ಸಾಧಿಸಲು ಸೊಂಟ ಕಟ್ಟಿ ನಿಲ್ಲುತ್ತಾರೆ. ಈ ನಿರಂಕುಶರು ತಮ್ಮ ಉಟ್ಟುಂಬದ ಮೇಲೆಯೇ ತಮ್ಮ ವಾದ ವಜ್ರಾಘಾತ ಮಾಡಿದ ಹೊರತು ನಿಜಸ್ಥಿತಿಯನ್ನು ಅರಿತುಕೊಳ್ಳಲು ತಕ್ಕವಾಗುವದಿಲ್ಲ.

ಈ ದೃಷ್ಟಿಯಿಂದ ವಿಚಾರಿಸಿದರೆ ನಮ್ಮಲ್ಲಿಯ ಹಿಂದೀ ಸಿನೆಮಾಗಳಲ್ಲಿ—ಅದರಲ್ಲೂ ಹೆಸರಾದ ಬಾಂಬೇ ಟಾಕೀಸ್, ನ್ಯೂಥಿಯೇಟರ್ಸ್ ಮುಂತಾದವುಗಳಲ್ಲಿ—ಹಿಂದೀಸಂಸ್ಕೃತಿಗೆ ಭಂಗ ಬರುವಂತೆ ಶೃಂಗಾರಾದಿ ರಸಗಳನ್ನು ಅಭಿನಯ ಮಾತುಕತೆಗಳಲ್ಲಿ ಪ್ರದರ್ಶಿಸುತ್ತಿರುವುದು ಶ್ಲಾಘ್ಯ. ಉಕ್ತ ಕಂಪನಿಗಳು ಉಳಿದವಕ್ಕೆ ಮಾದರಿಯಾಗಿವೆ. ಹಾಗಲ್ಲದೆ ಪಾಶ್ಚಾತ್ಯ ಚಿತ್ರಗಳು ನಮ್ಮಲ್ಲಿಯ ಅಶಕ್ತಮತಿಗಳನ್ನು [illegible] ಅಧಃಪತನಕ್ಕೆ ನೂಕಿ ಕಡಿಸದಿರವು. ಆದುದರಿಂದ ಪಾಶ್ಚಾತ್ಯ ಚಿತ್ರಗಳನ್ನು ಚೆನ್ನಾಗಿ ಪರಿಶೀಲಿಸಿ ಶೃಂಗಾರದಲ್ಲಿ ಹಿಂದೀಜನಾಂಗಕ್ಕೆ- ಅಸಹ್ಯವೆಂದು ತೋರಬಹುದಾದ ಅಂಶಗಳನ್ನು ತೆಗೆದುಹಾಕಿ ಪ್ರದರ್ಶಿಸುವದು ನ್ಯಾಯವಾದುದು. ಈ ಬಗ್ಗೆ ಸರಕಾರೀ ಪರೀಕ್ಷಕರು ಗಮನಿಸಬೇಕು. ಸಿನೆಮಾಕ್ಕೆ ಅರಿತ, ಅರಿಯದ, ಚಿಕ್ಕವರು ದೊಡ್ಡವರು ಎಲ್ಲರೂ ಹೋಗುತ್ತಾರೆ. ಅವರಲ್ಲಿರುವ ದೃಢಪ್ರಕೃತಿಗಳೂ ನೀಚಪ್ರಕೃತಿಗಳೂ ಆಥವಾ ಅಲ್ಪಮತಿಗಳೂ ಅನಿರಬೇಕೆಂದರೆ ಹೇಗೆ ಸಾಧ್ಯ? ಇದೇ ದೃಷ್ಟಿಯಿಂದ ಒಮ್ಮೆ ಗರ್ಭಬೀಳಿದು ಮಗು ಉಪದುಸುವ ವರೆಗಿನ ಒಳ ಅಂಶಗಳನ್ನು ತೋರಿಸುವ ಚಿತ್ರಕ್ಕೆ ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಹೋಗಕೂಡದೆಂದು ಸರಕಾರ ಮೈಸೂರಲ್ಲಿ ವಿಧಿಸಿತ್ತು. ಯಾವ ಕಾರ್ಯವೇ ಆಗಲಿ ಶೀಲಭ್ರಂಶಕ್ಕೆ ಕಾರಣವಾಗಿದ್ದರೆ ಅದು ನಿಷಿದ್ಧವೆಂದು ವಿದ್ಯಾವಂತ ಸ್ತ್ರೀ-ಪುರುಷರು ತಿಳಿದರೆ ಮಾತ್ರ ನಮ್ಮ ಕಲೆಗಳು ಭಾರತೀಯ ಸಂಸ್ಕೃತಿಯನ್ನು ಗೌರವಿಸಿದಂತಾಗುವದು. ಇಲ್ಲದಿದ್ದರೆ ಗೊತ್ತೇ ಇದೆ!

— ಸಮಾಜಶಾಸ್ತ್ರಜ್ಞ

ನಿರ್ಮಾಪಕರ ಸಭೆ

ಭಾರತೀಯ ಸಿನೇಮಾ [illegible] ನೆಯ ವಾರ್ಷಿಕಾಧಿವೇಶನ [illegible] ಯಲ್ಲಿ ನೆರೆತು. ಸಿನೆಮಾ [illegible] [illegible] ಧಿಕಕೆಲಸ ಮಾಡಬೇಕಾ [illegible] ಕ್ಕೆ ರಾಗಲಿರುವ ಅಧ್ಯಕ್ಷರಾದ [illegible] ದೇಶಾಭಿಮಾನಿಯು [illegible] [illegible] ಉದ್ಯಮಕ್ಕೆ ಸ್ವತಂತ್ರ ಹಿಂದ [illegible] ರಾಷ್ಟ್ರೀಯ ಸರಕಾರವು ನೆರವೀಯಲು ಹಿಂಜರಿಯದೆಂದು [illegible]

ಸಾರ್ವಜನಿಕ ವರದಿ [illegible] ಲೇಖಕರು ಇತ್ಯಾದಿಗಳನ್ನು ಓದಿ ಹೇಳಿದ ಬಳಿಕ ಹೊಸ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಚುನಾವಣೆ ನಡೆಯಿತು. ಅವರಲ್ಲಿ ಶ್ರೀ ಬಿ. ಜೆ. ಪಟೇಲರನ್ನು [illegible] ಉಪಾಧ್ಯಕ್ಷರನ್ನಾಗಿಯೂ ಆರಿಸಲಾಯಿತು.

ತಾರೆಯ ಅಸ್ತ್ರ

ಲಾಸ್ ಏಂಜಲೀಸಿನಿಂದ ಒಂದು ಸುದ್ದಿ ಬಂದಿದೆ. ನ್ಯಾಯದ ಗಂಡನ ಮೇಲೆ ಸೋಡಚೀಟಿ ಅರ್ಜಿ ಹಾಕಿದ ಕರೋಲಾ ಲ್ಯಾಂಡಿಸ್ ಎಂಬ ೨೮ ವರ್ಷ ವಯಸ್ಸಿನ ಸಿನೆಮಾ ತಾರೆ ಬಚ್ಚಲುಮನೆಯಲ್ಲಿ ತನ್ನ ಆಭರಣದ ಪೆಟ್ಟಿಗೆಯ ಮೇಲೆ ತಲೆಯಿಟ್ಟುಕೊಂಡು, ದೇವರ ಪ್ರಾರ್ಥನೆಯನ್ನು ಬಂಗಾರದ ಜರಿಯಲ್ಲಿ ಬರೆದ ಚಿಟ್ಟಿಯ ಹರಕನ್ನು ಎಡಗೈಯಲ್ಲಿ ಹಿಡಿದು ದೀರ್ಘ ನಿದ್ರೆ ಮಾಡಿದ್ದಳು. ಹೇಗೆ? ಇಪರ್ಸನಾ (ನಿದ್ರೆಯ) ಗುಳಿಗೆಗಳನ್ನು ತಿಂದು!



ಪ್ರತಿಮಾ ದಾಸಗುಪ್ತ

ರೂಪರಂಗದ ಬ್ಲಾಕ್ ೬೬೩

ತನ್ನ ೪ನೆಯ ಗಂಡ ಹೊರೆಸ್ ಶ್ಮಿಲ್ಡ್ ಲ್ಯಾಪ್ ಎಂಬವನು ತನ್ನನ್ನು ಕ್ರೂರವಾಗಿ ನಡೆಸಿಕೊಂಡನೆಂದೂ ತನ್ನ ತಾಯಿ ಬಹಳ ಒಳ್ಳೆಯವಳೆಂದೂ ಅನಿವಾರ್ಯವಾಗಿ ತಾನು [illegible] ಬರೆದಿಟ್ಟಿದ್ದಳು. ಹೇಳಿ ಕೇಳಿ ನಟಿ; ೪ ಗಂಡರನ್ನಾಳಿದಳು; ಗಂಡನ ಇಷ್ಟಕ್ಕೆ ಒಮ್ಮೆಯಾದರೂ ನಮ್ರತೆಯಿಂದ ನಡೆದುಕೊಂಡಾಳೇ? ಶಕ್ಯವೇ ಇಲ್ಲ. ಮಾತುಕತೆ, ನಡೆ ನುಡಿ, ಕೊಡುಕೊಳ್ಳು, ಈ ಎಲ್ಲದರಲ್ಲೂ ಪರಸ್ಪರ ತ್ಯಾಗವಿದ್ದಲ್ಲಿ ಮಾತ್ರ ಪ್ರೇಮ ಆಳವಾಗಿ ಬೇರೂರೀತು. ಇಲ್ಲದಿದ್ದರೆ ಸ್ವಾಚ್ಛಂದ್ಯಕ್ಕೆ ಇದೇಗತಿ.-ಎಂಬ ಪಾಠವನ್ನು ಹಿಂದೀ ಕಲಾಪಕ್ಷೀಯರು ತಿಳಿದುಕೊಳ್ಳಬೇಕು. ಸ್ವಾರ್ಥಿಗಳಿಗೆ ಎಲ್ಲರೂ ಕ್ರೂರರಾಗಿ ಕಾಣುತ್ತಾರೆ, ಎಲ್ಲ ಕಾಲದಲ್ಲೂ-ಎಂಬುದು ಸುಳ್ಳೇ?

ಮುಂಬಯಿಯ ಇಂಪೀರಿಯಲ್ ರಂಗದಲ್ಲಿ 'ಬಿಛಿಡೇವಾಲಾ' ಎಂಬ ಚಿತ್ರವನ್ನು ಪ್ರದರ್ಶಿಸಲಾಗುತ್ತಿದೆ. ಅದರಲ್ಲಿ ಖುರ್ಶೀದ್, ಅಂಜುಂ, ಮೀನಾ ಕುಮಾರಿ,ಮುಂತಾದವರು ಪಾತ್ರವಹಿಸಿದ್ದಾರೆ. ಶ್ರೀ ಮಣಿಭಾಯಿ ವ್ಯಾಸರು ದಿಗ್ದರ್ಶಕರು. ಇದು ಅಜಿತ್ ಕಂಪನಿಯ ತಯಾರಿಕೆ.

ಸುಪರ್ ರಂಗದಲ್ಲಿ 'ಮುಲಾಕತ್' ಎಂಬ ಚಿತ್ರ ನಡೆಯುತ್ತಿದೆ. ಇದು ತಾಜ್ ಮಹಲ್ [illegible] ತಯಾರಿಕೆ. [illegible]

ಕರ್ನಾಟಕದಲ್ಲಿ ಬಟ್ಟೆ ಗಿರಣಿ

ಸರಕಾರದ ಸಮ್ಮತಿ

[illegible]

ಲಾಭದಲ್ಲಿ ಕೂಲಿಕಾರರಿಗೂ ಪಾಲು

ಭಾರತ ಸರಕಾರದ ವಿಚಾರ

ಕೂಲಿಕಾರರ [illegible] ಒಡೆಯರ [illegible] ಕಾರ ಸಂಬಂಧದ ವಿಷಯದಲ್ಲಿ ನಮ್ಮ ರಾಷ್ಟ್ರೀಯ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಹಲವೊಂದು ಹೊಸ ಯೋಜನೆಯನ್ನು ಪ್ರಯೋಗಿಸಲಾಗಿದೆ; ಮತ್ತು ಈಗಲೂ ಹೊಸ ಹೊಸ ಯೋಜನೆಗಳು ವಿಚಾರದಲ್ಲಿವೆ. ಮೂರು ವರ್ಷಗಳ ವರೆಗೆ ಔದ್ಯೋಗಿಕ ಸಂಧಿ, ಕೂಲಿಕಾರ ವಿಮಾಯೋಜನೆ ಮೊದಲಾದವು ಈಗಾಗಲೆ ಆಚರಣೆಗೆ ಬಂದ ಸುಧಾರಣೆಗಳಲ್ಲಿ ಕೆಲವು. ಒಡೆಯ.-ಕೂಲಿಕಾರರಿಬ್ಬರ ಜತೆವರ್ಗಣಿಗಳ ಮೂಲಕ ಒತ್ತಾಯದ ಕೂಲಿಕಾರ ಪ್ರೊವಿಡೆಂಟ ಫಂಡಿನ ಯೋಜನೆಯೂ ಪರೀಕ್ಷಾರ್ಥವಾಗಿ ಕಲ್ಲಿದ್ದಲಿಯ ಕಂಪನಿಗಳಲ್ಲಿ ಪ್ರಯೋಗಿಸಲ್ಪಡುತ್ತಿವೆ. ಈ ಎಲ್ಲ ವಿಷಯಗಳಲ್ಲಿಯೂ ಒಡೆಯರು ಅಷ್ಟಿಷ್ಟು ಗೊಣಗಿ ಒಪ್ಪಿಗೆಯನ್ನು ಕೊಟ್ಟರು. ಆದರೆ ಈಗ ಸರಕಾರದ ವಿಚಾರದಲ್ಲಿರುವ ಲಾಭದಲ್ಲಿ ಕೂಲಿಕಾರರಿಗೆ ಪಾಲು ಕೊಡುವ ವಿಚಾರದಷ್ಟು ವಿವಾದಾಸ್ಪದವಾದ ಸೂಚನೆ ಇನ್ನಾವುದೂ ಇರಲಿಕ್ಕಿಲ್ಲ.

×

ಭಾರತ ಸರಕಾರದ ಒಂದು ತಜ್ಞ ಸಮಿತಿಯ ಮುಂದೆ ಲಾಭದಲ್ಲಿ ಪಾಲು ಕೊಡುವ ಸೂಚನೆ ಇಡಲ್ಪಟ್ಟಿದೆ. ಒಡೆಯ ಕೂಲಿಕಾರ ಇವರಿಬ್ಬರ ಪರವಾಗಿಯೂ ಬರುವ ವಾದಗಳನ್ನು ಆ ಸಮಿತಿ ಈಗ ಪರಿಶೀಲಿಸುತ್ತದೆ. ಒಡೆಯನು ಹಾಕಿದ ಬಂಡವಲಕ್ಕೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಲಾಭವನ್ನು ಬಿಟ್ಟು ಉಳಿದ ಲಾಭವನ್ನು ಕೂಲಿಕಾರರಲ್ಲಿ ಹಂಚಬೇಕೆಂಬದು ಈಗಿರುವ ಸೂಚನೆಯ ಸಾರ. ಆದರೆ ಈ ನಿರ್ದಿಷ್ಟ ಲಾಭಾಂಶವನ್ನು ಗೊತ್ತುಪಡಿಸುವಾಗ ಆಯಾ ಉದ್ದಿಮೆಯ ಸ್ಥಿತಿಗತಿಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಅಭಿಪ್ರಾಯಪಡಲಾಗಿದೆ.

ವಿರೋಧ

ಈ ಸೂಚನೆಗೆ ಬಂಡವಲಗಾರರು ತೀಕ್ಷ್ಣ ವಿರೋಧವನ್ನು ವ್ಯಕ್ತಗೊಳಿಸಿದ್ದಾರೆ. ಲಾಭದಲ್ಲಿ ಕೂಲಿಕಾರರಿಗೆ ಪಾಲು ಕೊಡಲಾಗಲವು [illegible] ಎಂದು ಅವರು ವಾದಿಸುತ್ತಾರೆ. ಮೊದಲನೆಯದಾಗಿ, [illegible] ಲಾಭಾಂಶವನ್ನು ನಿರ್ಧರಿಸುವದು ಸುಲಭವಲ್ಲ. [illegible] ಬಂಡವಲಿಗಿಂತ [illegible] ಹಣ ಬೇಕು. ಈ ಕಲ್ಪನೆ [illegible] ಉದ್ದಿಮೆಗೆ ಒಂದು ನಿರ್ದಿಷ್ಟ ಪ್ರಮಾಣದ ಲಾಭ ಕೊಡಬೇಕೆಂದು ಗೊತ್ತಾದರೆ ಟಾಟಾ ಪಾಲುಗಾರರಿಗೆ ಅನ್ಯಾಯವಾಗುತ್ತದೆಯೆಂದು ಬಂಡವಲಗಾರರ ಪರವಾಗಿ ಶ್ರೀ ಘನಶ್ಯಾಮದಾಸ ಬಿರ್ಲಾರು ಹೇಳುತ್ತಾರೆ. ಕೂಲಿಕಾರರಿಗೆ ಹೆಚ್ಚು ಕೂಲಿ ಕೊಡಬಹುದೇ ಹೊರತು ಲಾಭದಲ್ಲಿ ಪಾಲು ಕೊಡುವದು ಗೊಂದಲಕ್ಕೆ ಕಾರಣವಾದೀತೆಂದು ಅವರ ಹೇಳಿಕೆ. ಈಗಾಗಲೇ ನಮ್ಮ ಉದ್ದಿಮೆಗಳಲ್ಲಿ ಗೊಂದಲ ಹೆಚ್ಚಾಗಿ ಉತ್ಪಾದನೆಗೆ ಧಕ್ಕೆ ಬಡಿದಿದೆ. ಇದರಿಂದ ಹಣವುಳ್ಳವರ ಭಯ ಇನ್ನಷ್ಟು ಹೆಚ್ಚಿ ಅವರು ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸಲಿಕ್ಕೇ ಹೆದರಬಹುದೆಂದು ಕೆಲ ಅರ್ಥಶಾಸ್ತ್ರಜ್ಞರು ವಾದಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಒಡೆಯ ಕೂಲಿಕಾರರ ನಡುವೆ ಶಾಂತಿ ಸಮಾಧಾನ ಸ್ಥಾಪಿಸಲ್ಪಡಬೇಕೆಂದೂ ಕೂಲಿಕಾರರಿಗೆ ತಾವು ಕೆಲಸ ಮಾಡುತ್ತಿರುವ ಉದ್ದಿಮೆಯಲ್ಲಿ ತಮಗೂ ಲಾಭ ದೊರೆಯುವದೆಂಬ ಅರಿವಿನಿಂದ ಉತ್ಪಾದನೆ ಹೆಚ್ಚಿಸುವ ಆಸಕ್ತಿ ಬೆಳೆಯಬೇಕೆಂದೂ ಸರಕಾರ ಈ ಸೂಚನೆಯನ್ನು ಪರಿಶೀಲಿಸುತ್ತಿದ್ದರೂ ಇತರ ದೇಶಗಳಲ್ಲಿ [illegible] ಯೋಜನೆಗಳು ಅಷ್ಟೇನೂ ಯಶಸ್ವಿಯಾಗಿಲ್ಲವೆಂದು ವಿರೋಧಿಗಳು ತೋರಿಸುತ್ತಾರೆ.

ಇತರ ದೇಶಗಳಲ್ಲಿ

ಲಾಭದಲ್ಲಿ ಪಾಲಿನ ಕಲ್ಪನೆ ಇಂದು ನಿನ್ನೆಯದಲ್ಲ. ಅನೇಕ ದೇಶಗಳಲ್ಲಿ ಇದರ ಪ್ರಯೋಗ ನಡೆದಿದೆ. ಫ್ರಾನ್ಸು ಇದನ್ನು [illegible] ಮೊದಲು ಪ್ರಾರಂಭಿಸಿದ ದೇಶಗಳ [illegible]. ಇಂಗ್ಲಂಡಲ್ಲಿ ಇದು ಪ್ರಾರಂಭವಾಗಿ [illegible] ಮೊದಲು ಯಶಸ್ವಿಯಾಗುವಂತೆ [illegible] [illegible] ಬೋನಸ್ ಪದ್ಧತಿ [illegible] ಮಾಡಿ [illegible] ಇಂಗ್ಲಂಡಿನ [illegible] ಪ್ರಯೋಗಿಸಲ್ಪಟ್ಟ [illegible] ಕೂಲಿಕಾರ [illegible] ಅದರ [illegible] ನಡೆಯುತ್ತಿವೆ. [illegible] ಕೂಲಿಕಾರ [illegible] ಯೋಜನೆಗಳು [illegible] ಅಸ್ತಿತ್ವ [illegible] ಯಶಸ್ವಿ [illegible] ಕಾರ್ಯ [illegible] ಲಾಭದಲ್ಲಿ ಪಾಲು ಸಂಪಾದ [illegible] ಬೆಳೆಯಿತು.

ಕೂಲಿಕಾರರ ನಿರೋಧ

ಲಾಭದಲ್ಲಿ ಪಾಲು ಹಂಚುವ [illegible] ಬಂಡವಲಗಾರರಿಂದ ಮಾತ್ರವೇ [illegible] ಬಂದಿಲ್ಲ. ಕೂಲಿಕಾರ ಮುಂದಾಳುಗಳಿಂದ ಸಾಮ್ಯವಾದಿಗಳಿಂದಲೂ ಅದಕ್ಕೆ [illegible] ವಿರೋಧವುಂಟಾಗಿದೆ. ಬ್ರಿಟಿಶ [illegible] ಕಾಂಗ್ರೆಸ್ಸು ೧೯೩೧ರಲ್ಲಿ 'ಲಾಭ ಹಂಚಿಕೆ [illegible] 'ಕೂಲಿಕಾರ ಸಂಘಗಳ ಒಗ್ಗಟ್ಟನ್ನು [illegible] ಯುವ ಹವಣಿಕೆ' ಯೆಂದು ಅದನ್ನು [illegible] ಈ ಯೋಜನೆಯಿಂದ ಕೂಲಿಕಾರ [illegible] ರುವ ಕಾರಖಾನೆಯ ಮೇಲೆಯೇ [illegible] ಬೆಳೆದು ಕೂಲಿಕಾರ ಸಂಘದ ಒಗ್ಗಟ್ಟು [illegible] ವುಂಟಾಗುವದೆಂದು ಹೇಳಲಾಗುತ್ತಿದೆ. [illegible] ಲಾಭ ಹಂಚುವಿಕೆಯ ಯೋಜನೆ [illegible] ನೋಟಕ್ಕೆ ಆಕರ್ಷಕವೆಂದು ಕಂಡರೂ [illegible] ವಾದ ರೂಪಾಯಿ-ಆಣೆ-ಪೈ ಲೆಕ್ಕದಲ್ಲಿ [illegible] ರಿಂದ ಕೂಲಿಕಾರರಿಗೆ ದೊರೆಯುವದು [illegible] ಅಲ್ಪ. ಬಂಡವಲಿನ ಪಾಲುಗಾರರಿಗೆ [illegible] ಲಾಭಾಂಶವನ್ನು ಹಂಚಿದ ಬಳಿಕ ಉಳಿದ ಹಣದಲ್ಲಿ ಒಂದಂಶ ಮಾತ್ರ ಕೂಲಿಕಾರರಿಗೆ ದೊರಕುವದು. ಆದುದರಿಂದ ಸಂಘಟಿತ ಹೋರಾಟದ ಸಾಮೂಹಿಕ ಕ್ರಿಯೆಯ [illegible] ಗಿಂದ ಕೂಲಿಯ ದರವನ್ನೇ ಹೆಚ್ಚಿಸಿಕೊಳ್ಳುವದು [illegible] ಅಭಿಪ್ರಾಯವೆಂದು ಅವರು [illegible] ಸೋಜಿಗವಲ್ಲ.

ಆದರೆ ಗಾಂಧೀವಾದಿ ಮಜದೂರ ಸಂಘ [illegible] ಆದರ್ಶವನ್ನಿಟ್ಟುಕೊಂಡು ಈ [illegible] ಕೂಲಿಕಾರರಲ್ಲಿ ವಿಶೇಷ ವರ್ಗವನ್ನು [illegible] ರುವದರಿಂದ ಅವರು ಈ ಪ್ರಯೋಗಕ್ಕೆ [illegible] ಲಕೊಡಬಹುದು. ಒಡೆಯನು ಕೂಲಿಕಾರರ 'ಧರ್ಮದರ್ಶಿ' ಯೆಂಬ ಗಾಂಧೀಜಿಯ [illegible] ಸಿದ್ಧಾಂತವನ್ನು ಆಚರಣೆಗೆ ತರಲು ಇಲ್ಲಿ [illegible] ಕಾಶವುಂಟು. ಆದರೆ ಕೂಲಿಕಾರನಿಗೆ ಸರಿಯಾದ ಶಿಕ್ಷಣ ದೊರೆತರೆ ಮಾತ್ರ ಈ ಪ್ರಯೋಗ ಯಶಸ್ವಿಯಾಗಬಲ್ಲದು. ಧನಿಕ ಆಳಿ ಆದರೆ [illegible] ಗಿ ಅವನು ಇಡಿ ಉದ್ದಿಮೆಯನ್ನು ತನ್ನದೆಂ [illegible] ಭಾವಿಸಿ ಹೆಚ್ಚು ದುಡಿಯಬೇಕು. ಆದರೆ ಅವನ ಕೈಯಲ್ಲಿರುವ ಸಂಪನ ಆಯುಧಕ್ಕೆ [illegible] ಯೋಜನೆಯಿಂದ ಒಂದು ಬಗೆಯ [illegible] ದೌರ್ಬಲ್ಯ ಬಾರದಿರದು.

ಕರ್ನಾಟಕ

ಧಾರವಾಡ

ನವಲಗುಂದದ ಅಬಕಾರಿ ಸಬ್ ಇನಸ್ಪೆಕ್ಟರರು ಮತ್ತು ಸಾಬ ಎಂಬ ಶಾಬ ಇವರ ಜುಟ್ಟಾದ ಅಂಗಡಿ ಮುರಿದು ಮಾಡಿ ಭಟ್ಟಿ ಸೆರೆ ಪತ್ತೆ ಹಚ್ಚಿ ಮತ್ತು ಸಾಬನನ್ನು ಅವರ ಸಾವಕಾರ ರಾಜೇಸಾಹೇಬ ಮತ್ತು ಸಿದ್ದಪ್ಪ ವಿಠೋಬಾ ಕಾಳುಂಕೆ ಹೀಗೆ ಮೂವರನ್ನು ಬಂಧಿಸಿದರು.

ತಾ ೧೪ ಕ್ಕೆ ಗದುಗಿನಲ್ಲಿ ೯ ಜನರನ್ನು ಹೈದರಾಬಾದ ಗುಪ್ತಚಾರರೆಂದು ಬಂಧಿಸಲಾಯಿತು. ಅವರಲ್ಲಿ ಒಬ್ಬ ಹೆಣ್ಣುಮಗಳಿರುವಳು. ಇವರು ಇಲ್ಲಿಂದ ಸುದ್ದಿಗಳನ್ನು ಸಂಗ್ರಹಿಸಿ ರಜಾಕಾರರಿಗೆ ತಿಳಿಸುತ್ತಿದ್ದರೆಂದು ತಿಳಿಯುತ್ತದೆ. ಹರ್ಲಾಪೂರ ಸ್ಟೇಶನ ಮೇಲೆ ಇಬ್ಬರು ಮುಸಲ್ಮಾನರನ್ನು ಹಿಡಿದು ತಪಾಸ ಮಾಡಲಾಗಿ ಒಬ್ಬನ ಹತ್ತರ ಕಾಡತೂಸುಗಳು ಚಾಕು ಮತ್ತು ಹೊಸ ಬಟ್ಟೆ ದೊರೆತವು.

ಹುಬ್ಬಳ್ಳಿ ನಗರ ಮತ್ತು ಸುತ್ತಲಿನ ಐದು ಹೈಸ್ಕೂಲುಗಳಲ್ಲಿ ಇನ್ನು ಎರಡು ಮೂರು ತಿಂಗಳುಗಳಲ್ಲಿ ಸಿಟಿ ಬಸ್ಸು ಪ್ರಾರಂಭವಾಗುವದೆಂದು ತಿಳಿಯುತ್ತದೆ. ಇದಕ್ಕಾಗಿ ಎರಡು ಕಂಪನಿಗಳಿಗೆ ಅಪ್ಪಣೆ ಕೊಡಲಾಗಿದೆ.

ಕುಂದಗೋಳದ ಸುಪ್ರಸಿದ್ಧ ದೇಸಾಯಿ ಮನೆತನದ ಜಮೀನದಾರರಾದ ಶ್ರೀ ತಿರುಮಲರಾವ ದೇಸಾಯಿ ಇವರು ಅದೇ ತಿಂಗಳ ೧೫ ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

೧೯೪೪ ರಿಂದ ಹುಬ್ಬಳ್ಳಿಯಲ್ಲಿ ಪ್ರಯೋಗಾವಸ್ಥೆಯಲ್ಲಿದ್ದ ಸೀನಿಯರ ಡಿವಿಜನ ಸಿವಿಲ್ ಜಜ್ಜ ಕೋರ್ಟು ಕಾಯಂ ಮಾಡಲ್ಪಟ್ಟಿತು. ಕರ್ನಾಟಕದಲ್ಲಿಯ ಸಾರ್ವಜನಿಕ ಸಂಸ್ಥೆಗಳಿಂದ ಬಂದ ಮನವಿಗಳನ್ನು ಮನ್ನಿಸಿ ಈ ಕೋರ್ಟು ಕಾಯಂ ಮಾಡಲ್ಪಟ್ಟಿದೆಂದು ಹೇಳಲಾಗಿದೆ.

ಶ್ರೀ ರಂಗನಾಥ ದಿವಾಕರರು, ದಿ ಆಯ ಜಿ ಪಿಲ್ಕ್ಬೋರಿಯಾ, ದಿ ಎಸ್ ಪಿ ಥೋರಾತ, ಗ್ರಾಮರಕ್ಷಕ ದಲದ ಸಂಘದ ಶ್ರೀ ಕೆ ಎಸ್ ಪಾಟೀಲ ಮೊದಲಾದವರು ಧಾರವಾಡ ಜಿಲ್ಲೆಯ ಕೋಟುಮಚಗಿ, ಹಿರೇಗುಂದಿ, ಗಜೇಂದ್ರಗಡ ಮೊದಲಾದ ಹೈದ್ರಾಬಾದ ಗಡಿ ಭಾಗದಲ್ಲಿ ಕಳೆದ ರವಿವಾರ ಸಂಚರಿಸಿಬಂದರು. ಅಲ್ಲಿರುವ ಗ್ರಾಮರಕ್ಷಕ ದಳವನ್ನುದ್ದೇಶಿಸಿ ಶ್ರೀ ದಿವಾಕರರು, ಕೆ ಎಸ್ ಪಾಟೀಲರು ಭಾಷಣ ಮಾಡಿ ಕರ್ತವ್ಯ ತಿಳಿಸಿದರು. ಇಲ್ಲಿನ ಜನರು ಆತ್ಮರಕ್ಷಣೆಗಾಗಿ ಒಳ್ಳೆ ತರಬೇತಿಹೊಂದಿರುವರು.

ಬೆಳಗಾವಿ

ಭಾಷಾನ್ವಯ ಪ್ರಾಂತರಚನೆಯು ತತ್ವದ ಪ್ರಕಾರ ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ಮೇರೆಗಳು ನಿರ್ಧರಿಸಲ್ಪಡುವವರೆಗೆ ಬೆಳಗಾವಿ ಉತ್ತರ ಕನ್ನಡ ಜಿಲ್ಲೆಗಳಲ್ಲಿಯ ಮರಾಠಿ ಮಾತಾಡುವ ಪ್ರದೇಶವನ್ನು ಈಗ ಮುಂಬಯಿ ಪ್ರಾಂತದಲ್ಲಿ ಲೀನವಾಗಿರುವ ದಕ್ಷಿಣ ಸಂಸ್ಥಾನಗಳಲ್ಲಿ ಸೇರಿಸಿ ಹೊಸದೊಂದು ಪ್ರಾಂತವನ್ನಾಗಲಿ ಪ್ರಾಂತಗಳನ್ನಾಗಲಿ ನಿರ್ಮಿಸಬೇಕೆಂದು ಬೆಳಗಾವಿ ಉತ್ತರ ಕನ್ನಡ ಜಿಲ್ಲೆಗಳ ಮರಾಠಿ ಪ್ರದೇಶಗಳ ಪ್ರತಿನಿಧಿಗಳು ಬೆಳಗಾವಿಯಲ್ಲಿ ಚಿಕ್ಕ ಸಭೆಸೇರಿ ಮುಂಬಯಿ ಸರಕಾರಕ್ಕೆ ಸೂಚಿಸಿದರು.

ಬೆಳಗಾವಿ ಜಿಲ್ಲೆಯ ಶಸ್ತ್ರಾಸ್ತ್ರ ಮಾರುವ ವ್ಯಾಪಾರಸ್ಥರು ಜಿಲ್ಲಾಧಿಕಾರಿಗಳ ಅಪ್ಪಣೆ ಪಡೆಯದೆ ಮದ್ದು ಗುಂಡುಗಳನ್ನು ಶಸ್ತ್ರಾಸ್ತ್ರಗಳನ್ನು ಮಾರಬಾರದೆಂಬದಾಗಿ ಇದ್ದ ಆಜ್ಞೆಯ ಅವಧಿಯನ್ನು ಜುಲೈ ೧೭ ರಿಂದ ಮತ್ತೆ ಎರಡು ತಿಂಗಳು ಬೆಳಸಲಾಗಿದೆ.

ಶ್ರೀ ಮುರಗೆಯ್ಯಾ ವೀರಯ್ಯಾ ಮಂಟಪಮಠಸ್ವಾಮಿ ಇವರು ಮಿರಜ ನಗರ ಸಭೆಗೆ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಸಾಂಗಲಿ ಜೈನ ಮಹಿಳಾಶ್ರಮದಲ್ಲಿ ಸಭೆಸೇರಿ ಶ್ರೀ ಕಳಂತ್ರಿಬಾಯಿಯವರು ಸ್ಥಳೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾಗಿ ಆರಿಸಿಬಂದು ಬಳ್ಳೆ ಅಭಿನಂದಿಸಲಾಯಿತು. ಆಗ ಶ್ರೀ ಮುಗಳಿಯವರು ಸಾಂಗಲಿಯ ಕನ್ನಡಿಗರ ಕರ್ತವ್ಯವನ್ನು ತಿಳಿಸಿಹೇಳಿದರು. ಕಳಂತ್ರಿಬಾಯಿಯವರು ಉತ್ತರ ಕೊಡುತ್ತ ಸಾಂಗಲಿಯಲ್ಲಿಯ ಕನ್ನಡ ಸ್ತ್ರೀಯರು ಕನ್ನಡ ಅಧ್ಯಾತ್ಮಿಕ ಗ್ರಂಥಗಳನ್ನು ಓದಬೇಕೆಂದು ಹೇಳಿದರು.

ಬಳ್ಳಾರಿ

ಉರದುವಕುಂದದ ಮಹಾತ್ಮಾಜಿಗಳ ಪ್ರತಿಟಿಕೆಯೊಂದನ್ನು ಮೊದಲು ಕರ್ನಾಟಕದಲ್ಲಿ ಕೂಡಲೆ ರೇಡಿಯೋ ಸ್ಟೇಶನದ ಅವಶ್ಯಕತೆಯಿದೆಯೆಂದು ಸಾರಿರುವರು. ಇದಕ್ಕಾಗಿ ಕನ್ನಡಿಗರು ಪ್ರಬಲ ಚಳವಳಿಯನ್ನು ನಡೆಸಬೇಕೆಂದು ಅಪೇಕ್ಷಿಸಿದರು. ಅವರೀಗ ಈ ಜಿಲ್ಲೆಯಲ್ಲಿ ನಿಧಿಸಂಗ್ರಹಕ್ಕಾಗಿ ಸಂಚಾರ ಕೈಕೊಂಡಿರುವರು.

ಬಳ್ಳಾರಿ ತಾರಾನಾಥ ಆಯುರ್ವೇದ ಕಾಲೇಜಿನ ಪ್ರಾರಂಭೋತ್ಸವ ೧೫ ನೇ ತಾರೀಕು ಜರುಗಿತು. ಪ್ರಾರಂಭಕ್ಕೆ ಶ್ರೀ ಸ್ವಾಮಿರಾಚಾರ್ಯರು ವಿದ್ಯಾರ್ಥಿಗಳನ್ನು ಸ್ವಾಗತಿಸಿ ವಿದ್ಯಾಪೀಠದ ಧ್ಯೇಯವನ್ನು ವಿವರಿಸಿದರು. ಅನಂತರ ಶ್ರೀ ಪಿ ವೇಣುಗೋಪಾಲಾಚಾರ್ಯರು ಮತ್ತು ಶ್ರೀ ಸ್ವಾಮಿಗಳು ಮಾತಾಡಿ ವಿದ್ಯಾಪೀಠಕ್ಕೆ ಯಶಸ್ಸು ಕೋರಿದರು.

ಕನ್ನಡ ಸಂಸ್ಥಾನ

ಮುಂಬಯಿ ಗವರ್ನರರಾದ ಶ್ರೀ ಮಹಾರಾಜ ಸಿಂಗರು ಅಗಷ್ಟ ೪ಕ್ಕೆ ಕೊಲ್ಹಾಪುರಕ್ಕೆ ಹೋಗಿ ಮೂರು ದಿನ ಅಲ್ಲಿ ಉಳಿಯುವರು.

ರಜಾಕಾರರೊಡನೆ ಪತ್ರವ್ಯವಹಾರ ನಡೆಸಿದನೆಂಬ ಆರೋಪದ ಮೇಲೆ ಶಿರಾಳಕೊಪ್ಪದಲ್ಲಿ ಒಬ್ಬ ಮುಸಲ್ಮಾನನನ್ನು ಬಂಧಿಸಲಾಗಿದೆ. ಅವನಲ್ಲಿ ಆಕ್ಷೇಪಾರ್ಹ ಕಾಗದಪತ್ರಗಳು ಸಿಕ್ಕಿದವಂತೆ.

ಶಿವಮೊಗ್ಗೆಯಲ್ಲಿ ಸಕ್ಕರೆ ಕಾರಖಾನೆಯನ್ನು ಪ್ರಾರಂಭಿಸುವ ಪ್ರಾಸ್ತಾವಿಕ ಕಾರ್ಯವನ್ನು ಕೂಡಲೆ ಕೈಕೊಳ್ಳಬೇಕೆಂದು ಭದ್ರಾವತಿಯಲ್ಲಿ ಕೂಡಿದ ಸಭೆಯಲ್ಲಿ ನಿರ್ಣಯಿಸಲಾಯಿತು. ರೆವೆನ್ಯೂ ಪ್ಲಾಂಟೇಶನ ಬಳಿಯಲ್ಲಿ ಸ್ಥಳವನ್ನು ಆರಿಸಲಾಗಿದೆ.

ಚಿಕ್ಕಮಗಳೂರಲ್ಲಿ ಇಂಟರಮೀಡಿಯೇಟ ಕಾಲೇಜಿನ ಪ್ರಾರಂಭೋತ್ಸವವನ್ನು ಮೈಸೂರ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೧೪ಕ್ಕೆ ಜರುಗಿಸಿದರು. ಮುಖ್ಯ ಮಂತ್ರಿಗಳು ಅಲ್ಲಿನ ವಿವಿಧ ಸಂಘ ಸಂಸ್ಥೆಗಳನ್ನು ಸಂದರ್ಶಿಸಿದರು.

ಶಿವಮೊಗ್ಗೆ ಸೆರೆಮನೆಯಲ್ಲಿ ಸ್ಥಾನಬದ್ಧತೆಯಲ್ಲಿರಿಸಲ್ಪಟ್ಟ ಶ್ರೀ ಮುಂದಾಸ, ಸತ್ಯ, ದೇವರಾಜ ಅರಸ ಮತ್ತು ಶ್ರೀನಿವಾಸನ್ ಈ ನಾಲ್ವರು ಕಮ್ಯುನಿಸ್ಟರು ೧೭ನೇ ತಾರೀಕು ರಾತ್ರಿ ಸೆರೆಮನೆಯ ಗೋಡೆಯನ್ನು ಒಡೆದು ಓಡಿಹೋಗಿರುವರೆಂದು ತಿಳಿಯುತ್ತದೆ. ಇವರೊಡನೆ ಇನ್ನೊಬ್ಬ ಕೈದಿಯೂ ಓಡಿಹೋಗಿರುವನು.

ಕೊಲ್ಹಾಪುರ ಸಂಸ್ಥಾನದಲ್ಲಿ ಕ್ಷಯರೋಗ ಮನ್ವಪಾನ ಪ್ರತಿಬಂಧಕ ಯೋಜನೆ ಮಾಡಲಾಗಿದ್ದು ಅದು ಶೀಘ್ರದಲ್ಲಿ ಜಾರಿಯಲ್ಲಿ ಬರಲಿದೆಯೆಂದು ಕೊಲ್ಹಾಪುರ ಸಂಸ್ಥಾನ ಪ್ರಕಟಿಸಿದೆ.

ಕೊಲ್ಹಾಪುರ ಸರಕಾರದವರು ಈ ವರೆಗೆ ಗಲಭೆ ಸಂತ್ರಸ್ತರಿಗೆ ೧೩,೭೫೦ ರೂಪಾಯಿ ಪರಿಹಾರ ಹಾಗು ೩೫,೦೦೦ ರೂಪಾಯಿ ಸಾಲ ಕೊಟ್ಟಿದ್ದಾರೆ.

ದಕ್ಷಿಣ ಕನ್ನಡ

ಕಳೆದ ಮೂರು ನಾಲ್ಕು ವರ್ಷಗಳಿಂದ ಮೃತಪ್ರಾಯವಾಗಿದ್ದ ಉಡುಪಿ ಕಬ್ಬಿನ ವ್ಯವಸಾಯಿಗಳ ಸಹಕಾರಿ ಸಂಘದ ಸದಸ್ಯರ ಸಭೆ ೧೦ ಕ್ಕೆ ಸೇರಿ ಅದನ್ನು ಊರ್ಜಿತದಲ್ಲಿಡಬೇಕೆಂದು ಗೊತ್ತಾಯಿತು. ಹೊಸ ಕಾರ್ಯಕಾರಿ ಮಂಡಳದ ಆಯ್ಕೆಯಾಯಿತು. ಬಾಲುಗಾರರಿಗೆ ೧೦೦ ಕ್ಕೆ ೬| ದಂತೆ ಲಾಭ ಹಂಚಬಹುದೆಂದು ನಿರ್ಧರಿಸಲಾಯಿತು. ಕೇಂದ್ರ ಸರಕಾರದಿಂದ ಈ ಪ್ರಾಂತಕ್ಕೆ ಕೊಟ್ಟ ೩೭೦೦೦ ರೂಪಾಯಿಗಳ ಸದುಪಯೋಗವನ್ನು ಈ ಭಾಗದ ಕಬ್ಬಿನ ವ್ಯವಸಾಯಿಗಳು ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳಲಾಯಿತು.

ಕಳೆದವಾರ ಒಂದು ದಿನ ರಾತ್ರಿ ೮ ಗಂಟೆಗೆ ಸಂತೆಯನ್ನು ತೀರಿಸಿಕೊಂಡು ಬಸಾಪೂರಕ್ಕೆ ಮರಳಿ ಬರುತಿದ್ದ ಶ್ರೀ ಇರಪಣ್ಣ ಚಟ್ಟ್ಯಾರ ಇವರನ್ನು ಕಳ್ಳರು ದಾರಿಯಲ್ಲಿ ಮುತ್ತಿ ೧೦೦೦ ರೂಪಾಯಿಗಳ ಸೀರೆ ಮತ್ತು ೨೦೦ ರೂ. ರೋಖ ಹಣ ದೋಚಿಕೊಂಡು ಹೋಗಿರುವರು. ಇತ್ತೀಚೆ ಈ ಬಗೆಯ ಕಳ್ಳತನ ಹೆಚ್ಚಿದೆ.

ಕಾರ್ಯನಿರತ ಸಂಪಾದಕರಿಗೆ ಎರಡು ತಿಂಗಳ ಶಿಕ್ಷೆ

ಕೋರ್ಟಿನ ಅಪಮಾನ ಮಾಡಿದ ಆರೋಪ

ಬೆಂಗಳೂರಿನ ತಾಯಿನಾಡು ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಆರ್. ಶ್ರೀನಿವಾಸನ್ ಡೇಲಿ ನ್ಯೂಜ ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಆರ್. ರಾಮಯ್ಯ ಮತ್ತು ಪ್ರಸಿದ್ಧ ವಕೀಲರಾದ ಶ್ರೀ ಎಲ್. ಎಸ್. ರಾಜು ಇವರ ಮೇಲೆ ಗೋಪಾಳರಾವ ವಿಚಾರಣಾ ಸಮಿತಿಯವರು ಹೂಡಿದ್ದ ಕೋರ್ಟಿನ ಅಪಮಾನ ಮಾಡಿದ ಖಟ್ಲೆಯ ವಿಚಾರಣೆ ಮುಗಿದು ಪ್ರತಿಯೊಬ್ಬರಿಗೆ ಎರಡು ತಿಂಗಳು ಸಾದಾಶಿಕ್ಷೆ ಮತ್ತು ೩೦೦ ರೂಪಾಯಿ ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ ಮತ್ತೊಂದು ತಿಂಗಳು ಶಿಕ್ಷೆಯನ್ನು ಅನುಭೋಗಿಸಬೇಕೆಂದೂ ಆ ಶಿಕ್ಷೆಗಳನ್ನು ೮ ವಾರಗಳ ತನಕ ತಡೆಯತಕ್ಕದ್ದೆಂದೂ ವಿಧಿಸಲಾಗಿದೆ. ಹೈಕೋರ್ಟಿನವರು ಅವರನ್ನೀಗ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಗೋಪಾಳರಾವ ವಿಚಾರಣಾ ಸಮಿತಿಯು ಘಟನೆ ಮತ್ತು ಅಧಿಕಾರ ಸಂಬಂಧದಲ್ಲಿ ಶ್ರೀ. ಎಲ್. ಎಸ್. ರಾಜು ಇವರು ಬರೆದ ಪತ್ರವನ್ನು ಪ್ರಕಟಿಸಿ ಸಂಪಾದಕೀಯ ಟೀಕೆಮಾಡಿದ್ದಕ್ಕಾಗಿ ಈ ಖಟ್ಲೆಯನ್ನು ಹೂಡಲಾಗಿತ್ತು.

ವಿಲಕ್ಷಣಜೀವಿ ಆಚಾರ್ಯ ಭನಸಾಲಿ

(ಹನ್ನೊಂದನೇ ಪುಟದಿಂದ)

ಮೊದಲಾದ ಎಲ್ಲ ಕೆಲಸಗಳನ್ನೂ ಮಾಡುವರು. ಉಳಿಕೆಯ ವೇಳೆಯಲ್ಲಿ ನೂಲುತ್ತ ಮಕ್ಕಳಿಗೆ ಓದಿಸುವ ಕೆಲಸ.

ಇಂತಿರುವರು ಪ್ರೊ. ಭನಸಾಲಿ, ವಿಲಕ್ಷಣ ಜೀವ.

× × ×

ಇಂದು ಈ ಜೀವ ಹೈದರಾಬಾದದಲ್ಲಿ ಸ್ತ್ರೀಯರ ಮೇಲೆ ಆಗುತ್ತಿರುವ ಅತ್ಯಾಚಾರದಿಂದ ಕಳವಳಗೊಂಡಿದೆ. ಸ್ತ್ರೀಯರ ಬಗ್ಗೆ ಭನಸಾಲಿಯವರ ಹೃದಯದಲ್ಲಿ ಪೂಜ್ಯ ಸ್ಥಾನವಿದೆ. ಅದುದರಿಂದ ಸತ್ಯಾಗ್ರಹಕ್ಕಾಗಿ ಅವರು ಕೆಲವು ಸಂಗಡಿಗರೊಡನೆ ಹೈದ್ರಾಬಾದಕ್ಕೆ ಹೊರಟಿದ್ದರು. ಆದರೆ ಅಲ್ಲಿಯ ಸರಕಾರವು ಇವರನ್ನು ತಡೆಯಿತು. ಇದರ ವಿರೋಧಕ್ಕಾಗಿ ಭನಸಾಲಿಯವರು ಆಮರಣ ಉಪವಾಸವನ್ನು ಕೈಕೊಂಡಿರುವರೆಂದು ಸುದ್ದಿ ಬಂದಿದೆ. ಛಲ ಹಟಪ್ರಕೃತಿಯವರಾದ ಇವರು ತಮ್ಮ ವ್ರತಸಂಕಲ್ಪವನ್ನು ಬದಲಿಸಲು ಸುಲಭವಾಗಿ ಒಡಂಬಡಲಾರರು. ಆದರೆ ಎಂಥ ಪ್ರಯತ್ನದಿಂದಾದರೂ ಇಂಥ ಮಹಾಜೀವವನ್ನು ಉಳಿಸಿಕೊಳ್ಳುವದು ರಾಷ್ಟ್ರಕ್ಕೆ ಅವಶ್ಯಕ ಮತ್ತು ನಮ್ಮೆಲ್ಲರ ಮತ್ತು ಸರಕಾರದ ಕರ್ತವ್ಯ.

ಉತ್ತರ ಕನ್ನಡ

ಕಾರವಾರ ತಾಲೂಕ ಹಳಗೆಯ ಶಿಕ್ಷಕ ಸಂಘದ ವೈಕುಂಠ ಅಪ್ಪು ಬಾಂದಿ ಇವರು ಕಮ್ಯುನಿಸ್ಟ ಚಳವಳಿಯಲ್ಲಿ ತೊಡಗಿದ್ದರಿಂದ ೧೪ ಕ್ಕೆ ಸೆರೆಹಿಡಿಯಲ್ಪಟ್ಟು ಸ್ಥಾನಬದ್ಧತೆಯಲ್ಲಿಡಲ್ಪಟ್ಟಿರುವರು. ಕಳೆದೆರಡು ವಾರಗಳಿಂದ ಇವರು ಅದೃಶ್ಯರಾಗಿದ್ದರು.

ಕರ್ನಾಟಕದ ಪ್ರಾದೇಶಿಕ ಭಾಷೆ ಕನ್ನಡ, ಕೊಂಕಣಿ ಭಾಷೆ ಮರಾಠಿ ಭಾಷೆಯ ಒಂದು ಉಪಭಾಷೆ, ಅದಕ್ಕೆ ಲಿಪಿಯೇ ಇಲ್ಲದ್ದರಿಂದ ಅದು ಸ್ವತಂತ್ರ ಭಾಷೆ ಆಗಲಾರದು. ಆದುದರಿಂದ ಕೊಂಕಣಿ ಮಾತಾಡುವವರ ಭಾಷೆ ಮರಾಠಿಯೆಂದು ತಿಳಿಯಲಾಗುವದು ಎಂದು ಮುಂತಾಗಿ ಮುಂಬಯಿ ಸರಕಾರದ ವಿದ್ಯಾಖಾತೆಯ ಕಾರ್ಯದರ್ಶಿಗಳು ಒಂದು ಪತ್ರಕ್ಕೆ ಉತ್ತರ ಕೊಟ್ಟಿರುವರು.

ಕಾರವಾರ ತಾಲೂಕ ಹಳಗೆಯಲ್ಲಿ ಒಬ್ಬ ವಕೀಲರ ಮನೆಯಲ್ಲಿ ಇದೇ ೧೩ ಕ್ಕೆ ಸಾವಿರಾರು ರೂಪಾಯಿ ಬೆಲೆಯ ಚಿನ್ನದ ಆಭರಣಗಳು ಕಳವಾಗಿದ್ದವು. ಆ ಸಂಬಂಧದಲ್ಲಿ ಹಳಗೆಯ ಗೋವಿಂದ ದತ್ತ ಎಂಬವನನ್ನು ಮುದ್ದೇ ಮಾಲು ಸಹಿತ ಸೆರೆಹಿಡಿಯಲಾಗಿದೆ.

ಕಾರವಾರ ನಗರ ಸಭೆಯು ಕಡ್ಡಾಯ ಶಿಕ್ಷಣ ಪ್ರಾರಂಭಿಸಲು ನಗರದ ದಿಕ್ಕಿನಲ್ಲಿ ಶಾಲೆ ನಾಲ್ಕನ್ನು ಕೊಡಬೇಕೆಂದು ಗೊತ್ತು ಮಾಡಿದೆ. ಇದಕ್ಕಾಗಿ ನಗರಸಭೆಗೆ ೨೦೦೦ ರೂಪಾಯಿ ವೆಚ್ಚ ಬರುತ್ತದೆ.

ಪತ್ರಿಕಾ [illegible] ಘಟಕಗಳ [illegible] ಸ್ಪರ್ಧೆ

[illegible]

ಹಿಂದುಸ್ತಾನ

ಮುಂಬಯಿ

ಮುಂಬಯಿ ವಿಶ್ವವಿದ್ಯಾಲಯದ ಸಿನೇಟಿಗೆ ರಜಿಸ್ಟರ್ಡ ಪದವೀಧರರ ಸಂಘದಿಂದ ನಡೆದ ಚುನಾವಣೆಯಲ್ಲಿ ಡಾ. ಎಸ್. ಎಸ್. ಗುಪಚುಪ, ಡಾ. ಎಂ. ಕೆ. ದೇಸಾಯಿ, ಪ್ರೊ. ಜಿ. ಎನ್. ಕರಾಂತೆ, ಎ. ಎಸ್. ಸ್ಥಳೇಕರ, ಎಚ್. ಎಲ್. ಸಿಲಮ ಇವರು ಆರಿಸಿ ಬಂದಿದ್ದಾರೆ.

ಮುಂಬಯಿ ನಂಕನ ಬೀದಿಯಲ್ಲಿ ತಾ. ೧೩ ರಂದು ಸ್ಫೋಟವಾಗಿ ಬೆಂಕಿಹತ್ತಿತು. ಮುಂಬಯಿ ಗುಪ್ತ ಪೋಲೀಸರು ಶೋಧ ನಡೆಸಲು ಅಲ್ಲಿ ಒಂದು ಚಿಕ್ಕ ಮದ್ದಿನ ಕಾರಖಾನೆ ಇದ್ದದ್ದು ಕಂಡು ಬಂತು. ಅಲ್ಲಿ ೨೨ ಕಚ್ಚಾ ಬಾಂಬು ಸಿಕ್ಕವು. ೬೨ ಜನರನ್ನು ಬಂಧಿಸಲಾಯಿತು. ಈ ಕಚ್ಚಾ ಬಾಂಬುಗಳನ್ನು ಹಾಫಕಿನ್ ಇನ್‌ಸ್ಟಿಟ್ಯೂಟದಲ್ಲಿ ಪರೀಕ್ಷಿಸುತ್ತಿರುವಾಗ ಒಂದು ಬಾಂಬು ಹಾರಿ ಶ್ರೀ ಪರಾಂಜಪೆ ಮತ್ತು ಅವರ ಸೇವಕನಿಗೆ ತೀವ್ರಗಾಯಗಳಾದವು. ಅವರನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಲಾಯಿತು.

ಮುಂಬಯಿಯಲ್ಲಿ ಶಾಂತಿ ಸುವ್ಯವಸ್ಥೆ ಕಾಯಲು ರಜಾಕಾರರ ತಂಡವನ್ನು ಕಳಿಸಬೇಕೆನ್ನುತ್ತೇನೆ ಎಂಬುದಾಗಿ ಕಾಶಿಂ ರಜವಿಯು ಮುಂಬಯಿ ಮುಖ್ಯಪ್ರಧಾನರಿಗೆ ತಂತಿ ಕಳಿಸಿದ್ದರು. ಅವಕ್ಕೆ ಮುಖ್ಯಮಂತ್ರಿ ಶ್ರೀ ಖೇರರು ಉತ್ತರ ಕಳಿಸಿ ಮೊನ್ನಿನ ಗಲಭೆಯು ನಿಮ್ಮ ಏಜಂಟರ ಪ್ರಚೋದನೆಯಿಂದಲೇ ಆಯಿತೆಂಬ ಶಂಕೆಗೆ ನಿಮ್ಮ ತಂತಿಯಿಂದ ಪುಷ್ಟಿ ದೊರೆತಿದೆ. ಗಲಭೆಯನ್ನು ಕೂಡಲೆ ಹತ್ತಿಕ್ಕಲಾಗಿದೆ. ಗಲಭೆಗೆ ಗುರಿಯಾದವರೆಲ್ಲ ನಿಮಗೆ ಧನ್ಯವಾದಗಳನ್ನು ಅರ್ಪಿಸುವರು ಎಂದು ಹೇಳಿದ್ದಾರೆ.

ಪುಣೆಯ ನಗರ ಸಭೆಯ ಅಧ್ಯಕ್ಷರಾದ ಶ್ರೀ ಸಣಸರವರಿಗೆ ಆಹಾರ ನಿಯಂತ್ರಣ ಕಾಯಿದೆ ಮೀರಿ ಊಟಕ್ಕೆ ಹಾಕಿದ್ದಕ್ಕೆ ೭ ತಿಂಗಳ ಸಾದಾ ಶಿಕ್ಷೆ ೫ ಸಾವಿರ ರೂ. ದಂಡ ವಿಧಿಸಲಾಯಿತು.

ಘಟನಾತ್ಮಕ ಬದಲಾವಣೆಗಳನ್ನು ಅನುಲಕ್ಷಿಸಿ ಹಿಂದುಸ್ಥಾನ ಸರಕಾರವು ಡಾಂಗರ ಪ್ರದೇಶವನ್ನು ಒಂದು ಜಿಲ್ಲೆಯನ್ನಾಗಿ ಮಾಡಿ ಅದನ್ನು ಮುಂಬಯಿ ಪ್ರಾಂತದಲ್ಲಿ ಸೇರಿಸಲು ನಿರ್ಧರಿಸಿದೆ. ಇವಕ್ಕೆ ಡಾಂಗ ಜಿಲ್ಲೆಯೊಂದು ಹೆಸರಿಟ್ಟು ಮುಂಬಯಿ ಸರಕಾರವು ಇದೇ ತಾ ೧೫ ರಿಂದ ಅದನ್ನು ತನ್ನ ಸ್ವಾಧೀನದಲ್ಲಿ ತೆಗೆದುಕೊಂಡಿದೆ. ಇದನ್ನು ಉತ್ತರ ಭಾಗದಲ್ಲಿ ಸೇರಿಸಲಾಗಿದ್ದು ಇದರಲ್ಲಿ ೩೩೫ ಹಳ್ಳಿಗಳಿವೆ.

ಆಷಾಢ ಏಕಾದಶಿಯ ಜಾತ್ರೆಗೆ ಪಂಢರಪುರಕ್ಕೆ ಸಾಗಿದ ಯಾತ್ರಿಕರನ್ನು ನಿಜಾಮ ಹದ್ದಿನಲ್ಲಿ ಹಾಯ್ದು ಹೋಗುವಾಗ ರಜಾಕಾರರೂ ನಿಜಾಮ ಪೋಲೀಸರೂ ತರುಬಿ ಅವರನ್ನು ಸುಲಿದು ತಿರುಗಿ ಕಳಿಸಿದರೆಂದು ತಿಳಿಯುತ್ತದೆ.

ಮುಂಬಯಿ ಸರಕಾರದ ಗ್ಯಾಝೆಟೆಡ್ ನೌಕರರ ವೇತನ ಪ್ರಮಾಣಗಳು ಹೆಚ್ಚಿಸಲ್ಪಟ್ಟಿವೆ. ಮುಂಬಯಿ ನಗರದ ನೌಕರರಿಗೆ ಸ್ಥಾನಿಕ ಪರಿಹಾರ ಮತ್ತು ಮನೆ ಬಾಡಿಗೆ ಭತ್ತೆ ಕೊಡಲಾಗುವದು. ಶಿಕ್ಷಣ ಶಾಖೆಯ ೨ ನೇ ವರ್ಗದ ನೌಕರರಲ್ಲಿ ಸ್ತ್ರೀ-ಪುರುಷ ಎಂಬುದಾಗಿದ್ದ ಭೇದವನ್ನು ತೆಗೆಯಲಾಗಿದೆ. ಈ ವೇತನ ಹೆಚ್ಚಿದ್ದಕ್ಕೆ ೧೬ ಲಕ್ಷ ರೂ. ಹೆಚ್ಚು ವೆಚ್ಚ ತಗಲುವದೆಂದು ತಿಳಿಯುತ್ತದೆ.

ಹೈದರಾಬಾದ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸುವವರನ್ನು ಬಂಧಿಸಲಾಗುವದೆಂದು ಬೃಹತ್ ಮುಂಬಯಿ ಪೋಲೀಸ ಕಮಿಶನರರು ಆಜ್ಞೆ ಹೊರಡಿಸಿದ್ದಾರೆ.

ಮುಂಬಯಿ ಪೋಲೀಸ ಕಮಿಶನರರು ತಾ ೨೦ಕ್ಕೆ ಒಂದು ಪ್ರಕಟನೆ ಹೊರಡಿಸಿ ಸಿನೇಮಾ ಗೃಹಗಳಲ್ಲಿ ಹೊಗೆಬತ್ತಿ ಸೇದುವದನ್ನು ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಪ್ರತಿಬಂಧಿಸಿದ್ದಾರೆ. ಅಪ್ಪಣೆ ಮೀರಿ ನಡೆದವರಿಗೆ ದಂಡವಿಧಿಸಲಾಗುವದು.

ಮುಂಬಯಿ ತಂತೀ ಶಾಖೆಯ ಮುಖ್ಯಾಧಿಕಾರಿಗಳು ತಾ ೨೦ ಕ್ಕೆ ಒಂದು ಪ್ರಕಟನೆ ಹೊರಡಿಸಿ ಮುಂದಿನ ಆಜ್ಞೆ ಹೊರಡುವವರೆಗೆ ಪಾಕಿಸ್ತಾನದೊಡನೆ ತಂತಿ ವ್ಯವಹಾರ ಸಂಪೂರ್ಣ ನಿಲ್ಲಿಸಲಾಗಿದೆಯೆಂದು ಹೇಳಿದ್ದಾರೆ.

ಹೊಸದಿಲ್ಲಿ

ಹಿಂದುಸ್ಥಾನ ಸರಕಾರದವರು ಮುಂಬರುವ ೭ ವರ್ಷಗಳಲ್ಲಿ ಭಾರತ ನೌಕಾಪಡೆಯನ್ನು ೨ ಕ್ರೂಜರುಗಳು, ೨ ವಿಮಾನ ವಾಹನಗಳು, ೧೦೪ ವಿನಾಶಿಕೆಗಳು ಇವುಗಳಿಂದ ಸುಸಜ್ಜಿತಗೊಳಿಸಲಬಯಸಿ ಹಾಗೆ ಒಂದು ಸಪ್ತವಾರ್ಷಿಕ ಯೋಜನ ಸಿದ್ಧಪಡಿಸಿದ್ದಾರೆ. ಇವುಗಳನ್ನು ನಿಯಂತ್ರಿಸಬಲ್ಲ ತಜ್ಞರನ್ನು ಅಷ್ಟು ಅವಕಾಶದಲ್ಲಿ ವಿದೇಶಕ್ಕೆ ಕಳುಹಿಸಿ ಸಿದ್ಧಗೊಳಿಸಲಾಗುವದು.

ಕಲ್ಲಿದ್ದಲಿಯಿಂದ ಭಾರತದಲ್ಲಿಯೇ ೧೧ ಲಕ್ಷ ಟನ್ ಪೆಟ್ರೊಲ ಹಾಗು ಡೀಜಲ್ ಎಣ್ಣೆಯನ್ನು ತೆಗೆಯಬಹುದೆಂಬ ಬಗ್ಗೆ ಸಲಹೆಕೊಡಲು ಭಾರತಕ್ಕೆ ಅಮೇರಿಕೆಯ ಕೊಪ್ಪರ್ಸ ಕಂಪನಿಯ ತಜ್ಞರು ಬಂದಿದ್ದಾರೆ. ಇದಕ್ಕೆ ೫೦ ಕೋಟಿ ರೂ. ಬೆಲೆಯ ಯಂತ್ರ ಸಾಮುಗ್ರಿ ೨ ಲಕ್ಷ ಕಿಲೋವ್ಯಾಟುಗಳ ವಿದ್ಯುದಾಗರ ಬೇಕಾಗಬಹುದೆಂದು ಅಂದಾಜಿದೆ.

ಕಾಶ್ಮೀರದ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದೆ ಎಂಬುದಕ್ಕೆ ಅಝಾದ ಕಾಶ್ಮೀರ ಸರಕಾರದ ಪ್ರಕಟನಾ ಶಾಖೆಯ ಡಾಯರೆಕ್ಟರರಾದ ಶ್ರೀ ಜಿ. ಕೆ. ರೆಡ್ಡಿಯವರೇ ಸ್ವತಃ ಸಾಕ್ಷಿ ಕೊಡುವರೆಂದು ತಿಳಿಯುತ್ತದೆ.

ಹಿಂದುಸ್ಥಾನದ ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಭಾಷಾನುಗುಣ ಪ್ರಾಂತರಚನಾ ಮಂಡಲಕ್ಕೆ ಹೆಚ್ಚಿನ ಅಧಿಕಾರ ಕೊಟ್ಟಿದ್ದಾರೆ. ಈ ಮೊದಲು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಮತ್ತು ಕೇರಳ ಪ್ರಾಂತಗಳ ರಚನೆಯ ಬಗ್ಗೆ ಮಾತ್ರ ಈ ಮಂಡಲಕ್ಕೆ ಅಧಿಕಾರವಿತ್ತು. ಈಗ ಅವರಿಗೆ ಸರಿದೋರಿದರೆ ಹೆಚ್ಚು ಭಾಷಾನುಗುಣ ಪ್ರಾಂತಗಳನ್ನು ನಿರ್ಮಿಸಲಿಕ್ಕಾಗಲೀ ನಿರ್ಮಿಸದೇ ಇರುವಂತೆಯಾಗಲೀ ಸಲಹೆ ಕೊಡಬಹುದು.

ಪಾಕಿಸ್ತಾನದ ಕಮ್ಯುನಿಷ್ಟ ಪಕ್ಷದಲ್ಲಿ ತೀವ್ರವಾದ ಭಿನ್ನಾಭಿಪ್ರಾಯವುಂಟಾಗಿದೆ. ಇವರಲ್ಲಿ ಹೆಚ್ಚು ಜನರು ಪಾಕಿಸ್ತಾನವು ಹಿಂದುಸ್ತಾನದಲ್ಲಿ ಕೂಡಿಕೊಳ್ಳಬೇಕೆಂದೂ ಕಾಶ್ಮೀರದಲ್ಲಿ ಶೇಖ ಅಬ್ದುಲ್ಲಾರಿಗೇ ಬೆಂಬಲ ಕೊಡಬೇಕೆಂದೂ ಅಭಿಪ್ರಾಯಪಡುವರಲ್ಲದೆ ಖಾನಅಬ್ದುಲಗಫರಖಾನರನ್ನೂ ಅವರ ಅನೇಕ ಕೆಂಪಂಗೀ ಪುಂಡಾಳುಗಳನ್ನೂ ಸೆರೆಮನೆಗೆ ಅಟ್ಟಿದ್ದನ್ನು ಖಂಡಿಸುತ್ತಾರೆಂದು ತಿಳಿಯುತ್ತದೆ. ಪಾಕಿಸ್ತಾನದ ವಿಮಾನಗಳು ಗುಡ್ಡಗಾಡ ಜನರ ಮೇಲೆ ಬಾಂಬು ಎಸೆದದ್ದು ಇವರಲ್ಲಿ ಕಳವಳವನ್ನು ಹುಟ್ಟಿಸಿದೆ. ಭಿನ್ನಾಭಿಪ್ರಾಯದ ಫಲವಾಗಿ ಪಾಕಿಸ್ತಾನ ಸರಕಾರದ ಧೋರಣ ಸಮರ್ಥಿಸುವ ಪಕ್ಷದ ಧುರೀಣರಾದ ಫಜಲ್ ಇಲಾಹಿ ಕುರ್ಬಾನರನ್ನು ಪಕ್ಷದಿಂದ ಹೊರಗೆ ಹಾಕಲಾಗಿದೆಯೆಂದೂ ತಿಳಿದುಬಂದಿದೆ.

ಮದ್ರಾಸ ಗವರ್ನರರಾದ ಆರ್ಚಿಬಾಲ್ಡನೈ ಅವರು ನಿವೃತ್ತರಾಗಿದ್ದು ಅವರ ಸ್ಥಳಕ್ಕೆ ಮಧ್ಯಪ್ರಾಂತದ ಗವರ್ನರರಾಗಿದ್ದ ಶ್ರೀ ಮಂಗಲದಾಸ ಪಕ್ವಾಸಾ ಇವರನ್ನು ಮದ್ರಾಸ ಗವರ್ನರರನ್ನಾಗಿಯೂ ಶ್ರೀ ಪಕ್ವಾಸಾರ ಸ್ಥಳಕ್ಕೆ ಸಂಸ್ಥಾನ ಶಾಖೆಗೆ ಕಾರ್ಯದರ್ಶಿಗಳಾಗಿದ್ದ ಶ್ರೀ ವ್ಹಿ. ಪಿ. ಮೆನನ್ನರನ್ನು ಮಧ್ಯ ಪ್ರಾಂತದ ಗವರರನ್ನಾಗಿಯೂ ನೇಮಿಸಲಾಗುವದೆಂದು ತಿಳಿದುಬಂದಿದೆ.

ಹೊಸದಿಲ್ಲಿಯ ಕೆಂಪುಕೋಟೆಯಲ್ಲಿ ನಡೆದ ಮ. ಗಾಂಧಿ ಕೊಲೆಯ ಖಟ್ಲೆಯ ದಿನದ ವೆಚ್ಚವು ಹೀಗೆಂದು ತಿಳಿಯುತ್ತದೆ. ಸರಕಾರೀ ವಕೀಲರಿಗೆ ೧೫೦೦ ರೂ. ರಾ. ಬ. ಜ್ವಾಲಾಪ್ರಸಾದರಿಗೆ ೧೦೦೦ರೂ. ಇನ್ನೊಬ್ಬರಿಗೆ ೫೦೦ರೂ. ಸರಕಾರಿ ವಕೀಲರ ನಿವಾಸವನ್ನು ಸಮೋಷ್ಣವಾಗಿರಿಸಲು ಯಾಂತ್ರಿಕವ್ಯವಸ್ಥೆಗೆ ದಿನ ಒಂದಕ್ಕೆ ಆಗುವ ವೆಚ್ಚ ಇಷ್ಟಲ್ಲದೆ ಬೇರೆಬೇರೆ ಭಾಷೆಯ ಭಾಷಾಂತರ ಕರ್ತರಿಗೆ ಕೊಡುವ ಹಣ ಇದೆಲ್ಲ ಸೇರಿದರೆ ೩ ಸಾವಿರಕ್ಕೆ ಮಿಕ್ಕುವದೆಂದು ತಿಳಿಯುತ್ತದೆ.

ಮಧ್ಯಪ್ರಾಂತ

ಮಧ್ಯಪ್ರಾಂತ ಸರಕಾರದ ಶಿಕ್ಷಣ ಶಾಖೆಯವರು ಹಾಯಸ್ಕೂಲ ಮತ್ತು ಮಿಡಲ ಸ್ಕೂಲುಗಳಲ್ಲಿ ಇತ್ತೀಚೆಗೆ ಹೆಚ್ಚು ಮಾಡಲ್ಪಟ್ಟ ಫೀಗಳನ್ನು ಅನುಕ್ರಮವಾಗಿ ವರ್ಷಕ್ಕೆ ೪೦ ರಿಂದ ೬೦ ರೂ ಹಾಗು ೩೬ ರಿಂದ ೨೪ ರೂಗಳಿಗೆ ಇಳಿಸಿದ್ದಾರೆ.

ಮದ್ರಾಸ

ಘಟನಾ ಸಮಿತಿಯ ಸದಸ್ಯರಾದ ಶ್ರೀ. ಎಂ. ಅನಂತಶಯನಂ ಅಯ್ಯಂಗಾರರು ಮದ್ರಾಸದ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಕೂಡಲೇ ಹಿಂದುಸ್ತಾನದ ಸೈನ್ಯವು ಹೈದರಾಬಾದದಲ್ಲಿ ನುಗ್ಗಿ ಸಂಸ್ಥಾನವನ್ನೆಲ್ಲ ಆಕ್ರಮಿಸುವದೊಂದೇ ಮಾರ್ಗ ಉಳಿದಿರುವದೆಂದೂ ಆ ಮೊದಲು ನಿಜಾಮರಿಗೆ ಅರಾಜಕತೆಯನ್ನು ನಿರ್ಮೂಲಗೊಳಿಸಿ ಪ್ರಜಾ ಸರಕಾರ ಸ್ಥಾಪಿಸಲು ೧೫ ದಿನಗಳ ಅವಕಾಶ ಕೊಡಬೇಕೆಂದೂ ಹೇಳಿದರು. ಕೊನೆಗೆ ಇದೇ ಅಭಿಪ್ರಾಯದ ಒಂದು ಗೊತ್ತುವಳಿಯಾಗಿ ಅದನ್ನು ಕೇಂದ್ರ ಸರಕಾರಕ್ಕೆ ತಿಳಿಸಲಾಯ್ತು.

ಮದ್ರಾಸ ಶಾಸನ ಸಭೆಯ ಧುರೀಣರಾದ ಶ್ರಿ. ಬಿ. ಗೋಪಾಲರೆಡ್ಡಿ ಅವರು ತಾ. ೧೫ ರಂದು ಮದ್ರಾಸ ಸರಕಾರದ ಸಾಂಕೇತಿಕ ಚಿನ್ಹವು ಹಿಂದುಸ್ತಾನ ಸರಕಾರದ ಸಾಂಕೇತಿಕ ಚಿನ್ಹದೊಂದಿಗೆ ದಕ್ಷಿಣ ಭಾರತದ 'ಗೋಪುರ'ದಿಂದ ಯುಕ್ತವಾಗುವದೆಂದೂ ನಿಶ್ಚಿತ ಆಕೃತಿಯ ಬಗ್ಗೆ ವಿಚಾರ ನಡೆದಿದೆಂದೂ ಸಭೆಯಲ್ಲಿ ತಿಳಿಸಿದರು.

ಹೈಸ್ಕೂಲ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಖಾಸಗೀರೀತಿಯಿಂದ ಪಾಠ ಹೇಳಕೂಡದೆಂದು ಮದ್ರಾಸ ಸರಕಾರದ ಆಜ್ಞೆ ಹೊರಟಿದೆ. ಶಾಲೆಯ ವೇಳೆಯ ನಂತರ ಅಲ್ಲಿಯೇ ಪಾಠ ಹೇಳಿಕೊಡಲು ಆಸ್ಪದಕೊಡಲಾಗಿದೆ.

ಅಮೇರಿಕೆಯ ನ್ಯಾಶನಲ್ ಕ್ಯಾಥೊಲಿಕ ವೆಲ್ಫೇರ ರಿಲೀಫ ಸಮಿತಿಯು ಹಿಂದಿ ನಿರಾಶ್ರಿತರಿಗಾಗಿ ಬೆಂಗಳೂರಲ್ಲಿರುವ ತಮ್ಮ ಧಾರ್ಮಿಕ ಪ್ರತಿನಿಧಿಗೆ ೧೮೦ ಸಾವಿರ ಪೌಂಡು ಚಾಕಲೆಟ ಕಳಿಸಿದ್ದು ಅವರು ಪುಕ್ಕಟೆ ಹಂಚಲು ಮದ್ರಾಸ ಸರಕಾರಕ್ಕೆ ಒಪ್ಪಿಸಿರುವರೆಂದು ತಿಳಿಯುತ್ತದೆ.

ಮದ್ರಾಸ ಜಮೀನದಾರಿ ನಿರ್ಮೂಲನ ಮಸೂದೆಯ ಪರಿಣಾಮವಾಗಿ ೨೪೦೦ ಜಹಾಗೀರಿ ೭೦೦೦ ಇನಾಮ ಭೂಮಿಗಳು ರದ್ದಾಗುವವೆಂದು ಕಂದಾಯ ಮಂತ್ರಿ ಶ್ರೀ ಕಲಾವೆಂಕಟರಾಯರು ತಾ ೧೯ ರಂದು ಶಾಸನ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಈ ವರೆಗೆ ಸ್ಥಾನಬದ್ಧತೆಯಿಂದ ಆರ್. ಎಸ್. ಎಸ್. ದ ೩೬೫ ಹಾಗು ಮುಸ್ಲಿಂ ನ್ಯಾಶನಲ ಗಾರ್ಡ್ಸದ ೩೦ ಜನರನ್ನು ಬಂಧಮುಕ್ತ ಮಾಡಲಾಗಿದೆಯೆಂದೂ ಆರ್. ಎಸ್. ಎಸ್. ದ ಇಬ್ಬರು ಹಾಗು ಮುಸ್ಲಿಂ ನ್ಯಾಶನಲ್ ಗಾರ್ಡ್ಸದ ೨೦ ಜನರು ಇನ್ನೂ ಸ್ಥಾನಬದ್ಧತೆಯಲ್ಲಿ ಇರುವರೆಂದೂ ಶಾಸನ ಸಭೆಯಲ್ಲಿ ತಾ. ೨೦ ರಂದು ಹೇಳಲಾಯ್ತು.

ಬಿಹಾರ

ಒಕ್ಕೂಟ ವಿರೋಧಿ ಚಟುವಟಿಕೆಗಳ ಸಂಬಂಧದಲ್ಲಿ ೭ ಜನರು ತಾ ೧೫ ರಂದು ಚೈಬಾಸಾ ಎಂಬಲ್ಲಿ ಬಂಧಿಸಲ್ಪಟ್ಟಿದ್ದು ಅವರಲ್ಲಿ ಇಬ್ಬರು ಸ್ತ್ರೀಯರಿದ್ದಾರೆ. ಬಂಧಿತರು ಹೈದರಾಬಾದದವರಿರುವರೆಂದೂ ಅವರು ದಾಸರ ವೇಷದಲ್ಲಿ ಅಲೆದಾಡುತ್ತಿದ್ದರೆಂದೂ ಅವರನ್ನು ಶೋಧಿಸಲಾಗಿ ಆಕ್ಷೇಪಾರ್ಹ ಕಾಗದ ಪತ್ರಗಳು ಸಾಮಾನಗಳು ಸಿಕ್ಕವೆಂದೂ ತಿಳಿಯುತ್ತದೆ.

ನೌಕಾಶಿಕ್ಷಣಸೌಕರ್ಯ

ನೌಕಾ ಶಿಕ್ಷಣ ತರಬೇತಿಯ ನೌಕೆಯಾದ 'ಡಾಫರಿನ'ದ ಆಡಳಿತ ಸಮಿತಿಯು ಭಾರತ ಸರಕಾರದ ವಾಣಿಜ್ಯ ಮಂತ್ರಿಗಳಾದ ಶ್ರೀ ಕೆ. ಸಿ. ನಿಯೋಗಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನೌಕಾ ಪಡೆಯ ಶಿಕ್ಷಣಕ್ಕಾಗಿ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶಕೊಡಬೇಕು ಎಂದೂ ೧೯೪೯ ರಿಂದ ವಿದ್ಯಾರ್ಥಿಗಳ ವಯಸ್ಸು ಮತ್ತು ಶಿಕ್ಷಣ ಮಟ್ಟವನ್ನು ಹೆಚ್ಚಿಸಬೇಕೆಂದೂ ನಿರ್ಧರಿಸಿತು. ಈ ವರೆಗೆ ವಯೋ ನಿರ್ಬಂಧವು ೧೩ ರಿಂದ ೧೬ ಎಂದಿತ್ತು. ಇನ್ನು ಮೇಲೆ ೧೫ ರಿಂದ ೧೭ ಮಾಡಲಾಗುವದು ಮತು ಮ್ಯಾಟ್ರಿಕ್ ಪಾಸಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಕೊಡಲಾಗುವದು. ಶಿಕ್ಷಣಾವಧಿಯನ್ನು ೩ ವರ್ಷದಿಂದ ೨ ವರ್ಷಕ್ಕೆ ಇಳಿಸಲಾಗುವದು. ನೌಕಾ ಇಂಜನಿಯರಿಂಗ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಮೊದಲು ೩ ವರ್ಷ ವರ್ಕಶಾಪಿನಲ್ಲಿ ಶಿಕ್ಷಣ ಪಡೆಯಬೇಕು— ಈ ಯೋಜನೆಯ ಪ್ರಕಾರ 'ಡಫರಿನ' ನೌಕೆಯಲ್ಲಿ ೨೫ ರ ಬದಲು ೪೦ ವಿದ್ಯಾರ್ಥಿಗಳನ್ನು ತರಬೇತಿಗಾಗಿ ತೆಗೆದುಕೊಳ್ಳಲಾಗುವದು.

● ಆಸಾಮ ಸರಕಾರದವರು ಸಾರ್ವಜನಿಕ ಸುವ್ಯವಸ್ಥೆ ಕಾಯಿದೆ ಅನ್ವಯ ರೆಡ್ ಗಾರ್ಡ್ಸ ಸಂಸ್ಥೆಯನ್ನು ಅಕ್ರಮ ಮಾಡಿದ್ದಾರೆ.

ಸ್ವತಂತ್ರ ಭಾರತದ ಚುನಾವಣೆಗಳು

ಘಟನಾ ಸಮಿತಿಯ ಪ್ರಕಟನೆ

ಘಟನಾ ಸಮಿತಿಯ ಕಚೇರಿಯಿಂದ ತಾ ೧೫ ಕ್ಕೆ ಒಂದು ಪ್ರಕಟನೆ ಹೊರಟಿದ್ದು ಅದರಲ್ಲಿ ಹೊಸ ಘಟನೆಯನ್ವಯ ನಡೆಯಲಿರುವ ಹೊಸ ಚುನಾವಣೆಯ ಬಗ್ಗೆ ಯಾವ ಯಾವ ಸಿದ್ಧತೆಗಳು ನಡೆದಿವೆ ಎಂಬ ಬಗ್ಗೆ ವಿವರ ಕೊಡಲಾಗಿದೆ.

ಪ್ರೌಢ ಮತಾಧಿಕಾರ

ಪ್ರೌಢ ಮತಾಧಿಕಾರದ ತಳಹದಿಯ ಮೇಲೆ ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳಿಗೆ (ಕೆಳಮನೆ) ಚುನಾವಣೆಯಾಗಬೇಕೆಂದು ಹೊಸ ಘಟನೆಯ ಕರಡಿನಲ್ಲಿದೆ. ಮತದಾರರ ವಯಸ್ಸು ೨೧ ಎಂದು ನಿರ್ದಿಷ್ಟಗೊಳಿಸಿದೆ. ಹುಚ್ಚರು ಗುನ್ಹೆಗಾರರು ನಾಗರಿಕತೆಯ ಹಕ್ಕಿಲ್ಲದವರೇ ಮೊದಲಾದವರನ್ನು ಬಿಟ್ಟು ಉಳಿದ ಪ್ರೌಢರಿಗೆಲ್ಲ ಮತಾಧಿಕಾರವಿದೆ.

• ಪ್ರತಿಯೊಂದು ಹಳ್ಳಿಯ ಅಥವಾ ಗುಂಪಿನ ಮತದಾರ ಪಟ್ಟಿಗಳು ೧೯೪೯ ಜನವರಿಯ ೧ನೇ ತಾ. ಗೆ ಸಿದ್ಧವಾಗಬೇಕೆಂದು ಜಿಲ್ಹಾ ಅಧಿಕಾರಿಗಳಿಗೆ ತಿಳಿಸಲಾಗಿದೆ. ಮತದಾರರ ವಯಸ್ಸನ್ನು ಅಂದಿನ ವಿಂತಯ ವರೆಗೂ ಲೆಕ್ಕದಲ್ಲಿ ಹಿಡಿಯಲಾಗುವದು.

ಪ್ರತ್ಯೇಕ ಮತದಾರ ಸಂಘಗಳಿಲ್ಲ

ಹೊಸ ಘಟನೆಯ ಪ್ರಕಾರ ಜಾತಿಜಾತಿಗಳಿಗೆ ಪ್ರತ್ಯೇಕ ಮತದಾರ ಸಂಘಗಳಿಗೆ ಅವಕಾಶವಿಲ್ಲ. ಆದರೆ ಮುಸಲ್ಮಾನರು, ದಲಿತ ವರ್ಗದವರು, ಕಾಡು ಜನರು, ಮದ್ರಾಸ ಮತ್ತು ಮುಂಬಯಿಯ ಕ್ರಿಶ್ಚಿಯನ್ನರು ಇವರಿಗೆ ಮಾತ್ರ ಮತದಾರ ಸಂಘದಲ್ಲಿ ಸ್ಥಳ ಕಾದಿಡಲಾಗುವದು. ಕಾದಿಟ್ಟ ಸ್ಥಳಕ್ಕೆ ನಿಲ್ಲುವ ಹುರಿಯಾಳು ವಿಶಿಷ್ಟ ಜಾತಿಯವನೇ ಇರಬೇಕಾದ್ದರಿಂದ ಅದನ್ನು ತಿಳಿದುಕೊಳ್ಳಲು ಮತದಾರ ಪಟ್ಟಿಯಲ್ಲಿ ಒಂದು ಅಂಕಣದಲ್ಲಿ ಆಯಾ ಜಾತಿಯನ್ನು ನಿರ್ದಿಷ್ಟಪಡಿಸಲಾಗುವದು. ಈ ಸಂದರ್ಭ ಒಂದನ್ನು ಬಿಟ್ಟರೆ ಸಕಲ ಜಾತಿಯವರಿಗೂ ಒಂದೇ ಮತದಾರ ಪಟ್ಟಿಯನ್ನು ತಯಾರಿಸಿದರೆ ಸಾಕು. ಮತದಾರನ ಅರ್ಹತೆ ಅನರ್ಹತೆಯ ನಿಯಮಗಳು ಕೇಂದ್ರ, ಪ್ರಾಂತ ಮತ್ತು ಸಂಸ್ಥಾನಗಳಲ್ಲಿ ಒಂದೇ ಇರುವದರಿಂದ ಅದೇ ಮತದಾರ ಪಟ್ಟಿಗಳನ್ನು ಕೇಂದ್ರ, ಪ್ರಾಂತ ಮತ್ತು ಸಂಸ್ಥಾನಗಳ ಆಯ್ಕೆಯ ಕಾಲಕ್ಕೆ ಉಪಯೋಗಿಸಲು ಅಡ್ಡಿಯಿಲ್ಲ.

ಮತದಾರ ಪಟ್ಟಿಯ ಭಾಷೆ

ಆಯಾ ಭಾಗಗಳ ಮತದಾರ ಪಟ್ಟಿಯ ಭಾಷೆ ಯಾವುದೆಂಬುದನ್ನು ಪ್ರಾಂತಿಕ ಮತ್ತು ಸಂಸ್ಥಾನಿಕ ಸರಕಾರಗಳೇ ನಿರ್ಣಯಿಸುವವು. ಚುನಾವಣೆಯ ಅಧಿಕಾರಿಗಳು ಮತದಾರರ ಹೆಸರುಗಳನ್ನು ಮನೆಮನೆಗೆ ಹೋಗಿಯೇ ಬರೆದುಕೊಳ್ಳತಕ್ಕದ್ದು.

ನಿರಾಶ್ರಿತರ ವಿಷಯದಲ್ಲಿ ವಾಸ್ತವ್ಯದ ಕಲಮಿನ ಬಗ್ಗೆ ಅಡಚಣೆ ಉಂಟಾಗುವ ಸಂಭವವಿದೆ. ಆದರೆ ಅವರು ಇಂತಹ ಊರಲ್ಲಿ ವಾಸಿಸಲು ನಿರ್ಧರಿಸಿರುವದಾಗಿ ತಿಳಿಸಿ ತಮ್ಮ ಹೆಸರುಗಳನ್ನು ಮತದಾರ ಪಟ್ಟಿಯಲ್ಲಿ ಸೇರಿಸಬಹುದು.

ಮೇಲಿನ ಸೂಚನೆಗಳಿಗನುಸರಿಸಿ ಪ್ರಾಂತಿಕ ಮತ್ತು ಸಂಸ್ಥಾನಿಕ ಸರಕಾರಗಳು ಈಗಾಗಲೇ ಕೆಲಸ ಪ್ರಾರಂಭಿಸಿರುತ್ತವೆ. ಘಟನಾ ಸಮಿತಿಯ ಕಚೇರಿಯು ಕೋರಿದವರಿಗೆಲ್ಲ ಉಪಯುಕ್ತ ಸಲಹೆಗಳನ್ನು ಕೊಡುತ್ತಿರುವದು. ಒಟ್ಟಿನ ಮೇಲೆ ಹೊಸ ಘಟನೆ ಸ್ವೀಕೃತವಾಗುತ್ತಲೇ ಚುನಾವಣೆಗಳು ಜರಗಲು ಕಾಲವಿಲಂಬವಾಗುವದಿಲ್ಲವೆಂದು ಹೇಳಬಹುದು.

ಹೊಸ ಮಾದರಿಯ ಮೈಸೂರ ಹತ್ತಿ

ಮೈಸೂರ ಅಮೇರಿಕನ್ ಎಂಬ ಒಂದು ಹೊಸ ಹತ್ತಿಯನ್ನು ಶೋಧಿಸಲಾಗಿದೆ. ಮೈಸೂರಲ್ಲಿ ೧೮೫೦ ರಿಂದಲೂ ಬೆಳೆಯುತ್ತ ಬಂದಿರುವ ದೊಡ್ಡ ಹತ್ತಿಗಿಂತಲೂ ಇದು ಎಷ್ಟೋ ಪಾಲು ಉತ್ತಮವಾದದ್ದಿರುತ್ತದೆ. ಮಳೆಯಿಂದ ನೆಲದಲ್ಲಿಯೂ ಕೆರೆಕಾಲುವೆಯಿಂದ ನೀರುಣಿಸ ಭೂಮಿಯಲ್ಲಿಯೂ ಇದು ಒಳ್ಳೇ ಫಲವತ್ತಾಗಿ ಬೆಳೆಯುತ್ತದೆ. ಇದಕ್ಕೆ ರೋಗವೇ ತಗಲುವ ಭಯವಿಲ್ಲ. ಇದರ ಎಲೆಗಳು ಹರವಾಗಿದ್ದು ಬಹಳ ಚನ್ನಾಗಿ ಅರಳುತ್ತದೆ. ಇದರ ಬೀಜಗಳೂ ದೊಡ್ಡವು. ಇದರ ಎಳೆ ಬಹಳ ಜಿನುಗಾಗಿ ಹೊರಡುತ್ತದೆ. ಒಂದು ಎಕರೆಗೆ ೪೦೦ ರಿಂದ ೧೩೫೦ ಪೌಂಡುಗಳ ವರೆಗೆ ಈ ಹತ್ತಿಯ ಬೆಳೆ ಬರುತ್ತದೆ.

ನಾರದ ಭವಿಷ್ಯ

ಜ್ಯೋತಿಷಿ—ಕೃಷ್ಣಶಾಸ್ತ್ರಿ ಘಡೆ, ಭವಿಷ್ಯಕಥನ ಅಫೀಸ ಖಡೇಬಝಾರ, ಬೆಳಗಾವಿ.

ಜುಲೈ ೨೬ ರಿಂದ ಅಗಸ್ಟ ೧ ರ ವರೆಗೆ

ಮೇಷ

ಸ್ವಂತಕ್ಕೆ ಮಕ್ಕಳಿಗೆ ಮತ್ತು ಬಂದ ಅತಿಥಿಗಳಿಗೆ ಸ್ವಲ್ಪ ಕಾಯಿಲೆ. ಆದರೆ ಹೆಂಡತಿಯ ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯ ಮಾನದಿಂದ ಲಾಭ ಬಹಳ ಉತ್ತಮ. ಬೌದ್ಧಿಕ ಕೆಲಸಗಳಲ್ಲಿ ವಿಜಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಸ್ವಪ್ನ ಶುಭ ಮತ್ತು ಭಾವೀಸೂಚಕ. ಮಿತ್ರಸುಖ ಉತ್ತಮ. ಪ್ರವಾಸ ತೊಂದರೆಯದು, ಭೆಟ್ಟಿಯ ಕೆಲಸ ಬಹಳ ಶ್ರಮದಿಂದ ಮನಸ್ಸಿನಂತೆ. ಆದರೆ ಪತ್ರ ವ್ಯವಹಾರ ಮತ್ತು ಲೇಖನದ ಕೆಲಸಗಳೂ ಉತ್ತಮ. ಭರಣಿಗೆ ತೊಂದರೆ ಕಡಮೆ. ತಾ. ೨೮, ೨೯, ೩೦, ೩೧ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೇ ಆದರೆ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಮಿತ್ರಸುಖ ಬಹಳ ಉತ್ತಮ. ದೊಡ್ಡ ಜನರೊಡನೆ ವಿಶೇಷ ಮಹತ್ವದ ಮಾತುಕತೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ವಿದ್ಯೆಯಲ್ಲಿ ಇಲ್ಲವೆ ಬುದ್ಧಿವಿಷಯಕ ಮಾತುಗಳಲ್ಲಿ ಒಳ್ಳೆ ಪ್ರಭಾವ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಗೆ ಹೆಚ್ಚು ಅನುಕೂಲ. ತಾ. ೨೬, ೨೭, ೩೧, ೧ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳದು ಕೆಡುವದು. ಅಲ್ಲದೆ ಹೆಂಡತಿಗೂಡ ಮೇಲಿಂದ ಮೇಲೆ ಮತಭೇದ. ಉದ್ಯೋಗದಲ್ಲಿ ಪ್ರಗತಿ ಒಳ್ಳೆಯದು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ವಿಷಯಗಳಲ್ಲಿ ವಿರೋಧಿಗಳಿಂದ ಸ್ವಲ್ಪ ಅಕ್ಷೇಪ ಬಂದು ಬಹಳ ಗೊಂದಲವೇಳುವದು. ಮಿತ್ರರಿಂದಲೂ ಅಪ್ರತಿಷ್ಠೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಡುವದು. ವರಿಷ್ಠರು ಇಲ್ಲವೆ ಅಶ್ರಯದಾತರಿಂದ ನಿಮ್ಮ ಬಗ್ಗೆ ಬಹಳ ತಪ್ಪು ತಿಳುವಳಿಕೆ. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅರಿದ್ರೆಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸಾಧಾರಣವೇ ಆದರೆ ಮಕ್ಕಳದು ಉತ್ತಮ. ಮನೆಯಲ್ಲಿ ಕಲಹ ಸಾವಕಾಶವಾಗಿ ತಲೆಯೆತ್ತುವದು. ಅಪ್ತರಿಂದ ಶುಭಕೃತ್ಯಗಳಲ್ಲಿನೀಗ ದಷ್ಟು ವೆಚ್ಚ ಮಾಡುವ ಬಗ್ಗೆ ದುರಾಗ್ರಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭ ಬಹಳ ಮಟ್ಟಿಗೆ ಸಮಾಧಾನಕರವಾಗುವದು ಕಠಿಣವೆ. ಮಿತ್ರರಿಂದ ಮಾನಭಂಗ ಇಲ್ಲವೆ ವಿಪರೀತ ಕೃತ್ಯಗಳ ಆರೋಪ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಷ್ಟಸಾಧ್ಯ. ಸ್ಥಿತಿ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪುಷ್ಯಕ್ಕೆ ತೊಂದರೆ ಹೆಚ್ಚು. ತಾ. ೨೬, ೨೭, ೨೮ ಅನುಕೂಲ.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಸಾಧಾರಣವೇ ಆದರೆ ಹೆಂಡತಿಯದು. ಅನುಕೂಲ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಮನಸ್ಸಿಗೆ ಎಲ್ಲ ಬಗೆಯಿಂದ ಒಂದು ತರದ ಹೊರಹುರಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆಯ ಲಕ್ಷಣಗಳು. ಮಿತ್ರಸುಖ ಅನುಕೂಲ. ಸ್ವಲ್ಪ ಕಾರಣಕ್ಕಾಗಿ ನಿಮ್ಮ ಧೈರ್ಯ ಗಲಿತವಾಗುವ ಸಂಭವ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಪೂರ್ವಾಕ್ಕೆ ತೊಂದರೆಯಿಂದಲೇ ಯಶಸ್ಸು. ತಾ. ೨೯, ೩೦, ೩೧, ೧ ಅನುಕೂಲ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳ ಪ್ರಕೃತಿ ಮಾತ್ರ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ವೆಚ್ಚದ ಪ್ರಮಾಣ ಬೆಳೆಯುತ್ತಲೆ ನಡೆಯುವದು. ಮಿತ್ರಸುಖ ಉತ್ತಮ. ಬಂಧುವರ್ಗದವರಿಂದ ಬಹಳ ಪ್ರಿಯ ಸಂಗತಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ಅನುಕೂಲತೆ ನಿಶ್ಚಿತ. ಪ್ರವಾಸಾದಿ ಕೆಲಸ ಬಹಳ ಹಿತಕರ. ಹಸ್ತಾಕ್ಕೆ ತೊಂದರೆ ಕಡಮೆ. ತಾ. ೨೬, ೨೭, ೩೧, ೧ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಆದರೆ ಹೆಂಡತಿಗೆ ಸ್ವಲ್ಪ ಕಾಯಿಲೆ. ಮಕ್ಕಳಲ್ಲಿ ಬಹಳ ಅನುಕೂಲ ಸಂಗತಿಗಳ ವಾತಾವರಣ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಉತ್ತಮ ಪ್ರಗತಿ. ಆದರೆ ಪ್ರತಿಷ್ಠೆ ಮತ್ತು ಲಾಭ ಅಂದಾಜಿಗಿಂತ ಕಡಮೆಯೇ. ವೆಚ್ಚದ ಪ್ರಮಾಣ ಮೀರಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಗೆ ತೊಂದರೆ ಕಡಮೆ. ತಾ. ೨೮, ೨೯, ೩೦ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಆದರೆ ಸ್ತ್ರೀಸುಖ ಕಡಮೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಅನುಕೂಲ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಮತ್ತು ಬಹಳ ಅವಚಿತ ಲಾಭದ ಸಂಭವ. ಪರಸ್ತ್ರೀ ಬಗ್ಗೆ ಕುಬುದ್ಧಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಅನುಕೂಲ. ಅನುರಾಧೆಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೩೧, ೧ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ ಆದರೆ ಸ್ತ್ರೀ ಸುಖ ಅನುಕೂಲ. ಮಕ್ಕಳಿಂದ ಕಿಂಚಿತ್ ತೊಂದರೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಕಡಮೆಯಾಗುತ್ತಾ ಹೋಗುವ ಚಿನ್ಹ. ಸ್ಥಾವರದಲ್ಲಿ ಲೋಕದೃಷ್ಟಿಯಿಂದ ಹಾನಿ. ಆದರೆ ನಿಮ್ಮ ದೃಷ್ಟಿಯಿಂದ ಪೂರ್ಣ ಲಾಭದ ಕೆಲ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ಆದರೆ ವೆಚ್ಚ ಅವಾಸ್ತವ. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಪೂರ್ವಾಷಾಢಾಕ್ಕೆ ತೊಂದರೆ ಕಡಮೆ. ತಾ. ೨೮, ೨೯, ೩೦ ಅನುಕೂಲ,

ಮಕರ

ಪ್ರಕೃತಿ ಸಾಧಾರಣವೇ. ಹೆಂಡತಿಯ ಪ್ರಕೃತಿ ಅನುಕೂಲ ಆದರೆ ಉಭಯತರಲ್ಲಿ ಮಕ್ಕಳ ವರ್ತನೆಯ ಬಗ್ಗೆ ತೀವ್ರಮತಭೇದ. ಅಪ್ತರು ಮತ್ತು ನೆರೆಯವರಿಂದ ಬಹಳ ಉಪದ್ರವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ. ಆದರೆ ಲಾಭ ಉತ್ತಮ. ನೋಕರರಿಗೆ ಮಾತ್ರ ಅಧಿಕಾರ ಹೆಚ್ಚಳದ ಮತ್ತು ಲೋಕಗೌರವದ ಬಹಳ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು. ಪ್ರವಾಸಾದಿ ಕೆಲಸ ತೊಂದರೆಯದು. ಶ್ರವಣಕ್ಕೆ ತೊಂದರೆ ಕಡಿಮೆ. ತಾ. ೨೬, ೨೭, ೩೧, ೧ ಅನುಕೂಲ.

ಕುಂಭ

ಪ್ರಕೃತಿ ನಿಮ್ಮದು ಅನುಕೂಲ ಆದರೆ ಹೆಂಡತಿಯದು ಬಹಳ ಕೆಡುವ ಸಂಭವ. ಅಲ್ಲದೆ ನಿಮ್ಮ ನಿಮ್ಮಲ್ಲಿ ಆದರ ಮತ್ತು ಮತ್ಸೈಕ್ಯ ಕಡಿಮೆ ಉದ್ಯೋಗದಲ್ಲಿ ಪ್ರಗತಿ ಬಹಳ ಉತ್ತಮ. ಲಾಭವು ಸರಾಸರಿ ಅಂದಾಜಿನಷ್ಟೇ ಆದರೆ ಪ್ರತಿಷ್ಠೆಯ ವಿಷಯದಲ್ಲಿ ಬಹಳ ಪ್ರತಿಕೂಲ ಘಟನೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಅಷ್ಟೇಜೋರು. ಭೆಟ್ಟಿಗಿಂತಲೂ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಕೆಗೆ ತೊಂದರೆ ಕಡಮೆ ತಾ. ೨೬—೨೭—೨೮ ಅನುಕೂಲ.

ಮೀನ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮತ್ತು ಬಹುಶಃ ಉಳಿದವರ ಗೂಡ ಮೇಲಿಂದ ಮೇಲೆ ಮತಭೇದವಾಗುವದರಿಂದ ಪ್ರಾಪಂಚಿಕ ಸಮಾಧಾನ ಕಡಮೆಯೆ. ಸ್ಥಾವರದಲ್ಲಿ ಕೆಲ ಅನುಕೂಲ ಸಂಗತಿಗಳು. ಸ್ತ್ರೀ ವರ್ಗದಲ್ಲಿ ಹೆಚ್ಚು ಆದರ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಲಾಭಕ್ಕಿಂತ ಹೆಚ್ಚು. ವಾದದಲ್ಲಿ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದಕ್ಕೆ ತೊಂದರೆಯಿಂದಲೆ ಯಶಸ್ಸು ತಾ.೨೬, ೨೭, ೨೮, ೨೯ ಅನುಕೂಲ.

ಶಿವಕಾಶಿ

(೨ ನೆಯ ಪುಟದಿಂದ)

ನೀವು ನಿಮ್ಮ ಅಣ್ಣಂದಿರ ಬಯಕೆಯಂತೆ ಬದಾಮಿಗೆ ಹೋಗಬೇಕಿದ್ದಿತು. ಇಲ್ಲೇಕೆ ನಿಂತಿರಿ? ನನ್ನನ್ನೇಕೆ ಕಂಡಿರಿ?

ಈಗ ಹೋಗುವೆ.

ಇದು ಎಂದಿಗೂ ಸಾಧ್ಯವಿಲ್ಲ. ನೀವು ನಿಲ್ಲಬೇಕು. ಪರಿಣಾಮದ ಹಣೆಯ ಬರೆಹವನ್ನು ಇಬ್ಬರೂ ನೋಡುವ.

ಶಿವಕಾಶಿ...

ಲಕ್ಷ್ಮೀಕಾಂತ, ಇದೇ ಯೋಗ್ಯ.

ದೂರದಿಂದ ಲಕ್ಷ್ಮೀಕಾಂತನೆಂದು ಯಾರೋ ಕೂಗಿದಂತಾಯಿತು. ಇಬ್ಬರೂ ಆ ಕಡೆಗೆ ಮುಖವೆತ್ತಿ ನೋಡಿದರು. ಆತ್ಮಾರಾಮನು ಗಿಡದ ಮರೆಯಲ್ಲಿ ಬರುತ್ತಿದ್ದನು. ಎದ್ದು ನಿಂತರು.

ಲಕ್ಷ್ಮೀಕಾಂತ, ಮುಂಜಾವಿನಿಂದ ಮನೆಯಲ್ಲಿಲ್ಲ. ನಾನು ಹುಡುಕಿ ಬೇಸತ್ತಿರುವೆ. ಆತ್ಮಾರಾಮನು ನುಡಿದನು.

ಇಡೀ ದಿನ ಮನೆಯಲ್ಲಿಲ್ಲವೇ ? ಶಿವಕಾಶಿ ಕೇಳಿದಳು.

ಅದೂ ಉಪವಾಸ.

ಅಣ್ಣಾ, ಈಗ ಮನೆಗೆ ಬರುವೆ, ನಡೆ ಎಂದು ಎದ್ದನು.

ನಾಳೆ ಚಿತ್ರವನ್ನು ಒಪ್ಪಿಸಬೇಕಷ್ಟೇ ? ಆತ್ಮಾರಾಮನು ಕೇಳಿದನು. ಲಕ್ಷ್ಮೀಕಾಂತನು ಮಾತಾಡಲಿಲ್ಲ.

ಆಗಬಹುದು. ಶಿವಕಾಶಿ ಭಾರವಾದ ದನಿಯಲ್ಲಿ ನುಡಿದಳು. ಅಣ್ಣ—ತಮ್ಮಂದಿರು ಮನೆಗೆ ಬಂದರು. ತಮ್ಮನು ಬಂದು ಚಿತ್ರದ ಮಾತನ್ನೇ ಆಡಲಿಲ್ಲ. ಅಣ್ಣನು ತನ್ನ ಕೆಲಸದಲ್ಲಿ ತೊಡಗಿದನು.

ಮರು ದಿನ ಶಿವಕಾಶಿಯ ಮನೆಯಲ್ಲಿ ಕೆಲ ಪ್ರತಿಷ್ಠಿತರು, ತಂದೆ, ತಾಯಿ ನೆರೆದು ಫಲಿತಾಂಶದ ನಿರೀಕ್ಷಣೆಯಲ್ಲಿ ಮಗ್ನರಾದರು. ಶಿವಕಾಶಿ ವಿಶೇಷ ಆಡಂಬರವಿಲ್ಲದೆ ಮೌನವಾಗಿ ಒಂದೆಡೆಗೆ ಕುಳಿತಳು. ಆತ್ಮಾರಾಮ, ಲಕ್ಷ್ಮೀಕಾಂತರೂ ಬಂದರು.

ಆತ್ಮನ ಮುಖದಲ್ಲಿ ಗೆಲುವಿನ ನಾಂಕೇರ್ಯವಿದ್ದಿತು.

ತಮ್ಮನ ಮುಖದಲ್ಲಿ ಸೋಲಿನ ಚಿಹ್ನೆಯಿದ್ದಿತು.

ಆತ್ಮಾರಾಮನು ತನ್ನ ಚಿತ್ರವನ್ನು ಬಂದು ಮೇಲಿಟ್ಟು ಒಂದು ಕಡೆಗೆ ಕುಳಿತನು. ಲಕ್ಷ್ಮೀಕಾಂತನು ಹಿಂದುಗಡೆ ಅವನ ನೆರಳಿನ ಆಶ್ರಯ ಹೊಂದಿದನು.

ತಂದೆಯವರು ಚಿತ್ರವನ್ನು ಕೈಗೆ ತೆಗೆದುಕೊಂಡು ಹೊದಿಕೆಯನ್ನು ತೆಗೆದರು. ನೋಡಿದರು, ಆಶ್ಚರ್ಯ! ತಮ್ಮ ಮಗಳ ಚಿತ್ರ! ಬಳಿಯಲ್ಲಿ ಲಕ್ಷ್ಮೀಕಾಂತ! ಚಿತ್ರದ ಕೆಳಗೆ "ಪೂಜಾರಿಗಳು." ತಂದೆಯವರಿಗೆ ಅರ್ಥವಾಗಲಿಲ್ಲ. ಹಿರಿಯರ ಕೈಯಲ್ಲಿ ಕೊಟ್ಟರು. ಅವರಿಗೂ ಗೊತ್ತಾಗಲಿಲ್ಲ. ಶಿವಕಾಶಿಯ ಕೈಗೆ ಬಂದಿತು. ನೋಡಿದಳು. ಶಿಕ್ಷಕಾಮ-ಲಕ್ಷ್ಮೀಕಾಂತನು ಕುಳಿತು ಪರಟಿ ಹೊಡೆಯುವ ಸ್ಥಳವೇ ಮೂಡಿದೆ. ಅದೇ ಅವು. ಶಿಕ್ಷದ ಚಿತ್ರ ಚಿರಂತನವಾಗಿ ನಿಂತಿದೆ. ಹೆಸರು— ಪೂಜಾರಿಗಳು! ಯಾವ ದೇವತೆಯ ಪೂಜಾರಿಗಳು? ಚಿತ್ರವು ಯೋಗ್ಯವೆನಿಸಿತು. ಅಯೋಗ್ಯವೆನ್ನಲು ಕಾರಣವಿರಲಿಲ್ಲ. ಪರೀಕ್ಷೆಯ ಫಲಿತಾಂಶವನ್ನು ಆತ್ಮಾರಾಮನೇ ನಿರೂಪಿಸಿ ಬಿಟ್ಟಿರುವನು.

ಮನಸಿಗೆ ಬಂದಿತೇ? ತಂದೆ ಕೇಳಿದರು.

ಶಿವಕಾಶಿಯು ಮಾಲೆಯನ್ನು ಎತ್ತಿಕೊಂಡು ಆತ್ಮಾರಾಮನ ಬಳಿಗೆ ಹೋದಳು. ಕಣ್ಣಲ್ಲಿ ಬೆಳಕಿರಲಿಲ್ಲ.

ಆತ್ಮಾರಾಮನು ಎದ್ದು—ಒಂದಿಷ್ಟು ನಿಲ್ಲಿರಿ ಎಂದನು.

ಶಿವಕಾಶಿ ಕಲ್ಲು ಗೊಂಬೆಯಂತೆ ನಿಂತಳು.

ನೀವು ಚಿತ್ರಕಲೆಯಲ್ಲಿ ನನ್ನನ್ನು ಪ್ರಶಂಸಿಸುವ ಪೂರ್ವದಲ್ಲಿ ನಾನೊಂದು ಕೆಲಸವನ್ನು ಮಾಡಬೇಕು. ಅದನ್ನು ನೀವು ಒಪ್ಪಬೇಕು. ನನ್ನ ಚಿತ್ರವು ನಿಮ್ಮ ಮನಸಿಗೆ ಬಂದಿತೆಂದರೆ ನಾನೂ ಮನಸಿಗೆ ಬಂದೆನೆಂತಲ್ಲ, ಮತ್ತು ನೀವೂ ನನ್ನ ಮನಸಿಗೆ ಬಂದಿರೆಂತಲ್ಲ. ನಾನು ಚಿತ್ರಕಲೆಯನ್ನೇ ಪ್ರೀತಿಸುವೆ ಹೊರತು ಆ ವಿದ್ಯೆಯನ್ನು ಒಂದು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು ಇನ್ನೊಂದರ ಬಗೆ ಕೃತ್ರಿಮ ಪ್ರೀತಿಯನ್ನು ತೋರಿಸಲಾರೆ. ಈ ಪ್ರಶಂಸಾಚಿತ್ರಕ್ಕೆ ನೀವೂ ನನ್ನ ತಮ್ಮನೂ ಕಾರಣರು. ಅಥವಾ ಉತ್ಸಾಹಜನಕರು. ಅದಕ್ಕೆ ನೀವು ಅವನನ್ನು ವರಿಸಬೇಕು. ಇದು ನನ್ನಿಚ್ಛೆ. ನನ್ನ ಪಾಲಿಗೆ ಒಂದು ಪ್ರಶಂಸೆಯಾದರೆ ಸಾಕು ಎಂದು ನುಡಿದನು.

ಶಿವಕಾಶಿ ಹಾಗೆಯೇ ನಿಂತಳು.

ಲಕ್ಷ್ಮೀಕಾಂತ, ಇಲ್ಲಿ ಬಾ! ಎಂದು ಕರೆದನು.

ಅವನು ಬಂದನು.

ನಿಮ್ಮಿಬ್ಬರ ಪ್ರೇಮವು ಅಖಂಡವಾಗಿರಲಿ ದೇವರು ನಿಮಗೆ ಚಿರಕಾಲ ಸುಖಶಾಂತಿಯನ್ನೀಯಲಿ ಎಂದು ಶಿವಕಾಶಿಯಿಂದ ತಮ್ಮನ ಕೊರಳಿಗೆ ಮಾಲೆಯನ್ನು ಹಾಕಿಸಿದನು. ಹಾಗೂ ನನಗೆ ಕೆಲಸ ಬಹಳುಂಟು, ಹೋಗುವೆ ಎಂದು ಬಾಗಿಲ ಕಡೆಗೆ ನಡೆದನು.

ಅಣ್ಣ . . .

ನಾನು ಬದಾಮಿ ಗುಹ್ಯಗಳನ್ನು ನೋಡಿ ತಿರುಗಿಬರುವೆ. ಆ ಸಮಯದಲ್ಲಿ ಒಂದೆರಡು ದಿನ ನಿಲ್ಲುವೆ. ದಂಪತಿಗಳಿಗೆ ದೇವರು ದಯಮಾಡಲಿ ಎಂದು ಹೋಗಿಯೇಬಿಟ್ಟನು.

ಆತ್ಮಾರಾಮನ ತ್ಯಾಗ! ಮೂಲಕ ಲಕ್ಷ್ಮೀಕಾಂತನು ಸೋತೂಗೆದ್ದನು. ಶಿವಕಾಶಿ ಸೋತವನನ್ನೇ ವರಿಸಿ ತನ್ನ ಪಾಲಿಕ್ಕೆ ಪ್ರಣಯ ಗೆಲವು ತಂದಿತೆಂದು ಸುಖಿಸಿದಳು.

● ನೆಹರಾಡೂನದ ಒಂದು ಹಳ್ಳಿಯಲ್ಲಿ ಹಾವು ಕಡಿದ ಕುರಿಯ ಮಾಂಸ ಊಟಕ್ಕೆ ಬಡಿಸಿದ್ದರ ಪರಿಣಾಮವಾಗಿ ೫ ಜನರು ಸತ್ತಿದ್ದು ೧೨ ಜನರು ಅಸ್ವಸ್ಥರಾಗಿರುವರು.

Reg. No. B. 3148

LICENCE No. 3
Licensed to Post without Prepayment

KARMAVEER 26-7-48

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ಧರ್ಮ ದುರಂತ

ಲೇಖಕರು: ಶ್ರೀ ಎಂ. ಆರ್. ಶ್ರೀ. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು. ೧೫೫ ಪುಟ, ಬೆಲೆ: ಸಾದಾ ಪ್ರತಿ ರೂ. ೩/, ಕ್ಯಾಲಿಕೊ ರೂ. ೩—.

ಟಿಪ್ಪೂ ಸುಲ್ತಾನನ ಕೊನೆಯ ದಿನಗಳ ಮತ್ತು ಕೃಷ್ಣದೇವರಾಯರ ಆಳಿಕೆಯ ಪ್ರಾರಂಭದ ಸನ್ನಿವೇಶವೊಂದನ್ನು ಆಧಾರವಾಗಿಟ್ಟು ಬರೆದ ೫ ಅಂಕಗಳ ಸರಳರಗಳೆಯ ನಾಟಕವಿದು. ಬ್ರಾಹ್ಮಣ ಯುವಕನೊಬ್ಬನು ಟಿಪ್ಪು ಸುಲ್ತಾನನ ಕಡೆಯವರಿಂದ ಬಲಾತ್ಕಾರದಿಂದ ಮುಸಲ್ಮಾನ ಧರ್ಮಕ್ಕೆ ಸೇರಲ್ಪಟ್ಟು ಟಿಪ್ಪುವಿಗೆ ಬೇಕಾದವನಾಗಿ ಸೈನ್ಯದಲ್ಲಿ ಸರದಾರನಾಗಿರುತ್ತಾನೆ. ಕೊನೆಯ ಮೈಸೂರು ಕದನದಲ್ಲಿ ಟಿಪ್ಪುವಿನ ಎಡಬಲದಲ್ಲ ಹೋರಾಡಿ ಮೂರ್ಚ್ಛಿತನಾಗುತ್ತಾನೆ. ಅವನನ್ನು ಮೌಲಾನನೊಬ್ಬನು ಒಯ್ದು ಆರೈಕೆ ಮಾಡುತ್ತಾನೆ. ಅವನ ಮಗಳಿಗೆ ಅವನಲ್ಲಿ ಪ್ರೀತಿ ಉತ್ಪನ್ನವಾಗುತ್ತದೆ. ಅವನೂ ಅವಳಲ್ಲಿ ಅನುರಕ್ತನಾಗುತ್ತಾನೆ. ಇತ್ತ ಅವನ ಪೂರ್ವ ಜಾತಿಯ ಹೆಂಡತಿ ಲಲಿತೆ ಅವನನ್ನು ಐದು ವರ್ಷಗಳಿಂದ ಹುಡುಕಿ ಸುತ್ತಿ ಅಕಸ್ಮಾತ್ತಾಗಿ ಮೌಲಾನನ ಮನೆಯಲ್ಲಿ ಅವನನ್ನು ಕಾಣುವಳು. ಹಿಂದೂ ರಾಜ್ಯಸ್ಥಾಪಿತವಾದುದರಿಂದಲೂ ಹಿಂದೂ ಹೆಂಡತಿಯ ಪುನರ್ದರ್ಶನವಾದುದರಿಂದಲೂ ಪುನಃ ಅವನಲ್ಲಿ ಬ್ರಾಹ್ಮಣ್ಯದ ವಾಸನೆ ಮೂಡಿ ಪ್ರಾಯಶ್ಚಿತ್ತದಿಂದ ಪುನಃ ಪೂರ್ವ ಜಾತಿಗೆ ಸೇರಬಯಸುವನು. ದಿವಾನ ಪೂರ್ಣಯ್ಯನವರು ಈ ಬಗ್ಗೆ ಮಠದವರ ಸಭೆ ನೆರೆಯಿಸುವರು. ಪಂಡಿತರು ಅವನನ್ನು ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳಲು ಒಪ್ಪಿದರೂ ಪೂರ್ವದ ಬ್ರಾಹ್ಮಣ ತರಗತಿಯನ್ನು ಕೊಡಲೊಪ್ಪುವದಿಲ್ಲ. ಹಂಗಿನ ಬ್ರಾಹ್ಮಣ್ಯಕ್ಕಿಂತ ಸ್ವಾಭಿಮಾನದ ಮುಸ್ಲಿಮತ್ವವೇ ಮೇಲೆಂದು ಅವನು ನಿರ್ಧರಿಸುವನು. ಗಂಡ, ಮುಸ್ಲಿಮನಾದುದು ಮುಸ್ಲಿಮ ತರುಣಿಯಲ್ಲಿ ಅವನ ಅನುರಾಗ ಮೊದಲಾದ ನಿರಾಶಾಜನಕ ಸಂಗತಿಗಳಿಂದ ಅವನ ಬ್ರಾಹ್ಮಣ ಹೆಂಡತಿ ಕಾವೇರಿಯಲ್ಲಿ ಬೀಳುವಳು-ಅವಳನ್ನು ಅವನು ಅಲ್ಲಿಂದ ಪಾರು ಮಾಡಿಕೊಂಡು ಬರುವನು. ಮೌಲಾನನ ಮನೆಯಲ್ಲಿ ಕೊನೆಯ ಸನ್ನಿವೇಶ. ತನ್ನ ಪ್ರಿಯಕರನನ್ನು ಬ್ರಾಹ್ಮಣನಾಗಿ ತನ್ನನ್ನು ಮರೆಯುವ ನೆಂಬ ವ್ಯಥೆಯಿಂದ ಮುಸ್ಲಿಮ ತರುಣಿ ಜ್ವರಗ್ರಸ್ತಳಾಗಿ ಸಾಯಲಾಗಿರುವಳು. ಬ್ರಾಹ್ಮಣ ಹೆಂಡತಿಯನ್ನೊ ಅವನು ಅಲ್ಲಿಗೇ ತರುವನು. ಆದರೆ ಅವಳೂ ಬದುಕುವದಿಲ್ಲ. ಮುಸ್ಲಿಮ ತರುಣಿಯೂ ಅಗಲೆ ಸಾಯುವಳು. ಇವೆಲ್ಲದರಿಂದ ತರುಣನೂ ಎದೆಯೊಡೆದು ಸಾಯುವನು. ಹೀಗೆ ಇದೊಂದು ದುರಾದುರಂತ ಕಥೆ.

ಲೇಖಕರ "ನಾಗರಿಕ"ದಲ್ಲಿ ಮಾಡಿದಂತೆ ಈ ನಾಟಕದಲ್ಲೂ ದೊಡ್ಡನ್ನು ಪರಿಣಾಮಕರ ಭಾಷೆಯಲ್ಲಿ ವ್ಯಕ್ತಗೊಳಿಸುವ ಅವರ ಶಕ್ತಿ ಅವರಿಗೆ ತುಂಬ ಸಹಾಯ ಮಾಡಿದೆ. ಕೊನೆಯ ಭಾಗದಲ್ಲಿನಡೆಯುವಬ್ರಾಹ್ಮಣ—ಖಾನ್ ಜಹಾನ ಸಂವಾದದಲ್ಲಿ ಇದು ಎದ್ದು ಕಾಣುತ್ತದೆ. ಖಾನ್ ಜಹಾನ್ (ನಾಯಕ) ಆಯೆಷಾ (ಮುಸ್ಲಿಂ ಪ್ರೇಮಿಕೆ) ಇವರ ಸ್ನೇಹವಾದ ತುಂಬ ಸ್ವಾರಸ್ಯವಾಗಿದೆ. ತರ್ಕ ಪಂಡಿತನ ಉಪನಿಸ್ಸಿವೇಶದಿಂದ ನಾಟಕದ ಕಳೆಯೇರಿದೆ. ಆದರೆ ಕೊನೆಯ ದೃಶ್ಯದಲ್ಲಿ "ಶೇಕ್ಸಪಿಯರಿಯನ್ ಮಹಾದುರಂತ"ವನ್ನು ನಿರ್ಮಿಸಲು ಲೇಖಕರು ಪ್ರಯತ್ನಿಸಿ ಮೂಲ ಕಥಾಸನ್ನಿವೇಶವನ್ನು ಬದಲಿಸಿದ್ದು ಆಧುನಿಕ ಬುದ್ಧಿಗೆ ಹಿಡಿಸು ಅನವಶ್ಯಕ ಹೀನೆಯನ್ನು ಮುಟ್ಟಿದ ಅತಿರೇಕವೆಂದು ತೋರದಿರದು. ಕಾಲಂತಾರಿ ಅಧಿನಾ ಬಲಾತ್ಕಾರಕ್ಕೊಳಗಾಗಿ ಅನ್ಯಮತಾವಲಂಬಿಗಳಾದವರನ್ನು ತಿರುಗಿ ಬರಗೊಡದೆ ಧರ್ಮಶಾಸ್ತ್ರದ ಹೆಸರಲ್ಲಿ ನಿರ್ದಯತೆಯಿಂದ ಹೊರಗಿರಿಸ ಹಿಂದೂ ಪಂಡಿತರ ಧೂರ್ತತೆಯಿಂದ ಹೀನವಾದ ತರ್ಕದ ಫಲವಾಗಿಯೆ ಇಂದು ಹಿಂದುಗಳ ಗತಿ ಹೀಗಾಗಿದೆಯೆಂದು ಲೇಖಕರು ಮನಮುಟ್ಟುವಂತೆ ತೋರಿಸಿಕೊಟ್ಟಿದ್ದಾರೆ. ಜ್ಞಾನಜಹಾನನು ಕೊಟ್ಟ ಶಾಪ ಇಂದು ನಿಜವಾಗಿದೆ. ಅವಶ್ಯ ಓದಬೇಕಾದ ಪುಸ್ತಕವಿದು.

ಬುದ್ಧ ಜಾತಕಗಳು

ಬರೆದವರು: ಶ್ರೀ. ಸಾಲಿ ರಾಮಚಂದ್ರರಾಯರು. ಪ್ರಕಾಶಕರು : ಮಿಂಚಿನಬಳ್ಳಿ ಧಾರವಾಡ. ಕ್ರೌನ್ ಅ. ಪ. ೧೪೯ ಪುಟ, ರೂ. ೨.

ಬೌದ್ಧ ಧಾರ್ಮಿಕ ಸಾಹಿತ್ಯದ "ತ್ರಿಪುಟಿ"ಯಲ್ಲಿ "ಜಾತಕ"ಗಳೂ ಒಂದು. ಭಾರತೀಯ ಕಥಾ ಸಾಹಿತ್ಯದ ಅತಿ ಪ್ರಾಚೀನ ಉದಾಹರಣೆಗಳಲ್ಲಿ ಈ ಜಾತಕ ಕಥೆಗಳನ್ನು ಸೇರಿಸಬಹುದು. ಕಥೆಯ ರೂಪದಲ್ಲಿ ನೀತಿ, ವ್ಯವಹಾರ, ಧರ್ಮಗಳನ್ನು ಬೋಧಿಸಿ ಬುದ್ಧನು ಜನರಲ್ಲಿ ಧರ್ಮಬುದ್ಧಿಯನ್ನು ಜಾಗ್ರತಗೊಳಿಸುತ್ತಿದ್ದನು. ಬುದ್ಧನ ಕಾಲಾನಂತರ ಅವುಗಳನ್ನು ಅವನ ಶಿಷ್ಯಪರಂಪರೆಯವರಾರೋ ಸಂಗ್ರಹಿಸಿರಬೇಕು. ಪಾಲಿ ಭಾಷೆಯಲ್ಲಿರುವ ಈ ಸಾಹಿತ್ಯ ಮನೋರಂಜನೆಗಾಗಿ ಬರೆಯಲ್ಪಟ್ಟಿಲ್ಲವಾದರೂ ಜಾಗತಿಕ ಕಥಾಸಾಹಿತ್ಯದ ಮೇಲೆ ಇದರ ಪರಿಣಾಮ ಎಷ್ಟಾಗಿದೆಯೆಂದು ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯವಾದ "ಇಸೋಪನ ನೀತಿಕಥೆ"ಗಳಿಗೆ "ಜಾತಕ"ಗಳೇ ಆಧಾರವೆಂಬದರಿಂದ ತಿಳಿಯುತ್ತದೆ. ಶ್ರೀ. ಸಾಲಿಯವರ ಪಾಲಿ ಅಭ್ಯಾಸದ ಪರಿಣಾಮವಾಗಿ ಈ ಸಂಗ್ರಹ ಕನ್ನಡಿಗರಿಗೆ ಲಭಿಸಿದೆ. ಬೇಸರಕ್ಕೆ ಕಾರಣವಾಗಬಹುದಾದ ಅಂಶಗಳನ್ನು ತೆಗೆದುಹಾಕಿ ೫೦ ಉತ್ತಮ ಜಾತಕ ಕಥೆಗಳನ್ನು ಇಲ್ಲಿ ಲೇಖಕರು ಕೊಟ್ಟಿದ್ದಾರೆ. ಅವೆಲ್ಲವೂ ಸ್ವಾರಸ್ಯವಾಗಿವೆ. ಬೌದ್ಧ ಸಾಹಿತ್ಯವನ್ನು ಕನ್ನಡಿಗರಿಗೆ ಶ್ರೀ. ಜಿ. ಪಿ. ರಾಜರತ್ನರು ಈ ವರೆಗೆ ಒದಗಿಸುತಿದ್ದರು. ಶ್ರೀ. ಸಾಲಿಯವರೂ ಈ ಪ್ರಯತ್ನದಲ್ಲಿ ನಿರತರಾದುದು ಸೌಭಾಗ್ಯವೆನ್ನಬೇಕು.

ಕರ್ಮಯೋಗಿ

ಲೇಖಕರು : ತಿರುಕ, ಪ್ರಕಾಶಕರು: ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲಕೆರೆ ತಾಲೂಕು (ಮೈಸೂರು ಸಂಸ್ಥಾನ) ೧೩೭ ಪುಟ, ರೂ. ೧/೮

"ಕರ್ಮಯೋಗಿ" ರೈತನನ್ನು ಗೌಡ, ಸಾಹುಕಾರ, ಅಯ್ಯ, ಇವರೆಲ್ಲ ಸೇರಿ ಹೇಗೆ ಸುಲಿದು ತೊಂದರೆ ಕೊಡುವರೆಂದು ತೋರಿಸಲು ಈ ನಾಟಕ ಬರೆಯಲಾಗಿದೆ. ಹಳ್ಳಿಯ ಭಾಷೆಯಲ್ಲಿ ಬರೆಯಹೋಗಿ ಗ್ರಾಮ್ಯವೂ ಅಲ್ಲ ಗ್ರಾಂಥಿಕವೂ ಅಲ್ಲವೆಂಬ ಅಸ್ವಾಭಾವಿಕ ಭಾಷೆಯೊಂದು ಇಲ್ಲಿ ಹುಟ್ಟಿದೆ. ಹಳೆ ಮಾದರಿಯ ಸಂಗೀತನಾಟಕ. ರೀತಿಯಲ್ಲಾಗಲಿ, ಸನ್ನಿವೇಶದಲ್ಲಾಗಲಿ ಕಲ್ಪನಾವೈಖರಿ ಕಾಣುವದಿಲ್ಲ.

ದೇಹಜ್ಯೋತಿಗಳು ಮತ್ತು ಪ್ರಾಣಿಪ್ರಬಂಧಗಳು

ಬರೆದವರು ಶಿವರಾಮ ಕಾರಂತರು. ಪ್ರಕಾಶಕರು ವಸಂತ ಮಾಲಿಕೆ, ಕೊಡಿಯಾಲಬೈಲು, ಮಂಗಳೂರು. ಪುಟ ೯೩, ಬೆಲೆ ರೂ. ೧—೨—೦.

ವಸಂತ ಮಾಲಿಕೆಯಲ್ಲಿ ಅಚ್ಚಾದ ಶ್ರೀ ಕಾರಂತರ ಈ ಪುಸ್ತಕದಲ್ಲಿ ವಿವಿಧ ರೀತಿಯ ನಾಗರಿಕ ಮುಂದಾಳುಗಳ ನರ್ತನೆಯ ಚಿತ್ರಗಳನ್ನು ಕಾಣಬಹುದು. ೧ ನೆಯ, ನೇಪ ದಿವಾನ್ ಬಹದ್ದೂರ್ ನಿಗಂಬರರಾಯರದು, ೨ ನೆಯದು ರಾವ್‌ಸಾಹೇಬ್ ರಾಮಚಂದ್ರಯ್ಯನವರದು, ೩ ನೆಯದು ಮಿಸೆಸ್ ಗ್ರೇಸಿ ಫರ್ನಾಂಡೀಸ್‌ರದು, ೪ ನೆಯದು ಕನ್ನಡ ಕೇಸರಿ ಕಂಠಾಬಾಯಿಕುಮಾರಯ್ಯನವರದು, ೫ ನೆಯದು ಗವಯಿ ಗಣಪತಿಯದು, ೬ ನೆಯದು ಸಾವುಕಾರ ನಾಗೇಂದ್ರ ಪೈಗಳದು, ೭ ನೆಯದು ಆರ್ಯಸಮಾಜದ ಅರವಿಂದರಾಯರದು, ಕಡೆಯದಾಗಿ ೮ ನೆಯದು ಮ್ಯುನಿಸಿಪಲ್ ಕೌನ್ಸಿಲರ್ ಮೃತ್ಯುಂಜಯರಾಯರದು. ಈ ವ್ಯಕ್ತಿಗಳು ಮಾದರಿಯವಷ್ಟೇ. ಇಂಥವರು ನಮ್ಮ ಎಡಬಲಕ್ಕೆ ಕಣ್ಣೆತ್ತಿ ನೋಡಿದರೆ ಅನೇಕರಾಗಿ ಸಿಗುತ್ತಾರೆ. ಇವರ ಕಾಪಟ್ಯ ಜೀವನದ ನಾನಾ ಕ್ಷೇತ್ರಗಳಲ್ಲಿ ಕುಣಿಕುಣಿದು ದೀನ ದಲಿತರ ಎದೆಯನ್ನು ಮೆಟ್ಟಿ ನಿಲ್ಲುತ್ತದೆ. ಇಂಥ ವಿಡಂಬನಸೂತ್ರಬದ್ಧವಾದ ಬರಹವನ್ನು ರುಚಿಕಟ್ಟಾಗಿ ಬರೆದು ಕಾರಂತರು ಕನ್ನಡಿಗರಿಗೆ ಉಪಕರಿಸಿದ್ದಾರೆ.

ಹೆಂಗಸರಿಗೆ ಎಷ್ಟು ಗಂಡಂದಿರು ಬೇಕು ?

ಹೆಂಗಸರಿಗೆ ಗಂಡಸರಂತೆಯೇ ಜೀವನ ಸಂಗಾತಿಗಳು ಬಹಳ ಜನರುಬೇಕೆಂದು ಶರೀರ ಶಾಸ್ತ್ರದ ಆಧಾರದ ಮೇಲೆ 'ಫೋರಂ' ಮತ್ತು 'ಸೆಂಚುರಿ' ಎಂಬ ಅಮೇರಿಕದ ಪತ್ರಿಕೆಗಳ ಲೇಖನಗಳು ಬಂದಿವೆ ಇದು ಪ್ರಾಣಿಧರ್ಮದ ಪ್ರಕಾರ ಸತ್ಯವಲ್ಲವಾದರೂ ವಿಲಾಸ ಧರ್ಮದ ಪ್ರಕಾರ ಸತ್ಯವಿರಬಹುದು. ಆದರೆ ರಾಮ ಸೀತೆಯರೆಂಬ ಸತಿವ್ರತ ಪತಿವ್ರತೆಯರನ್ನು ರೂಪಿಸಿದ ಉಚ್ಚ ನಾಗರಿಕತೆಯ ಮನಃಶಾಸ್ತ್ರಕ್ಕೆ ಮೇಲಿನ ತತ್ವವೆಂದೂ ಹಿತಕರವೆನಿಸದು. ಅಹಂಕಾರ ಮಿತವಿದ್ದಲ್ಲಿ ಸ್ವಾಭಿಮಾನವೆನಿಸುವುದು; ಅದು ಅತಿಯಾದರೆ ದುರಭಿಮಾನವಾಗುವದು. ಈ ದುರಭಿಮಾನವು ಸ್ವಾರ್ಥಾತಿರೇಕದೊಡನೆ ಸೇರಿದರೆ ಯಾವ ನರನಾಗಲಿ, ನಾರಿಯಾಗಲಿ ಪಶುತ್ವಕ್ಕಿಳಿದು ತನಗೆ ತಾತ್ಕಾಲಿಕ ಸುಖ ಮತ್ತು ಆತ್ಯಂತಿಕ ದುಃಖವನ್ನೂ ಜೊತೆಯ ವ್ಯಕ್ತಿಗೆ ದೀರ್ಘಕಾಲಿಕ ದುಃಖ ಮತ್ತು ಆತ್ಯಂತಿಕ ಆಧ್ಯಾತ್ಮಿಕ ಸಮಾಧಾನವನ್ನೂ ಉಂಟು ಮಾಡಬಲ್ಲವನಾಗುತ್ತಾನೆ ಎಂಬುದು ತತ್ವಜ್ಞಾನಿಗಳ ಮತ. ಮುಂಬಯಿಯಲ್ಲಿಂದು ಹೆಂಗಸರಿಗೆ ಬಹಳ ಗಂಡಂದಿರನ್ನು ಮದುವೆ ಮಾಡಿಕೊಳ್ಳುವ ಸಮಾನ ಹಕ್ಕನ್ನು ಕೊಡದೆ ಗಂಡಸಿಗಿರುವ ಆ ಹಕ್ಕನ್ನು ಕಸಿದುಕೊಳ್ಳುವ ಕಾಯದೆ ಪಾಸಾಗಿರುವುದು ತತ್ವಶಾಸ್ತ್ರಕ್ಕೆ ಸಮ್ಮತವಾದುದೆಂದೇ ಹೇಳಬಹುದು. ಪರಸ್ಪರ ತ್ಯಾಗ ಮತ್ತು ಪ್ರಾಮಾಣಿಕ ಪ್ರೀತಿಗೆ ಪೋಷಕವಲ್ಲದ ಯಾವ ತತ್ವವೂ ಕಾಯಿದೆಯೂ ನಾಗರಿಕವೆನಿಸದೆಂಬುದನ್ನು ವಿದ್ಯಾವಂತರು ಮನನಮಾಡತಕ್ಕದ್ದು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿಸಿ ಪ್ರಕಟವಾಯಿತು.